ಮಾಡಲು ಪ್ರಯತ್ನ ಪಟ್ಟರೆ ಅದು ದೊಡ್ಡ ಅಪರಾಧವಾಗುತ್ತದೆ. ಈ ದೃಷ್ಟಿಯಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಅದು ಯಾರೇ ಆಗಲಿ ನಾವು ಈ ಪಕ್ಷದವರು ಆಗಲಿ, ಆ ಪಕ್ಷದವರು ಆಗಲಿ ರಾಜ್ಯಾಂಗದಲ್ಲಿ ಈ ಪಕ್ಷ ಆ ಪಕ್ಷ ಅಂತ ಇಲ್ಲ. ಹೌಸ್ ಅಂತಲೇ ಹೇಳಿರತಕ್ಕಂಥಾದ್ದು. ನಮ್ಮ ರೂಲ್ಸ್ ಆಫ್ ಪ್ರೊಸಿಜರ್‌ನಲ್ಲಿ ಕೂಡ ನಾವು ಹೌಸ್ ಅಂತಲೇ ಹೇಳಿರತಕ್ಕಂಥಾದ್ದು, ಆದಕಾರಣ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ I was really purturbed. ಅವರು ಅಲ್ಲಿಯವರೆಗೂ ಬರುತ್ತಾ ಇದ್ದಾರೆಂದು ಹೇಳಿದರೆ ಏಕಾರ ಮನಸ್ಸು ಏನು ಬೇಕಾದರೂ ಮಾಡಬಹುದು, ಹಾಗೆ ಮಾಡಿದಾಗ ತಾವು ಏನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ತಾವು ಸುಮ್ಮನೆ ನಿಸ್ಸಾಯಕರಾಗಿ ಕುಳಿತುಕೊಳ್ಳತಕ್ಕಂಥ ಪರಿಸ್ಥಿತಿ ಆಗುತ್ತದೆ. ಆದ್ದರಿಂದ ನನ್ನ ವಿನಂತಿ ಏನೆಂದರೆ ಇದಕ್ಕೆ ತಾವು ಒಂದು ಸ್ಪಷ್ಟ ರೂಲಿಂಗ್ ಕೊಡಬೇಕು. ನಾವು ನಮ್ಮ ಜಾಗದಲ್ಲಿ ಪ್ರತಿಭಟನೆ ಮಾಡತಕ್ಕಂಥಾದ್ದು ಸರಿ. ಅದು ಬಿಟ್ಟು ಬಾವಿಗೆ ಬಂದು ಧರಣಿ ಮಾಡುವುದು. ಅಲ್ಲಿಂದಲೇ ಮಾತನಾಡುವುದು ಇಲ್ಲಿ ಪದೇ ಪದೇ ನಡೆಯುತ್ತಿದೆ. ಈ ದೃಷ್ಟಿಯಿಂದ ತಾವು ಇದನ್ನೆಲ್ಲಾ ಯೋಚಿಸಿ ಸಮಗ್ರವಾದ ಒಂದು ತೀರ್ಮಾನವನ್ನು ಕೊಡಲೇಬೇಕು ಹಾಗೆ ಅಂತ ಹೇಳಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ,

ಅಧ್ಯಕ್ಷರು.—ಮಾನ್ಯ ಕಾಗೋಡುತಿಮ್ಮಪ್ಪನವರು.

ವಿತ್ತೀಯ ಕಾರ್ಯಕಲಾಪಗಳು

೧೯೯೪-೯೫ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರೆದ ಚರ್ಚೆ

† ಶ್ರೀ ಕಾಗೋಡುತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ ನಿನ್ನೆ ನಾನು ಮಾತನಾಡತಕ್ಕಂಥ ಕಾಲದಲ್ಲಿ ಹಿಂದುಳಿದ ವರ್ಗದವರ ಅಭಿವೃದ್ಧಿಗೋಸ್ಕರವಾಗಿ ಒಂದು ವ್ಯಾಪಕವಾದಂಥ ಕಾರ್ಯಕ್ರಮವನ್ನು ಸರ್ಕಾರ ರೂಪಿಸಬೇಕು ಈಗ ಒದಗಿಸಿರತಕ್ಕಂಥ ಹಣ ಸಾಕಾಗುವುದಿಲ್ಲ ಏಕೆಂದರೆ ಆ ವರ್ಗದ ಜನರ ಅಭ್ಯುದಯ ಜವಾಬ್ದಾರಿಯನ್ನು ಸರ್ಕಾರ ಹೊತ್ತಿದೆ. ಆ ದೃಷ್ಟಿಯಿಂದ ಆ ಜವಾಬ್ದಾರಿಯನ್ನು ನಿರ್ವಹಿಸಬೇಕಾದರೆ ಒಂದು ಹೆಚ್ಚಿನ ಹಣ ಕೊಟ್ಟು ವ್ಯಾಪಕವಾದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಪಡಿಸುತ್ತೇನೆ. ಅದೇ ಕಾಲಕ್ಕೆ ಅಲ್ಪಸಂಖ್ಯಾತರ ಆರ್ಥಿಕ ಸಮೀಕ್ಷೆ ಮಾಡತಕ್ಕಂಥ ಒಂದು ತೀರ್ಮಾನವನ್ನು ಸರ್ಕಾರ ಮಾಡಿರತಕ್ಕಂಥಾದ್ದು ತುಂಬಾ ಸ್ವಾಗತವಾದಂತಹ ವಿಚಾರ ಆದಷ್ಟು ಬೇಗ ಆ ವರದಿಯನ್ನು ಜಾರಿಗೆ ತಂದು ಈ ವರ್ಷದ ಪ್ರಾರಂಭದಲ್ಲಿಯೇ ಒಂದು ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮ ಅಲ್ಪಸಂಖ್ಯಾತರಿಗೆ ಪ್ರಾರಂಭ ಆಗಬೇಕು, ಈ ಕೆಲಸ ಮುಖ್ಯಮಂತ್ರಿಗಳಿಂದ ಆಗುತ್ತದೆ ಎನ್ನತಕ್ಕಂಥ ಆಸೆಯನ್ನು ನಾನು ಈ ಸಂದರ್ಭದಲ್ಲಿ ಇಟ್ಟುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೇ, ನಮ್ಮ ಮಕ್ಕಳಿಗೆ ಸಂಬಂಧಪಟ್ಟಿರತಕ್ಕಂಥ ಒಂದು ವಿಚಾರನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ಈಗ ಈ ಅಕ್ಷರ ಕಾರ್ಯಕ್ರಮದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ಶಾಲಾ ಮಕ್ಕಳಿಗೆ ಹಾಲನ್ನು ಕೊಡತಕ್ಕಂಥ ಕೆಲಸವನ್ನು ಇವತ್ತು ಪ್ರಾರಂಭ ಮಾಡಿದೆ. ಆದರೆ ಒಂದನೇ ತರಗತಿಯ ಮಕ್ಕಳಿಗೆ ಮಾತ್ರ ಹಾಲನ್ನು ಕೊಡತಕ್ಕಂಥ ನೀತಿಯನ್ನು ಇವತ್ತು ಜಾರಿಗೆ ತಂದಿದ್ದಾರೆ. ಇದರಿಂದ ಏನು ಆಗಿದೆ ಅಂದರೆ, ಒಂದೇ ಶಾಲೆಯಲ್ಲಿ ಕುಳಿತು ಕೊಂಡಿರತಕ್ಕಂಥ ಮಕ್ಕಳು ಒಬ್ಬ ಮಗು ಹಾಲು ಕುಡಿಯುತ್ತಾ ಇದ್ದರೆ ಪಕ್ಕದಲ್ಲಿರತಕ್ಕಂಥ ಎರಡನೆಯ ತರಗತಿ ಮಗು ಅದನ್ನು ನೋಡಿ ಕಣ್ಣೀರು ಹಾಕತಕ್ಕಂಥ ಸಂದರ್ಭ ಸನ್ನಿವೇಶ ಕೂಡ ಬಂದಿದೆ. ಜೊಲ್ಲು ಸುರಿಸುತ್ತವೆ. ಈಗ ಒಂದು ಮನೆಯಲ್ಲಿ ಎರಡು ಮಕ್ಕಳು ಇದ್ದರೆ ಒಬ್ಬನಿಗೆ ಪೆಪ್ಪರ್‌ಮೆಂಟ್ ಕೊಟ್ಟು ಇನ್ನೊಬ್ಬನಿಗೆ ಪೆಪ್ಪರ್‌ಮೆಂಟ್ ಕೊಡದೇ ಹೋದರೆ ಆ ಇನ್ನೊಂದು ಮಗುವಿನ ಸ್ಥಿತಿ ಎಂತಹ ಚಿಂತಾಜನಕವಾಗಿರಬಹುದು ಅಂತ ಮಕ್ಕಳನ್ನು ಹೆತ್ತ ಪ್ರತಿಯೊಬ್ಬ ತಂದೆ ತಾಯಿಗಳಿಗೂ ಗೊತ್ತಿರುತ್ತದೆ. ಅಂದಾಗ ಒಂದನೇ ತರಗತಿಯ ಮಕ್ಕಳಿಗೆ ಹಾಲನ್ನು ಕೊಟ್ಟು ಇನ್ನು ಆ ಶಾಲೆಯಲ್ಲಿ ಉಳಿದಿರತಕ್ಕಂತಹ ಮಕ್ಕಳಿಗೆ ಹಾಲನ್ನು ಕೊಡದೇ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹೋದರೆ ಆ ಮಕ್ಕಳ ಚಿಂತಾಜನಕ ಸ್ಥಿತಿಯನ್ನು ಅನುಭವಿಸತಕ್ಕಂಥ ಉಪಾಧ್ಯಾಯರ ಕಥೆ ಏನಾಗಿರಬಹುದು. ಅಂತ ಹೇಳಿ ನಾವೆಲ್ಲರೂ ಊಹಿಸಬಹುದು. ಆದ್ದರಿಂದ ಕನಿಷ್ಟ ಪಕ್ಷ ಈ ವರ್ಷದಿಂದ ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೂ ಹಾಲನ್ನು ಕೊಡತಕ್ಕಂಥ ಒಂದು ಪದ್ಧತಿಯನ್ನು ಕಡ್ಡಾಯವಾಗಿ ಜಾರಿಗೆ ತರಲೇಬೇಕು. ನಮಗೆ ಅದಕ್ಕೆ ಇನ್ನೊಂದು ೨೦ ಕೋಟಿ ರೂಪಾಯಿ ಖರ್ಚಾದರೂ ಚಿಂತೆ ಇಲ್ಲ, ಇದನ್ನು ಜಾರಿಗೆ ತರುವುದರ ಜೊತೆಯಲ್ಲಿ ಈ ಗ್ರಾಮಾಂತರ ಪ್ರದೇಶದಲ್ಲಿ ಅಂಗನವಾಡಿಗಳು ಏನು ನಡೆಯುತ್ತಾ ಇದ್ದಾವೆ, ಆ ಮಕ್ಕಳಿಗೂ ಕೂಡ ಹಾಲನ್ನು ಕೊಡತಕ್ಕಂಥ ಪದ್ಧತಿಯನ್ನು ಜಾರಿಗೆ ತರಬೇಕು. ಏಕೆಂದರೆ ಇವತ್ತು ಈಗಾಗಲೇ ಮಾನ್ಯಮುಖ್ಯಮಂತ್ರಿಗಳು ಮಕ್ಕಳಿಗೋಸ್ಕರವಾಗಿ ವಿಶೇಷವಾದಂತಹ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಬೆಳೆಯತಕ್ಕಂಥ ಮಕ್ಕಳಿಗೆ ಎಷ್ಟು ಪೌಷ್ಟಿಕ ಆಹಾರವನ್ನು ಕೊಡಬೇಕು ಎನ್ನುವ ಬಗ್ಗೆ ಇವತ್ತು ತೀರ್ಮಾನ ಮಾಡಿದ್ದಾರೆ. ಇವತ್ತು ಅದಕ್ಕೆ ಹೆಚ್ಚಿನ ಹಣವನ್ನು ಸಹ ಒದಗಿಸಿದ್ದಾರೆ. ಅದೇರೀತಿಯಲ್ಲಿ ಅಂಗನವಾಡಿಗೆ ಹೋಗತಕ್ಕಂಥ ಮಕ್ಕಳಿಗೆ ಹಾಲನ್ನು ಕೊಡತಕ್ಕಂಥ ಕೆಲಸ ಮಾಡಿದರೆ ಇವತ್ತು ಅನೇಕ ನಮ್ಮ ಡೈರಿಗಳವರು ಸಾಕಷ್ಟು ಹಾಲನ್ನು ಏನು ಉತ್ಪಾದನೆ ಮಾಡುತ್ತಿದ್ದಾರೆ ಅದನ್ನು ಉಪಯೋಗಿಸಿಕೊಳ್ಳಬಹುದು. ಈಗ ಹಾಲು ಖರ್ಚಾಗುವುದಿಲ್ಲ, ಹೆಚ್ಚಿನ ಪ್ರಮಾಣದಲ್ಲಿ ಹಾಲಿನ ಉತ್ಪಾದನೆ ಆಗುತ್ತಿದೆ, ಆ ಹಾಲು ಖರ್ಚಾಗದೆ ಡೈರಿಗಳು ಇವತ್ತು ನಷ್ಟದಲ್ಲಿ ನಡೆಯುತ್ತಿವೆ ಎಂದು ನಮ್ಮ ಸಚಿವರು ಕೂಡ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆ ದೃಷ್ಟಿಯಿಂದ ನಮ್ಮ ಶಾಲಾ ಮಕ್ಕಳಿಗೆ ಅಂಗನವಾಡಿ ಮಕ್ಕಳಿಗೆ ಇವತ್ತು ನಾವು ಹಾಲನ್ನು ಪೂರ್ಣವಾಗಿ ಕೊಟ್ಟರೆ ಉತ್ಪಾದನೆಯಾಗತಕ್ಕಂಥ ಹಾಲು ಸಹ ಖರ್ಚಾಗುತ್ತದೆ. ಜೊತೆಗೆ ನಮ್ಮ ಮಕ್ಕಳಿಗೆ ಉತ್ತಮವಾದಂತಹ ಪೌಷ್ಟಿಕ ಆಹಾರವೂ ಸಿಗುತ್ತದೆ. ಆ ದೃಷ್ಟಿಯಿಂದ ವಿಶೇಷ ಕಾರ್ಯಕ್ರಮವನ್ನು ರೂಪಿಸಿರುವಂತಹ ಮುಖ್ಯಮಂತ್ರಿಗಳು ಇದನ್ನು ಬದಲಾವಣೆ ಮಾಡಿ ಹಾಲನ್ನು ಎಲ್ಲ ಮಕ್ಕಳಿಗೂ ಕೊಡುವಂತಹ ಕೆಲಸವನ್ನು ಮಾಡಿ ಮಕ್ಕಳಿಗೆ ಒಳ್ಳೆಯದನ್ನು ಹರಸಲಿ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಧ್ಯಕ್ಷರೇ, ನಮ್ಮ ಸರ್ಕಾರ ಆದ್ಯತೆಯನ್ನು ಗುರ್ತಿಸುವಾಗ ಇನ್ನೊಂದು ಕ್ಷೇತ್ರವನ್ನು ಗುರುತ್ತಿಸಿಕೊಂಡಿರುವುದೆಂದರೆ ಗ್ರಾಮಾಂತರ ಪ್ರದೇಶ. ತಮಗೆ ಗೊತ್ತಿದೆ, ಈ ಅಸಮಾನತೆಯ ತೆಕ್ಕೆಯಲ್ಲಿ ಸಿಕ್ಕಿತಕ್ಕಂಥದ್ದು ನಮ್ಮ ಗ್ರಾಮಗಳು. ಅದಕ್ಕಾಗಿ ಅಲ್ಲಿಗೆ ಬೆಳ್ಳಿಬೆಳಕು ಎಂಬ ಹೊಸ ಕಾರ್ಯಕ್ರಮ ಏನು ತಂದಿದ್ದಾರ ಅವನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ನಾನು ಹೇಳುವುದೇನೆಂದರೆ ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಪ್ರತಿಯೊಂದು ಶಾಸಕರ ಕ್ಷೇತ್ರದಲ್ಲಿ ಪ್ರತಿ ವರ್ಷ ಒಂದು ಗ್ರಾಮವಾದರೂ ಸಹ ಸುಂದರವಾದಂತಹ ಗ್ರಾಮವಾಗಿ ಮಾರ್ಪಾಡಾಗಬೇಕು. ಅದಕ್ಕೆ ಎಷ್ಟೇ ಹಣ ಖರ್ಚಾದರೂ ಚಿಂತೆಯಿಲ್ಲ. ಬೆಳ್ಳಿಬೆಳಕು ಯೋಜನೆಯನ್ನು ಪ್ರತಿಯೊಂದು ಶಾಸಕರ ಕ್ಷೇತ್ರಕ್ಕೆ ಒಂದು ಗ್ರಾಮಕ್ಕಾದರೂ ವಿಸ್ತರಿಸಬೇಕು. ನಾವು ಕೂಡ ಈ ಪಟ್ಟಣ ಮತ್ತು ಹಳ್ಳಿಯಲ್ಲಿರುವ ಅಭಿವೃದ್ಧಿಯಲ್ಲಿ ಕಂಡಂತಹ ತಾರತಮ್ಯವನ್ನು ನೋಡುತ್ತೇವೆ. ಅಸಮಾನತೆ ಅನ್ನುವುದನ್ನು ಇಲ್ಲೂ ಕಾಣುತ್ತಾ ಇದ್ದೇವೆ. ಆದ್ದರಿಂದಲೇ ನಮ್ಮ ಹಳ್ಳಿಯಲ್ಲಿರುವ ಜನರೂ ಕೂಡ ಒಂದು ವರ್ಷದಲ್ಲಿ ಒಂದು ತಾಲ್ಲೂಕ್‌ನಲ್ಲಿ ಅಥವಾ ಶಾಸಕರ ಕ್ಷೇತ್ರದಲ್ಲಿ ಒಂದು ಗ್ರಾಮವಾದರೂ ಒಳ್ಳೆಯ ರಸ್ತೆಗಳನ್ನು ಒಳ್ಳೆಯ ನೀರು ಸರಬರಾಜನ್ನು ಒಳ್ಳೆಯ ಆರೋಗ್ಯ ವ್ಯವಸ್ಥೆ ಪಡೆಯುವಂತಹ ಸೌಕರ್ಯ ಸಿಕ್ಕಲಿ, ಅಂತಹ ಬೆಳ್ಳಿಬೆಳಕನ್ನು ರಾಜ್ಯದಲ್ಲಿ ವಿಸ್ತಾರಪೂರ್ವಕವಾಗಿ ಮಾಡಲಿ ಎಂದು ನಾನು ಒತ್ತಾಯ ಮಾಡುತ್ತೇನೆ. ಏಕೆಂದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಏನು, ಗ್ರಾಮಗಳ ಅಭಿವೃದ್ಧಿಯ ದಿಸೆಯಲ್ಲಿ ಒಂದು ಉತ್ತಮವಾದ ಪ್ರಗತಿಶೀಲವಾದ ಹೆಜ್ಜೆ ಇಟ್ಟಿದ್ದಾರೆ. ಆ ಹೆಜ್ಜೆ ದಾಪುಗಾಲಾಗಬಾರದು. ಆ ಹೆಜ್ಜೆ ಬಹಳ ಶೀಘ್ರಗತಿಯಿಂದ ನಡೆಯಬೇಕು. ಅದಕ್ಕೆ ನಮ್ಮೆಲ್ಲರ ಬೆಂಬಲ ಇದೆ. ದಯವಿಟ್ಟು ಇದನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡುತ್ತೇನೆ. ಅದೇರೀತಿ ಈ ಗ್ರಾಮಾಂತರ ಪ್ರದೇಶದ ಕುಡಿಯುವ ನೀರಿನ ವಿಚಾರದಲ್ಲಿ ಒಂದು ಮಾತು ಹೇಳಿದರೆ ತಪ್ಪಾಗುವುದಿಲ್ಲ ಎಂದು ಭಾವಿಸುತ್ತೇನೆ. ಅನೇಕ ಕಡೆಗಳಲ್ಲಿ ನಾವು ಕೊಳವೆ ಬಾವಿಗಳನ್ನು ತೆಗೆದು ನೀರು ಕೊಡುತ್ತೇವೆ. ಆದರೆ ಅನೇಕ ಕಡೆಗಳಲ್ಲಿ ಕೊಳವೆ ಬಾವಿಗಳು ಇವತ್ತು ಬತ್ತಿಹೋಗುತ್ತಿವೆ, ಕುಡಿಯಲು ನೀರಿಗೆ ತೊಂದರೆ ಯಾಗಿದೆ. ಆದ್ದರಿಂದ ಯಾವ್ಯಾವ ಪ್ರದೇಶದಲ್ಲಿ ನೈಸರ್ಗಿಕವಾದಂತಹ ಉತ್ತಮವಾದಂತಹ ಜಲಸಂಪನ್ಮೂಲ ಸಿಗುತ್ತದೋ ಅಂತಹ ನೀರನ್ನು ಉಪಯೋಗಿಸಿಕೊಂಡು ೧೦-೨೦ ಗ್ರಾಮಗಳಿಗೆ ಒಂದೇ ಸಮಗ್ರ ಕುಡಿಯುವ ನೀರಿನ ಯೋಜನೆ ಜಾರಿ ಮಾಡಿ ಆ ಗ್ರಾಮಗಳಿಗೆ ಉತ್ತಮವಾದ ನೀರನ್ನು ಕೊಡುವ ಯೋಜನೆಯನ್ನು ಈ ವರ್ಷದಿಂದ ಜಾರಿಗೆ ತರಬೇಕೆಂದು ಹೇಳುತ್ತೇನೆ. ಇವತ್ತು ಪ್ರಪಂಚ ಬ್ಯಾಂಕಿನಿಂದ ಹಣ ಪಡೆದು ಕೆಲವು ಕಾರ್ಯಕ್ರಮಗಳನ್ನು ಏನು ರೂಪಿಸುತ್ತಿದ್ದಾರೆ, ಅದು ಒಂದು ಭಾಗ ಆದರೆ ರಾಜ್ಯ ಸರ್ಕಾರ ಕೂಡ ಈ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ತಯಾರು ಮಾಡಿ ನೈಸರ್ಗಿಕವಾಗಿ ಸಿಗುವಂತಹ ನೀರನ್ನು ಬಳಸಿಕೊಳ್ಳಬೇಕು. ಅದರಲ್ಲೂ ಬಯಲು

ಗಾಡಿನಲ್ಲಿ ಅನೇಕ ಕಡೆಗಳಲ್ಲಿ ಬೋರ್‌ವೆಲ್ ಹಾಕಿದರೂ ನೀರು ಸಿಗುವುದಿಲ್ಲ. ಆಗ ಇದನ್ನು ಪಾಡಿ ಪೈಪಿನಲ್ಲಿ ನೀರನ್ನು ತೆಗೆದುಕೊಂಡು ಹೋದರೆ ಅದು ಒಂದು ತಾಲ್ಲೂಕಿನಲ್ಲಾಗಬಹುದು, ಎರಡು ಮೂರು ತಾಲ್ಲೂಕಿನಲ್ಲಾಗಬಹುದು. ಆ ನೀರನ್ನು ಹಾದಿಯಲ್ಲಿ ಸಿಗುವಂತಹ ಎಲ್ಲ ಹಳ್ಳಿಗಳಿಗೆ ಕೊಡುವುದಕ್ಕಾಗುತ್ತದೆ. ಆದ್ದರಿಂದ ಅಂತಹ ಒಂದು ಕುಡಿಯುವ ನೀರಿನ ವ್ಯವಸ್ಥೆಯನ್ನು ನಮ್ಮ ಗ್ರಾಮಾಂತರ ಪ್ರದೇಶಕ್ಕೆ ತರಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತಾ, ಈ ಶೌಚಾಲಯದ ವ್ಯವಸ್ಥೆಯನ್ನು ಕಳೆದ ಎರಡು ವರ್ಷಗಳಿಂದ ಕಾರ್ಯರೂಪಕ್ಕೆ ತಂದರೂ ಕೂಡ ಅದರ ಪ್ರಯೋಜನ ನಮ್ಮ ಗ್ರಾಮಗಳಿಗೆ ಸಿಗಲಿಲ್ಲ. ಇದರ ಒಂದು ದೊಡ್ಡ ಸವಾಲು ಇವತ್ತು ನಮ್ಮ ಮುಂದಿದೆ. ಸಾಮಾಜಿಕ ಪ್ರಜ್ಞೆ ಇರತಕ್ಕಂತಹ ಪ್ರತಿಯೊಬ್ಬರೂ ಕೂಡ ವಿಚಾರ ಮಾಡತಕ್ಕಂತಹ ಒಂದು ಪ್ರಶ್ನೆ ಎಂದರೆ ಗ್ರಾಮಾಂತರ ಪ್ರದೇಶದ ಪ್ರತಿಯೊಂದು ಮನೆಗೂ ಒಂದು ಶೌಚಾಲಯ ಕೊಡುವ ಅಗತ್ಯ ತೀರಾ ಅಗತ್ಯವಾಗಿದೆ. ಈ ಕಾಲದಲ್ಲೂ ನಮ್ಮ ಜನರು ಶೌಚಕ್ಕಾಗಿ ಬೆಳಕು ಬರುವುದರೊಳಗಾಗಿಯೇ ಬಯಲಿಗೆ ಹೋಗಬೇಕಾದಂತಹ ಪ್ರಸಂಗವನ್ನು ನಾವು ದಿನನಿತ್ಯ ನೋಡುತ್ತಿದ್ದೇವೆ. ಮಾನ್ಯ ಸಚಿವರು ಇಲ್ಲೇ ಇದ್ದಾರೆ. ಈಗೇನಾಗಿದೆ, ಸಾಮೂಹಿಕ ಶೌಚಾಲಯ ಕಟ್ಟತಕ್ಕಂತಹ ತೀರ್ಮಾನವನ್ನು ಅವರು ಮಾಡಿದ್ದಾರೆ. ಆದರೆ ಒಂದೇನಾಗಿದೆ, ನಮ್ಮಲ್ಲಿ ಒಂದು ಪದ್ಧತಿ ಇದೆ. ಮಾನಸಿಕವಾಗಿ ಬಹಳ ವರ್ಷಗಳಿಂದ ನಮ್ಮಲ್ಲಿ ಪರಂಪರೆಯಿಂದ ಬಂದಂತಹ ಕಲ್ಪನೆಗಳಿವೆ. ನಮ್ಮ ಮಲಮೂತ್ರವನ್ನೇ ನಾವು ಗುಡಿಸುವುದಕ್ಕೆ ಹೇಸಿಗೆ ಪಟ್ಟುಕೊಳ್ಳುತ್ತೇವೆ. ಯಾರೋ ಒಬ್ಬ ಸ್ನೇಹಿತರು ಜೈನಾದೇಶಕ್ಕೆ ಹೋಗಿದ್ದರು. ಅಲ್ಲಿಂದ ಬಂದಮೇಲೆ ಅವರು ಅಲ್ಲಿ ಸಾಮೂಹಿಕವಾದ ಶೌಚಾಲಯಗಳಿವೆ. ಪ್ರತಿಯೊಂದು ಹಳಿಯಲ್ಲೂ ಪ್ರತಿದಿವಸ ಒಂದು ಮನೆಯವರು ಸಾಮೂಹಿಕ ಶೌಚಾಲಯವನ್ನು ಸ್ವಚ್ಛ ಮಾಡುವಂತಹ ಜವಾಬ್ದಾರಿಯನ್ನು ಅವರು ವಹಿಸಿಕೊಳ್ಳುತ್ತಾರೆಂದು ಹೇಳಿದರು. ಆದರೆ ಆ ಪದ್ಧತಿ ನಮ್ಮಲ್ಲಿಲ್ಲ ? ಏಕೆಂದರೆ ಅಂಜಿಕೆ ಅಥವಾ ಹೇಸಿಗೆ ಅನ್ನುವ ಭಾವನೆಗಳು ಇವತ್ತು ನಮ್ಮ ಮನಸ್ಸಿನಲ್ಲಿ ಬೇರೂರಿ ನಿಂತಿದೆ. ಜೊತೆಗೆ ಸಾಮೂಹಿಕ ಶೌಚಾಲಯಗಳನ್ನು ನಾವು ಗ್ರಾಮ ಮಟ್ಟದಲ್ಲಿ ಸ್ಥಾಪನೆ ಮಾಡಿದರೆ ಅದನ್ನು ಸರಿಯಾದ ರೀತಿಯಲ್ಲಿ ಇಟ್ಟುಕೊಳ್ಳುವುದಕ್ಕೆ ನೀರಿನ ವ್ಯವಸ್ಥೆ ಇರಬೇಕು ನೀರಿಲ್ಲದಿದ್ದರೆ ಅದನ್ನು ಶುಚಿಯಾಗಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಆಗ ಅದೇ ಒಂದು ದೊಡ್ಡ ಉಪದ್ರವ ಆಗುತ್ತದೆ. ನಾನೇ ನಮ್ಮ ಸಾಗರ ಪಟ್ಟಣದಲ್ಲಿ ಸಾಮೂಹಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿಸಿ, ನಂತರ ಅಲ್ಲಿ ನೀರಿನ ವ್ಯವಸ್ಥೆ ಇಲ್ಲದೇನೆ ಅದೇ ಒಂದು ದೊಡ್ಡ ಉಪದ್ರವಾಗಿ ಎಲ್ಲ ಕಿತ್ತುಹಾಕಬೇಕಾದ ಪ್ರಸಂಗ ಬಂದಿದೆ. ಹಾಗಾಗಿ ನಮಗೆ ಎಷ್ಟೇ ಹಣ ಖರ್ಚಾದರೂ ಚಿಂತೆಯಿಲ್ಲ. ವಿಶೇಷವಾದ ವಿಲೇಜ್ ಸ್ಯಾನಿಟೇಶನ್ ಎಂದು ವಿಶೇಷ ಕಾರ್ಯಕ್ರಮ ಕೈಗೊಳ್ಳಬೇಕು. ಏಕೆಂದರೆ ಬೀದಿಯಲ್ಲಿ ಬೆಳಕು ಹರಿಯುವುದರೊಳಗೆ ಮಲಮೂತ್ರ ವಿಸರ್ಜನೆ ಮಾಡುವಂತಹ ಗ್ರಾಮಾಂತರ ಪ್ರದೇಶದ ಜನರಿಗೆ ಅದನ್ನು ತಪ್ಪಿಸುವಂತಹ ಒಂದು ಕೆಲಸ ಮಾಡಬೇಕು. ನಾವು ಮಲೆನಾಡಿನವರು ಕೊನೆಪಕ್ಷ ನಮಗೆ ಮರೆಯಲ್ಲಿ ಹೋಗಿ ಕೂರಲು ಕಾಡು ಮರಗಿಡ ಆದರೂ ಸಿಗುತ್ತವೆ. ಹೋಗಬೇಕಾದವರು ಮರದ ಬದಿಯಲ್ಲಾದರೂ ಹೋಗುತ್ತಾರೆ. ಆದರೆ ಘೋರ್ಪಡೆಯವರೇ, ನಿಮ್ಮ ಊರಿನಲ್ಲಿ ಎಲ್ಲಿ ನೋಡಿದರೂ ಬಯಲು, ಎಲ್ಲಿ ಹೋಗುತ್ತಾರೆ ಜನ, ಅದರಲ್ಲೂ ಮಹಿಳೆಯರ ಪರಿಸ್ಥಿತಿ ಏನಾಗಿರಬಹುದೆಂದು ನಾವು ಊಹಿಸಿಕೊಳ್ಳಬೇಕು. ಆದ್ದರಿಂದ ಈ ವರ್ಷ ಈ ಗ್ರಾಮಾಂತರದ ಪ್ರತಿಯೊಂದು ಮನೆಗೂ ಶೌಚಾಲಯ ಕೊಡುವುದಕ್ಕೆ ಬಹಳ ಕಡಿಮೆ ವೆಚ್ಚದಲ್ಲಿ ಒಂದು ಡಿಸೈನ್ ಮಾಡಿ ಕೆಲವು ವಸ್ತುಗಳನ್ನು ನಾವು ಕೊಟ್ಟರೆ ಅವರಾಗೇ ಕಟ್ಟಿಕೊಳ್ಳುತ್ತಾರೆ. ಈ ಸಾರಿ ಆ ಕೆಲಸವನ್ನು ಜಾರಿಗೆ ತರುವುದರಿಂದ ನಮ್ಮ ಗ್ರಾಮಾಂತರ ಪ್ರದೇಶಕ್ಕೂ ಪಟ್ಟಣ ಪ್ರದೇಶಕ್ಕೂ ಮಧ್ಯೆ ಇರುವ ಅಸಮಾನತೆಯನ್ನು ತೊಡೆದುಹಾಕುವಂತಹ ದಿಸೆಯಲ್ಲಿ ಒಂದು ದಿಟ್ಟ ಮತ್ತು ದೀರ್ಘವಾದಂತಹ ಹೆಜ್ಜೆಯನ್ನು ನಮ್ಮ ಸಚಿವರು ಹಾಗೂ ಮುಖ್ಯಮಂತ್ರಿಗಳು ಇಡಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ.

† ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು).— ಈ ಶೌಚಾಲಯಗಳ ಬಗ್ಗೆ ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ಈಗಾಗಲೇ ನಾವು ಹಾಕಿದ್ದೇವೆ. ಮುಂಬರುವ ವರ್ಷದಲ್ಲಿ ಗಮನಾರ್ಹವಾದ ರೀತಿಯಲ್ಲಿ ಆ ಕಾರ್ಯಕ್ರಮವನ್ನು ಹೆಚ್ಚಿಸಬೇಕೆಂದಿದ್ದೇವೆ. ಸದಸ್ಯರಾದ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ನಾನು ಹೇಳುವುದು ಇಷ್ಟೆ, ಯಾವ್ಯಾವ ಜಾಗದಲ್ಲಿ ಯಾವ ತರಹದ ಶೌಚಾಲಯ ಕಟ್ಟಿದರೆ ಅವರಿಗೆ ಅನುಕೂಲವಾಗುತ್ತದೆ, ಅದನ್ನು ನೋಡಿಕೊಂಡು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಲಿಕ್ಕೆ ಅವರಿಗೆ ಅವಕಾಶ ಇದೆ. ಈಗ ಎಷ್ಟೋ ಕಮ್ಯೂನಿಟಿ ಲೆಟ್ರಿನ್ಸ್ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಎಷ್ಟೋ ಕಡೆ ಚೆನ್ನಾಗಿ ಕೆಲಸ ಮಾಡುತ್ತಿವೆ. ನೀರಿನ ಸೌಕರ್ಯ ಸ್ವಚ್ಛವಾಗಿ ಇಟ್ಟುಕೊಳ್ಳುವಂತಹ ಪ್ರಯತ್ನ ನಡೆಯಬೇಕಾಗಿದೆ. ಇಂಡಿವಿಜುಯಲ್ ಲೆಟ್ರಿನ್ಸ್ ಎಷ್ಟು ಸಾಧಿಸಲು ಸಾಧ್ಯವೋ ಅದನ್ನು ಮಾಡೋಣ. ಆದರೆ ಬಡತನ ಹಾಗೂ ಗುಡಿಸಲಿರುವ ಕಡೆ ಪ್ರತ್ಯೇಕ ಲೆಟ್ರಿನ್ ಮಾಡಲಿಕ್ಕೆ ಕೂಡ ಅಲ್ಲಿ ಜಾಗ ಇರುವುದಿಲ್ಲ. ಅದಕ್ಕಾಗಿ ಹೊಸ ರೀತಿಯಲ್ಲಿ ನಾವು ಆಲೋಚನೆ ಮಾಡಬೇಕಾಗುತ್ತದೆ. ಅಂತಹ ಕಡೆ ಒಂದೊಂದು ಗ್ರೂಪ್ ಲ್ಯಾಟ್ರಿನ್ ಆದರೂ ಬೇರೆ ಬೇರೆ ಗುಡಿಸಲುಗಳ ಬಳಿ ಕಟ್ಟಿದರೂ ಕೂಡ ಅದೊಂದು ಗ್ರೂಪ್ ಲೆಟ್ರಿನ್ನೇ ಆಗುತ್ತದೆ. ಅವರವರಿಗೆ ಕೊಟ್ಟಿರುವಂತಹದನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವಂತಹ ಜವಾಬ್ದಾರಿಯನ್ನು ಅವರವರೇ ವಹಿಸಿಕೊಳ್ಳಬೇಕಾಗುತ್ತದೆ. ಹೀಗೆ ಹೊಸ ರೀತಿಯಲ್ಲಿ ಆ ಜಾಗದ ಪರಿಸ್ಥಿತಿ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಪ್ರಯೋಗ ಮಾಡಬೇಕಾಗುತ್ತದೆಯೋ ಹೊರತು ಆ ರೀತಿ ಒಂದೇ ಒಂದು ಟೈಪ್ಡ್ ಡಿಸೈನ್ ಕೊಟ್ಟು ಇದನ್ನು ಸರಿಯಾಗಿ ರೂಪಿಸಲಿಕ್ಕೆ ಆಗುವುದಿಲ್ಲ. ಒಟ್ಟಿನಲ್ಲಿ ಈ ಒಂದು ಪ್ರಯತ್ನ ಇಡೀ ರಾಜ್ಯದಲ್ಲಿ ನಡೆಯಲು ಸಾಕಷ್ಟು ಅವಕಾಶ ಕೊಟ್ಟಿದ್ದೇವೆ ಮತ್ತೆ ಹೊಸ ರೀತಿಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಇದನ್ನು ಬೆಳೆಸುವ ಉದ್ದೇಶ ಸರ್ಕಾರಕ್ಕಿದೆ.

ಶ್ರೀ ಆರ್. ನಾರಾಯಣ್.—ಅಧ್ಯಕ್ಷರೇ, ಇದು ಬಹಳ ವ್ಯಾಪಕವಾದ ಬಹಳ ಗಹನವಾದ ಪ್ರಶ್ನೆ. ಇದು ಕೇವಲ ಲಕ್ಷಾಂತರ ಅಲ್ಲ, ಕೋಟ್ಯಂತರ ರೂಪಾಯಿಗಳನ್ನು ನಾವು ತೊಡಗಿಸಬೇಕಾಗಿದೆ. ಈ ಕೆಲಸ ಮಾನವೀಯತೆ ದೃಷ್ಟಿಯಿಂದಲೂ ಬಹಳಷ್ಟು ಬೇಗ ಆಗಬೇಕಾಗಿತ್ತು. ಎಲ್ಲಿ ಬಜೆಟ್ ಭಾಷಣ ಮತ್ತು ಆರ್‌ಡಿಪಿಆರ್ ಮಿನಿಸ್ಟರ್ ಭಾಷಣದಲ್ಲಿ ನಾವು ಇದನ್ನೇ ಕೇಳುತ್ತಿದ್ದೇವೆ. ಆದರೆ ಪ್ರಾಮಾಣಿಕವಾದ ಪ್ರಯತ್ನ ನಮ್ಮ ಸರ್ಕಾರದ ಮತಿಯಿಂದ ಆಗಿಲ್ಲ. ನಾನು ಒಂದು ಸಣ್ಣ ಉದಾಹರಣೆ ಕೊಡುತ್ತೇನೆ : ಮುದುಗೆರೆ ಎಂಬ ಗ್ರಾಮಕ್ಕೆ ನಾನು ಕಳೆದ ಸಾರಿ ಹೋದೆ. ಅಲ್ಲಿ ಹರಿಜನರೆಲ್ಲಾ ಬಂದು ನನಗೆ ಮುತ್ತಿಗೆ ಹಾಕಿದರು. ಮಾನ್ಯ ಮಂತ್ರಿಗಳು ವರದಿ ತರಿಸಿ ನೋಡಲಿ. ಮುದುಗೆರೆ ಹಳ್ಳಿ, ತುಮಕೂರು ತಾಲ್ಲೂಕು, ಬೆಳ್ಳಾವಿ ಕ್ಷೇತ್ರ. ಅಲ್ಲಿ ಓವರ್‌ಹೆಡ್ ಟ್ಯಾಂಕ್ ಇದ್ದು ಮಿನಿವಾಟರ್ ಸ್ಕೀಮಿಗೆ ಸಾಕಷ್ಟು ಬೋರ್‌ವೆಲ್ಸ್ ಇವೆ. ನನಗೆ ಬಹಳ ದುಃಖ ಬರುವಂತಹ ಒಂದು ಸಂಗತಿ. ಆ ಗ್ರಾಮದ ಹರಿಜನರೆಲ್ಲ ಮೆರವಣಿಗೆ ಮಾಡಿ ನನಗೆ ಅನೇಕ ಬೇಡಿಕೆಗಳನ್ನು ಕೊಟ್ಟರು, ಅದರ ಪೈಕಿ ಇದೂ ಬಹಳ ಪ್ರಮುಖವಾದ ಬೇಡಿಕೆ. ಆ ಗ್ರಾಮ ತೋಟಗಳಿಂದ ಆವರಿಸಿಕೊಂಡಿದೆ. ಶ್ರೀಮಂತರೇ ಇರುವಂತಹ ಜಾಗ ಅದು. ನೇಚರ್ ಕಾಲ್ಸ್‌ಗೆ ಬೆಳಿಗ್ಗೆ ಹೋಗಬೇಕಾದರೆ ಅಲ್ಲೆಲ್ಲೂ ಜಾಗ ಇಲ್ಲ. ಕನಿಷ್ಠ ಎರಡು ಮೂರು ಕಿಮೀ ಹೋಗಬೇಕಾಗುತ್ತದೆ. ಒಂದು ಪಕ್ಷ ತೋಟಕ್ಕೆ ಹೋದರೆ ಏಕೆ ನಮ್ಮ ತೋಟಕ್ಕೆ ಬರುತ್ತೀರಿ ಅಂತ ದೊಡ್ಡ ಗಲಾಟೆ ಮಾಡುತ್ತಾರೆ. ಬಹಳಷ್ಟು ಹರಿಜನರಿಂದ ಕೂಡಿರುವ ಗ್ರಾಮ ಅದು. ಬಡವರು, ಕಷ್ಟಪಟ್ಟು ಕೆಲಸ ಮಾಡುವಂಥವರು ಎಂದು

೧-೧೫ ಪಿ. ಎಂ.

ಕ್ಷಣ ಚೀಫ್ ಸೆಕ್ರೇಟರಿ ಹತ್ತಿರ ಬಂದೆ, ಒಂದು ಕಮ್ಯೂನಿಟಿ ಲೆಟ್ರಿನನ್ನು ಹರಿಜನರ ಮಹಿಳೆಯರಿಗಾಗಿ ಕಟ್ಟುವುದು ಸಾಧ್ಯವೇ ಎಂದು ಕೇಳಿದ್ದಕ್ಕೆ ನಮಗೆ ಪ್ರಾವಿಜನ್ ಇಲ್ಲ, ದುಡ್ಡಿಲ್ಲ ಎನ್ನುತ್ತಾರೆ. ಲೆಟ್ರಿನ್ ಕಟ್ಟಿಸುವುದರ ಜೊತೆಗೆ ಸಾಕಷ್ಟು ಪ್ರಮಾಣದ ನೀರಿಗಾಗಿ ಒಂದೊಂದು ಪ್ರತ್ಯೇಕ ಬೋರ್‌ವೆಲ್ ಅಳವಡಿಸಬೇಕಾಗಿದೆ. ಈ ಬಗ್ಗೆ ಕೇವಲ ಮಾತಿನಿಂದ ಎಲ್ಲಾ ಚರ್ಚೆಯಾಗುತ್ತಿದೆಯೇ ಹೊರತು ನಿರ್ದಿಷ್ಟವಾದ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿಲ್ಲ. ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕನಿಷ್ಠ ಶೌಚಾಲಯಗಳನ್ನು ನಿರ್ಮಿಸಲಿಕ್ಕೆ ಅದರಲ್ಲೂ ಮಹಿಳೆಯರ ಹರಿಜನ ಗಿರಿಜನ ಮಹಿಳೆಯರ ಶೌಚಾಲಯಕ್ಕೆಂದು ಸರ್ಕಾರ ಪ್ರತಿವರ್ಷ ೧ ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಮುಂದೆ ಬರಬೇಕು. ಈ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡರೆ ಮಾತ್ರ ನಿಮ್ಮ ಮೇಲೆ ನಮಗೆ ನಂಬಿಕೆ ಬರುತ್ತದೆ. ಅದರ ಹೊರತು ಕೇವಲ ಬಜೆಟ್ ಭಾಷಣದಲ್ಲಿ ಹೇಳಿದರೆ ಅದನ್ನು ಕೇಳಿ ಕೇಳಿ ನಮಗೂ ಸಾಕಾಗಿದೆ. ಮಾನ್ಯ ತಿಮ್ಮಪ್ಪನವರು ಹೇಳಿದಂತಹ ಮಾತು ಬಹಳ ಒಳ್ಳೆಯದು. ಸರಕಾರ ಅದನ್ನು ಸರಿಯಾಗಿ ಇಂಪ್ಲಿಮೆಂಟ್ ಮಾಡಬೇಕಾಗುತ್ತದೆ. ನಿರ್ದಿಷ್ಟವಾದ ಹಣವನ್ನು ಪ್ರತಿ ಗ್ರಾಮದಲ್ಲಿ ಅಂದರೆ ೧ ಲಕ್ಷ ರೂಪಾಯಿಯನ್ನು ೧ ವರ್ಷಕ್ಕೆ ಪ್ರತಿ ಗ್ರಾಮಕ್ಕೆ ಖರ್ಚು ಮಾಡಿದ್ದೇ ಆದರೆ ಬಡ ಮಹಿಳೆಯರಿಗೆ ಶೌಚಾಲಯ ಸೌಕರ್ಯವನ್ನು ಮಾಡಿಕೊಡಬಹುದು. ಮಾನವೀಯತೆಯ ದೃಷ್ಟಿಯಿಂದ ಅದನ್ನು ಒದಗಿಸಿಕೊಡಬೇಕೆಂದು ನಾನು ಕೇಳುತ್ತಿದ್ದೇನೆ. ನಮ್ಮ ಪಕ್ಷದ ಸಭೆಯಲ್ಲಿ ಕೂಡ ಇದನ್ನು ಹೇಳಿದ್ದೇವೆ. ಪ್ರತಿ ಗ್ರಾಮಕ್ಕೆ ೧ ಲಕ್ಷ ರೂಪಾಯಿಗಳನ್ನು ಮಹಿಳೆಯರ ಶೌಚಾಲಯಕ್ಕೆ ಕೊಡಬೇಕು, ಇಲ್ಲದೇ ಹೋದರೆ ಅದು ಭಾಷಣದಲ್ಲೇ ಉಳಿಯುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಬಹಳ ದೊಡ್ಡ ಪ್ರಮಾಣದಲ್ಲಿ ಸ್ಯಾನಿಟೇಷನ್ ಕೆಲಸ ಮಾಡಲು ಹಣ ಜಾಸ್ತಿ ಇಟ್ಟಿದ್ದೇವೆ. ಇದಲ್ಲದೆ ಪ್ರತಿಯೊಂದು ಗ್ರಾಮ ಪಂಚಾಯತಿಗೆ ೧ ಲಕ್ಷ ರೂಪಾಯಿ ಕೊಡಬೇಕೆಂದು ಸ್ಪಷ್ಟವಾಗಿ ಹೇಳಿದ್ದಾರೆ. ೧ ಲಕ್ಷ ರೂಪಾಯಿನಂತೆ ೫೬ ಸಾವಿರ ಗ್ರಾಮಗಳಿಗೆ ಕೊಡಲು ೫೬ ಕೋಟಿ ಅದೇ ಆಗುತ್ತದೆ.

ಶ್ರೀ ಆರ್. ನಾರಾಯಣ್.—ಆದರೂ ಕೂಡ ಇವರಿಗೆ ಅನುಕೂಲವಾಗುತ್ತದೆ. ನೂರಕ್ಕೆ ೮೦ ಭಾಗ ಜನ ಹಳ್ಳಿಯಲ್ಲಿ ವಾಸ ಮಾಡುತ್ತಿದ್ದಾರೆ. ಈ ಸೌಕರ್ಯ ಕಲ್ಪಿಸದಿದ್ದರೆ ಅವರು ಓಟು ಕೊಡುವುದಿಲ್ಲವೆಂದು ಹೇಳುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಅದರಲ್ಲೂ ಮಹಿಳೆಯರ ಶೌಚಾಲಯಕ್ಕೆ ಅನುಕೂಲ ಮಾಡಿಕೊಡಬೇಕು. ಬೃಹತ್ ಪ್ರಮಾಣದಲ್ಲಿ ಈ ಬಗ್ಗೆ ಕ್ರಮ ತೆಗೆದುಕೊಂಡಿದೆ ಎಂದು ಹೇಳುತ್ತಿದ್ದಾರೆ. ಇದೇ ಮಾತನ್ನು ೪ ವರ್ಷದಿಂದ ಕೇಳುತ್ತಿದ್ದೇವೆ. ಬರೀ ಭಾಷಣದಲ್ಲಿ ಹೇಳುತ್ತೀರಿ. ಇದಕ್ಕೆ ತಕ್ಕಂತಹ ಹಣ ಕೊಡಬೇಕು. ಬೃಹತ್ ಪ್ರಮಾಣದಲ್ಲಿ ಕಾರ್ಯಕ್ರಮ ಕೈಗೊಳ್ಳುತ್ತೇವೆಂದು ಹೇಳುವುದನ್ನು ನಮಗೂ ಕೇಳಿ ಕೇಳಿ ಸಾಕಾಗಿದೆ.

ಶ್ರೀ ಎಂ. ವೈ. ಘೋರ್ಪಡೆ.—ಪಂಚಾಯತಿಯಲ್ಲಿ ವಿಶೇಷವಾಗಿ ಹೆಣ್ಣು ಮಕ್ಕಳಿಗೋಸ್ಕರ ಸ್ಯಾನಿಟೇಷನ್ ಅರೇಂಜ್‌ಮೆಂಟ್ಸ್ ಬಗ್ಗೆ ಪ್ರಯತ್ನ ಮಾಡುವುದಾದರೆ ಅದಕ್ಕೆ ಹಣದ ಅಭಾವವಿಲ್ಲವೆಂದು ಬಹಿರಂಗವಾಗಿ ನಾನು ಹೇಳುತ್ತಿದ್ದೇನೆ. ಅಭಾವವಿದ್ದರೆ ದಯವಿಟ್ಟು ಹೇಳಿ, ನಾನು ಮಾಡಿಸಿ ಕೊಡುತ್ತೇನೆ.

ಶ್ರೀ ಆರ್. ನಾರಾಯಣ್.—ಹಣ ಕೊಡದೆ ಬರೀ ಅಭಾವವಿಲ್ಲವೆಂದು ಹೇಳಿದರೆ ಸರಿಯಲ್ಲ. ಅವಕ್ಕೆ ಬೇಕಾದ ಹಣವನ್ನು ಕೊಡಿ. ಹಣ ಕೊಡದೆ ಕೆಲಸವಾಗುತ್ತಿಲ್ಲ ಅಂದರೆ ಏನು ಅರ್ಥ?

ಶ್ರೀ ಕಾಗೋಡು ತಿಮ್ಮಪ್ಪ.—ತತ್ವಶಃ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಮತ್ತು ಸದನದ ಸದಸ್ಯರ ಮಾನಸಿಕವಾದ ಗೊಂದಲವೇನು ಇದೆ ಎನ್ನುವುದನ್ನು ತಿಳಿದುಕೊಂಡಿದ್ದೀರಿ. ಸೂಕ್ತವಾದ ಕಾರ್ಯಕ್ರಮ ಈ ಬಗ್ಗೆ ತಮ್ಮಿಂದ ಹೊರಗೆ ಬರುತ್ತದೆ ಎಂಬ ವಿಶ್ವಾಸವನ್ನು ನಾವು ಇಟ್ಟುಕೊಂಡಿದ್ದೇವೆ. ಇದು ಮಾನವೀಯತೆ ದೃಷ್ಟಿಯಿಂದ ಆಗಲೇಬೇಕಾದಂತಹ ಕೆಲಸ. ಎಷ್ಟು ಹಣ ಖರ್ಚು ಮಾಡಿದರೂ ಚಿಂತೆಯಿಲ್ಲ. ಇನ್ನೊಂದು ವಿಚಾರವನ್ನು ಹೇಳಬೇಕಾಗಿದೆ. ಇವತ್ತಿನ ವರೆಗೂ ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಿಗೆ ವೈದ್ಯರನ್ನು ನೇಮಕ ಮಾಡಿಲ್ಲ. ಇದರ ಬಗ್ಗೆ ತುಂಬಾ ಬೇಸರ ಇದೆ. ಸಂಬಂಧಪಟ್ಟ ಮಂತ್ರಿಗಳನ್ನು ತರಾಟೆಗೆ ತೆಗೆದುಕೊಳ್ಳಬೇಕಾದ ಅಗತ್ಯ ಇದೆ. ೨-೩ ವರ್ಷವಾದರೂ ಕೂಡ ಹಾಗೇ ಖಾಲಿ ಇವೆ. ಈ ಒಂದು ತಿಂಗಳೊಳಗಾಗಿ ಎಲ್ಲಾ ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಿಗೆ ವೈದ್ಯರನ್ನು, ಕಾಂಪೌಂಡರ್‌ಗಳನ್ನು ನರ್ಸ್‌ಗಳನ್ನು ಕಳಿಸಬೇಕು, ಇದು ಮುಖ್ಯವಾದ ಕೆಲಸ. ಅನೇಕ ಆಸ್ಪತ್ರೆಗಳಲ್ಲಿ ೨-೩ ವರ್ಷದಿಂದ ಖಾಲಿ ಬಿದ್ದರೆ ಅವುಗಳ ಸ್ಥಿತಿ ಏನಾಗಬಹುದು ಎಂದು ಯೋಚನೆ ಮಾಡತಕ್ಕಂತಹ ಸಂದರ್ಭ ಬಂದಿದೆ. ಮೊನ್ನೆ ಕೂಡ ಕೇಳಿದ್ದೇನೆ. ಈ ವರ್ಷದ ಅಂದರೆ ೧೯೯೩-೯೪ರ ಸಾಲಿನ ಔಷಧಿಗಳು ಪೂರ್ಣ ಪ್ರಮಾಣದಲ್ಲಿ ಸರಬರಾಜು ಆಗಿಲ್ಲ. ಅದನ್ನು ಮಾರ್ಚ್ ತಿಂಗಳೊಳಗೆ ಪೂರೈಸಲು ಆಗದೇ ಹೋದರೆ ಏಪ್ರಿಲ್ ತಿಂಗಳೊಳಗಾಗಿ ೧೯೯೩-೯೪ರ ಸಾಲಿನ ಔಷಧಿಗಳನ್ನು ಸರಬರಾಜು ಮಾಡತಕ್ಕಂತಹ ಕೆಲಸ ಸರಕಾರದಿಂದಾಗಬೇಕು. ಇನ್ನು ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಅದಕ್ಕೆ ಹೆಚ್ಚು ಆದ್ಯತೆ ನೀಡಿದ್ದಾರೆ. ಆದರೂ ಕೈಗಾರಿಕಾ ಕ್ಷೇತ್ರದಲ್ಲಿ ನಿರೀಕ್ಷಿಸಿದ ಮಟ್ಟದಲ್ಲಿ ಪ್ರಗತಿಯನ್ನು ಸಾಧಿಸಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಒಂದು ದೃಢವಾದ ಹೆಜ್ಜೆಯನ್ನು ಕೈಗಾರಿಕಾ ಕ್ಷೇತ್ರದಲ್ಲಿಟ್ಟು, ಅದನ್ನು ವಿಸ್ತಾರ ಮಾಡಬೇಕು, ಹೆಚ್ಚು ಕೈಗಾರಿಕೆಗಳನ್ನು ತರಬೇಕು, ಇಲ್ಲಿ ಅವರಿಗೆ ಪ್ರೋತ್ಸಾಹ ಕೊಡಬೇಕೆನ್ನುವ ರೀತಿಯಲ್ಲಿ ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಅದು ಕಾರ್ಯಗತಕ್ಕೆ ಬರಬೇಕು. ಸರಕಾರ ಕೊಟ್ಟಿರತಕ್ಕಂತಹ ಅಂಕಿ ಅಂಶಗಳಿಂದ ನೋಡುವುದಾದರೆ ಈಗಾಗಲೇ ಈ ವರ್ಷ ಸುಮಾರು ೧೧,೫೦೦ ಕೋಟಿ ರೂ. ಬಂಡವಾಳ ತೊಡಗಿಸುವ ಕಾರ್ಖಾನೆಗಳಿಗೆ ಇವತ್ತು ಮಂಜೂರಾತಿ ನೀಡಿದ್ದೀರಿ. ಇನ್ನೂ ಸ್ವಲ್ಪ ದಿವಸದಲ್ಲಿ ೯೫೦೦ ಕೋಟಿ ರೂಪಾಯಿಗಳ ಬಂಡವಾಳದ ಕೈಗಾರಿಕೆಗಳಿಗೆ ಮಂಜೂರಾತಿ ನೀಡತಕ್ಕಂತಹ ಸಂದರ್ಭ ಇದೆ ಎಂದು ಹೇಳಿದ್ದಾರೆ. ೧೯೯೩-೯೪ನೇ ಸಾಲಿನಲ್ಲಿ ಒಟ್ಟು ಸುಮಾರು ೧೯-೨೦ ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳದ ಈ ಕೈಗಾರಿಕೆಗಳಿಗೆ ಮಂಜೂರಾತಿಯನ್ನು ಸರ್ಕಾರ ಇವತ್ತು ಕೊಟ್ಟಿದೆ. ಇದು ಒಳ್ಳೆಯದು. ಇದು ಸ್ವಾಗತಾರ್ಹವಾಗಿರತಕ್ಕಂಥ ವಿಚಾರ. ಇವತ್ತು ಕೈಗಾರಿಕೆಗಳನ್ನು ಜಾಸ್ತಿ ಮಾಡಬೇಕು, ಇವತ್ತು ಸರ್ಕಾರಿ ಕ್ಷೇತ್ರದಲ್ಲಿ ನಮ್ಮ ಎಲ್ಲ ಯುವಕರಿಗೆ ಅಥವಾ ದುಡಿಮೆ ಮಾಡತಕ್ಕಂಥ ಕೈಗಳಿಗೆ ಉದ್ಯೋಗವನ್ನು ಕೊಡುವುದಕ್ಕೆ ಶಕ್ತಿ

ಇಲ್ಲ. ಇವತ್ತು ಕೈಗಾರಿಕೆಗಳು ಜಾಸ್ತಿಯಾದರೆ ಮಾತ್ರ ಕರ್ನಾಟಕದಲ್ಲಿರತಕ್ಕಂಥ ಯುವಕರಿಗೆ ಮತ್ತು ದುಡಿಯತಕ್ಕಂಥ ಕೈಗಳಿಗೆ ಉದ್ಯೋಗವನ್ನು ಕೊಡುವುದಕ್ಕಾಗುತ್ತದೆ. ಇವತ್ತು ಸರ್ಕಾರ ಕೊಟ್ಟಿರತಕ್ಕಂಥ ಅಂಕಿಅಂಶಗಳ ಪ್ರಕಾರ ಸುಮಾರು ೧೫ ಲಕ್ಷ ಜನ ಉದ್ಯೋಗಕ್ಕಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ಆದರೆ ಸರ್ಕಾರಿ ಕ್ಷೇತ್ರದಲ್ಲಿ ಉದ್ಯೋಗಗಳು ಸೃಷ್ಟಿಯಾಗತಕ್ಕಂಥದ್ದು ಕೇವಲ ಒಂದೂವರೆ ಪರ್ಸೆಂಟ್ ಮಾತ್ರ. ಇನ್ನು ಉಳಿದಿರತಕ್ಕಂಥ ಜನರಿಗೆ ಉದ್ಯೋಗ ಸಿಗದೇ ಇರತಕ್ಕಂಥ ಪರಿಸ್ಥಿತಿಯಾಗಿದೆ. ಇವತ್ತು ಅದರಲ್ಲೂ ಕೂಡ ಇತ್ತೀಚಿನ ವರ್ಷಗಳಲ್ಲಿ ಒಂದು ದಶಕದಿಂದೀಚೆಗೆ ಎಲ್ಲಾ ಕಡೆ ಶಾಲೆಗಳನ್ನು, ಕಾಲೇಜುಗಳನ್ನು ನಾವು ಹೆಚ್ಚು ಮಾಡಿದ್ದೇವೆ. ಹೆಚ್ಚು ಜನ ವಿದ್ಯಾವಂತರು ಇವತ್ತು ಹೊರ ಬರುತ್ತಿದ್ದಾರೆ. ವಿದ್ಯಾವಂತರಾದಂತೆ ಅವರು ಹೊಸ ಉದ್ಯೋಗಕ್ಕಾಗಿ ಕಾತುರರಾಗಿದ್ದಾರೆ. ಕಾಯುತ್ತಿದ್ದಾರೆ. ಅವರಿಗೆ ಉದ್ಯೋಗವನ್ನು ಸೃಷ್ಟಿ ಮಾಡತಕ್ಕಂಥ ಕ್ಷೇತ್ರಗಳನ್ನು ನಾವು ಸೃಷ್ಟಿ ಮಾಡದೇ ಹೋದರೆ, ಆ ಒಂದು ವಾತಾವರಣವನ್ನು ನಾವು ನಿರ್ಮಾಣ ಮಾಡದೇ ಹೋದರೆ ನಾವು ನಿರುದ್ಯೋಗಿಗಳಿಗೆ ನಿರಾಶೆಯನ್ನುಂಟು ಮಾಡಿದಂತಾಗುತ್ತದೆ; ಆ ದೃಷ್ಟಿಯಿಂದ ಈ ಕೈಗಾರಿಕಾ ಕ್ಷೇತ್ರದಲ್ಲಿ ಇಷ್ಟು ದೊಡ್ಡ ಮೊತ್ತದ ಬಂಡವಾಳವನ್ನು ಇವತ್ತು ಏನು ಆಕರ್ಷಣೆ ಮಾಡಿದ್ದಾರೆ, ಇದಕ್ಕೆ ವ್ಯಾಪಕವಾಗಿ ಒಂದು ವ್ಯವಸ್ಥೆಯನ್ನು ಮಾಡಬೇಕು. ಅದರಲ್ಲಿ ನಾನು ವಿಶೇಷವಾಗಿ ಏನು ಹೇಳುತ್ತೇನೆ ಎಂದರೆ, ನಿರುದ್ಯೋಗಿಗಳು ಅಂದರೆ ಉದ್ಯೋಗವನ್ನು ಬಯಸತಕ್ಕಂಥ ಯಾರು ಯಾರು ಹೆಸರನ್ನು ನೋಂದಾಯಿಸಿ ಕೊಂಡಿದ್ದಾರೆ. ಅವರಿಗೆಲ್ಲಾ ಒಂದು ಗುರುತಿನ ಚೀಟಿಯನ್ನು ಕೊಡಬೇಕು. ಯಾವ ಯೋಜನೆಗಳಾದರೂ ಪರವಾಗಿಲ್ಲ. ಈಗಿನ ಅನೇಕ ಯೋಜನೆಗಳಲ್ಲಿ ಸ್ವಯಂ ಉದ್ಯೋಗ ಯೋಜನೆ ಇದೆ, ಎಸ್.ಸಿ. ಎಸ್.ಟಿ. ಕಾರ್ಪೊರೇಷನ್ ಆಗಬಹುದು, ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮವಾಗಬಹುದು ಅಥವಾ ಹಣಕಾಸಿನ ಸಂಸ್ಥೆಗಳು ಕೂಡ ಇದ್ದಾವೆ. ಯಾವ ಯಾವ ಕ್ಷೇತ್ರದಲ್ಲಿ ಯಾರ್ಯಾರಿಗೆ ಕೆಲಸ ಕೊಡುತ್ತಾರೆ ಎನ್ನುವುದರ ಪಟ್ಟಿಯನ್ನು ಕೂಡ ತಯಾರು ಮಾಡಬೇಕು. ಅದರ ಜೊತೆಗೆ ಯಾವ ಕೈಗಾರಿಕೋದ್ಯಮಿಗಳು ನಮ್ಮ ರಾಜ್ಯದಲ್ಲಿ ಬಂದು ಅಥವಾ ಸ್ಥಳೀಯ ಕೈಗಾರಿಕೋದ್ಯಮಿಗಳಾದರೂ ಆಗಬಹುದು, ಹೊರಗಿನವರಾದರೂ ಆಗಬಹುದು. ಯಾರು ಮುಂದೆ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಈ ನಿರುದ್ಯೋಗಿಗಳಿಗೆ ಖಾಯಂ ಕೆಲಸ ಕೊಡುವುದಕ್ಕೆ ಅವರು ಮುಂದೆ ಬಂದರೆ ಅಂಥ ಜನರಿಗೆ ವಿಶೇಷವಾಗಿ ಧನ ಸಹಾಯವನ್ನು ಅಥವಾ ಸಬ್ಸಿಡಿಯನ್ನು ಕೊಡುವ ಕೆಲಸ, ವಿದ್ಯುಚ್ಛಕ್ತಿಯನ್ನು ಕೊಡುವ ಕೆಲಸ, ಭೂಮಿಯನ್ನು ಕೊಡುವ ಕೆಲಸ ಮಾಡಬೇಕು. ಏಕೆಂದರೆ ಆ ಕ್ಷೇತ್ರದಲ್ಲಿ ನಮ್ಮ ನಿರುದ್ಯೋಗಿಗಳನ್ನು ತೊಡಗಿಸಬೇಕಾದಂಥ ಅಗತ್ಯವಿದೆ. ಇಲ್ಲಿ ಮುಖ್ಯವಾಗಿ ನೋಂದಾವಣೆ ಮಾಡಿಸಿಕೊಂಡಿರುವವರು ಕನ್ನಡಿಗರೇ ಆಗಿರುವುದರಿಂದ ಕನ್ನಡಿಗರಿಗೇ ಇಲ್ಲಿ ಉದ್ಯೋಗ ಸಿಗಬೇಕು. ಆ ದೃಷ್ಟಿಯಿಂದ ಕೈಗಾರಿಕೋದ್ಯಮಿಗಳು ಇಲ್ಲಿಗೆ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದಾಗ ಅವರಿಗೆ ನಾವು ಕೊಡುವಂಥ ಎಲ್ಲಾ ಸಾಲ ಸೌಲಭ್ಯಗಳು ಏನಿವೆ, ಅವುಗಳು ನಮ್ಮ ನಿರುದ್ಯೋಗಿ ಯುವಕರಿಗೆ ಉದ್ಯೋಗ ಕೊಡುವ ಒಂದು ಕ್ಷೇತ್ರವನ್ನಾಗಿ ಪರಿಗಣಿಸಬೇಕು. ಅದಕ್ಕೆ ಸರ್ಕಾರ ಸೂಕ್ತವಾದ ಒಂದು ವ್ಯವಸ್ಥೆಯನ್ನು ಮಾಡಬೇಕು. ಈ ರೀತಿ ನಮ್ಮ ನಿಯಮಗಳನ್ನು ರೂಪಿಸಬೇಕು, ಹಾಗೆ ಮಾಡಿದರೆ ನಮ್ಮಲ್ಲಿ ಹೊಸದಾಗಿ ಕೈಗಾರಿಕೆಗಳು ಬರುತ್ತವೆ. ಜೊತೆಗೆ ಈಗ ಬಂದಂಥ ಕೈಗಾರಿಕೆಗಳವರು ಏನು ಮಾಡುತ್ತಿದ್ದಾರೆ ಎಂದರೆ ಹೊರಗಿನವರು ಬಂದರೆ ಅವರು ಒಬ್ಬ ಗುಮಾಸ್ತನ ಸಮೇತವಾಗಿ ಅಲ್ಲಿಂದಲೇ ತಂದು ಇಲ್ಲಿ ಕೈಗಾರಿಕೆಗಳನ್ನು ನಡೆಸುತ್ತಾರೆ ಇದನ್ನು ತಪ್ಪಿಸಬೇಕು. ಅದೊಂದು ಜವಾನನ ಕೆಲಸವಾಗಿರಬಹುದು ಅಥವಾ ಗುಮಾಸ್ತನ ಕೆಲಸವೇ ಆಗಿರಬಹುದು ಅಥವಾ ತಾಂತ್ರಿಕ ಕೆಲಸವೇ ಆಗಿರಬಹುದು, ಆ ಕೆಲಸ ಆ ಊರಿನವರಿಗೆ, ಆ ಪ್ರದೇಶದವರಿಗೆ, ಆ ಪ್ರಾಂತ್ಯದ ಜನರಿಗೇ ಸಿಗಬೇಕು. ಅಂಥ ಒಂದು ವಾತಾವರಣ ಸೃಷ್ಟಿಯಾಗಬೇಕಾದರೆ ಸರ್ಕಾರ ತನ್ನ ಈ ಕೈಗಾರಿಕಾ ನೀತಿಯಲ್ಲಿ ಕೆಲವು ಮೂಲಭೂತವಾದ ಬದಲಾವಣೆಗಳನ್ನು ಮಾಡಿಕೊಳ್ಳಬೇಕು. ಅದರ ಜೊತೆಗೆ ಈ ಕೈಗಾರಿಕೆ ಎಂದರೆ ನಮ್ಮಲ್ಲಿ ಅನೇಕ ಶತಮಾನಗಳಿಂದ ಗುಡಿ ಕೈಗಾರಿಕೆಗಳು ವಂಶಪಾರಂಪರ್ಯವಾಗಿ ಬೆಳೆದು ಬಂದಿವೆ. ಅವುಗಳು ಇವತ್ತು ವಿಸ್ತಾರವಾಗಿ ಮತ್ತು ವಿಶಾಲವಾಗಿ ಬೆಳೆಯುತ್ತಿವೆ. ಆದರೆ ಸಂಪತ್‌ಭರಿತವಾಗಿ ಅವು ಇವತ್ತು ವಿಕಾಸಗೊಳ್ಳುತ್ತಿಲ್ಲ. ಆದ್ದರಿಂದ ಅವು ವಿಕಾಸಗೊಳ್ಳತಕ್ಕಂಥ ಕೆಲಸ ಇವತ್ತು ಆಗಬೇಕು. ಮಾನ್ಯ ಮುಖ್ಯಮಂತ್ರಿಗಳು ಅತ್ಯಂತ ಸಂತೋಷದ ಅಂಶವನ್ನು ತಮ್ಮ ಆಯವ್ಯಯದಲ್ಲಿ ಅಳವಡಿಸಿದ್ದಾರೆ. ಅದೇನೆಂದರೆ, ಈ ಉದ್ಯೋಗ ಜ್ಯೋತಿ ಎನ್ನುವ ಒಂದು ಹೊಸ ಕಾರ್ಯಕ್ರಮವನ್ನು ಅಳವಡಿಸಿದ್ದಾರೆ. ಅದರಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ೧೫೦೦ ರೂಪಾಯಿಗಳ ಪರಿಕರವನ್ನು ಅಂದರೆ 'ಕಿಟ್' ಕೊಡತಕ್ಕಂಥ ಒಂದು ನೀತಿಯನ್ನು ಜಾರಿಗೆ ತಂದಿದ್ದಾರೆ. ಈ ೯೪–೯೫ನೇ ಸಾಲಿನಲ್ಲಿ ೨ ಲಕ್ಷದ ೨೫ ಸಾವಿರ ಜನರಿಗೆ ಈ ಸಹಾಯವನ್ನು ಕೊಟ್ಟರೆ ಹೆಚ್ಚು ಕಡಿಮೆ ಒಂದೊಂದು ಶಾಸನಸಭಾ ಕ್ಷೇತ್ರದಲ್ಲಿ ಒಂದು ಸಾವಿರ ಜನರಿಗೆ ಇದರ ಪ್ರಯೋಜನ ಸಿಗುತ್ತದೆ, ಈ ಪರಿಕರಗಳನ್ನು ಕೊಡುವಾಗ ಸ್ವಲ್ಪ ನಾವು ವಸ್ತುಸ್ಥಿತಿ

ಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಮೊನ್ನೆ 'ಅಕ್ಷಯ' ಕಾರ್ಯಕ್ರಮದ ಪ್ರಕಾರ ಮಕ್ಕಳಿಗೆ ಆಟದ ಸಾಮಾನುಗಳನ್ನು ಕೊಟ್ಟಿದ್ದಾರೆ. ಇಂತಹ ಆಟದ ಸಾಮಾನುಗಳನ್ನು ಕೊಡುವಾಗ ಸ್ವಲ್ಪ ಗಟ್ಟಿಯಾಗಿ ನಾಲ್ಕು ದಿವಸ ಬಾಳಿಕೆ ಬರುವ ಆಟದ ಸಾಮಾನುಗಳನ್ನು ಕೊಡಬೇಕು. ಅದನ್ನು ಬಿಟ್ಟು ಒಂದು ವರ್ಷ ಎರಡು ವರ್ಷದ ಮಕ್ಕಳಿಗೆ ಹುಟ್ಟಿದ ಹಬ್ಬ ಮಾಡುತ್ತಾರಲ್ಲ, ಮಕ್ಕಳಿಗೆ ಹುಟ್ಟಿದ ಹಬ್ಬ ಮಾಡುವಾಗ ಒಂದು ತಮಟೆಯನ್ನು ಕೊಡುತ್ತಾರೆ. ಅದನ್ನು ತೆಗೆದುಕೊಂಡು ಹೋಗಿ ಶಾಲೆಗೆ ಹೋಗುವ ಮಕ್ಕಳ ಕೈಯಲ್ಲಿ ಕೊಟ್ಟರೆ ಅದು ಒಂದು ದಿವಸ ತಾನೆ ಉಳಿಯುತ್ತದೆಯೇ? ಒಂದು ಗಂಟೆ ತಾನೆ ಉಳಿಯುತ್ತದೆಯೇ? ನಾವು ಹಣವನ್ನು ಖರ್ಚು ಮಾಡುತ್ತೇವೆ. ಖರ್ಚು ಮಾಡಿರುವ ಹಣಕ್ಕೆ ಬೆಲೆ ಬರಬೇಕಾದರೆ ಆ ಶಾಲೆಗೆ ಆಟದ ಸಾಮಾನುಗಳನ್ನು ಕೊಡುವಾಗ ಸ್ವಲ್ಪ ಗಟ್ಟಿಮುಟ್ಟಾದ ಸಾಮಾನುಗಳನ್ನು ಕೊಡಬೇಕು, ಏಕೆಂದರೆ ಅಲ್ಲಿ ಹತ್ತು ಮಕ್ಕಳು ಇರುತ್ತಾರೆ. ಮನೆಯಲ್ಲಿ ಆದರೆ ಒಂದೇ ಒಂದು ಮಗು ಇರುತ್ತದೆ. ಆ ಮಗುವಿನ ಕೈಯಲ್ಲಿ ಕೊಟ್ಟರೆ ಅದು ಆಡಿಸುತ್ತಾ ಇರುತ್ತದೆ. ಆದರೆ ಶಾಲೆಗೆ ಕೊಟ್ಟರೆ ಹತ್ತು ಮಕ್ಕಳು ಆಡುವಾಗ ಅದು ಬಹುಬೇಗ ಕೆಟ್ಟುಹೋಗುತ್ತದೆ. ಆದಕಾರಣ ಇಂಥ ಸಾಮಾನುಗಳನ್ನು ಕೊಡಬಾರದು. ಉತ್ತಮವಾದ ಸಾಮಾನುಗಳನ್ನು ಕೊಡಬೇಕು. ಅದರ ಜೊತೆಗೆ ಜಲಾನಯನ ಅಭಿವೃದ್ಧಿ ಪ್ರದೇಶದಲ್ಲಿ ಕೆಲವು ಗುಡಿ ಕೈಗಾರಿಕೋದ್ಯಮಿಗಳಿಗೆ ಕಿಟ್ ಎಂದು ಹೇಳಿ ಕೊಟ್ಟರು. ಉಳಿ, ಬಾಚಿ, ಹ್ಯಾಮರ್ಸ್ ಈ ರೀತಿ ಕೊಟ್ಟರು. ಕೊಟ್ಟಂಥ ಉಳಿಯನ್ನು ತೆಗೆದುಕೊಂಡು ಹೋಗಿ ಕಡಿದರೆ ಅವು ಬೆಂಡ್ ಆಗಿ ಹೋಗುತ್ತವೆ, ಏಕೆಂದರೆ ಅದಕ್ಕೆ ಹದ ಇಲ್ಲ, ಆದ್ದರಿಂದ ೧೫೦೦ ರೂಪಾಯಿಗಳನ್ನು ಒಬ್ಬ ದರ್ಜಿಗೆ ಕೊಡುತ್ತೀರಿ. ಅವನ ಹತ್ತಿರ ಮೆಷಿನ್ ಇದೆ, ನೀವು ೧೫೦೦ ರೂಪಾಯಿಯನ್ನು ಕೊಟ್ಟರೆ ಏನಾಗುತ್ತದೆ, ಸಾಯಂಕಾಲ ಯಾರಿಗೊ ಕೊಟ್ಟುಬಿಡುತ್ತಾನೆ, ಸಾರಾಯಿ ಕುಡಿದು ಹಾಳು ಮಾಡುತ್ತಾನೆ. ಏನೋ ಆಗಿಹೋಗುತ್ತದೆ. ಅದಕ್ಕೆ ಒಬ್ಬ ದರ್ಜಿಗೆ ಕೊಡುವ ಸನ್ನಿವೇಶ ಬಂದರೆ ಬಟ್ಟೆ ಕೊಂಡುಕೊಡಿ. ಆ ಬಟ್ಟೆಯನ್ನು ಉಪಯೋಗ ಮಾಡಿಕೊಂಡು ಮಾರಾಟ ಮಾಡಿದರೆ ಅವನಿಗೆ ಸ್ವಲ್ಪ ಹಣ ಸಿಗುತ್ತದೆ. ಒಬ್ಬ ಯಾರೊ ಕಮ್ಮಾರ ಇರುತ್ತಾನೆ, ಅವನಿಗೆ ಕಬ್ಬಿಣದ ಸಲಾಖೆಗಳನ್ನೋ ಅಥವಾ ಕಬ್ಬಿಣದ ಬ್ಲೇಡ್‌ಗಳನ್ನೋ ಕೊಡಿ. ಆದರಿಂದ ಅವನು ಕತ್ತಿಯನ್ನೋ ಮತ್ತೊಂದು ತಯಾರು ಮಾಡುತ್ತಾನೆ. ಹಾಗೆ ಅವರಿಗೆ ಕಚ್ಚಾವಸ್ತುಗಳನ್ನು ನೀವು ಕೊಟ್ಟರೆ ಈ ಕೈಗಾರಿಕೆಗಳನ್ನು ನಡೆಸುತ್ತಾರೆ. ಅದರಲ್ಲೂ ಗುಡಿ ಕೈಗಾರಿಕೆ ಮಾಡತಕ್ಕಂಥ ಜನರು ಅದನ್ನು ಉಪಯೋಗ ಮಾಡಿಕೊಂಡು ಹೆಚ್ಚಿನ ಲಾಭವನ್ನು ಮಾಡುತ್ತಾರೆ. ಆದ್ದರಿಂದ ಪರಿಕರಗಳನ್ನು ಕೊಡುತ್ತೇವೆ ಎಂದು ಹೇಳಿ ಇಲ್ಲಿ ಎಲ್ಲೋ ಇರುವ ಹೋಲ್‌ಸೇಲ್ ಡೀಲರ್ಸ್‌ಗಳಿಗೆ ನೀವೆಲ್ಲ ಕಿಟ್ ಮಾಡಿಕೊಡಿ ಎಂದು ಹೇಳಿ ಅದರೊಳಗೆ ಬೇಕಾದ ಸಾಮಾನು, ಬೇಡವಾದ ಸಾಮಾನೆಲ್ಲಾ ಕೊಡುವುದಕ್ಕಿಂತ ನಾನು ಹೇಳಿದಂತೆ ಮಾಡಿದರೆ ಒಳ್ಳೆಯದು. ಇದೊಂದು ಒಳ್ಳೆಯ ಕಾರ್ಯಕ್ರಮ. ತುಂಬಾ ಆಲೋಚನೆ ಮಾಡಿ ತಂದಿರತಕ್ಕಂಥ ಕಾರ್ಯಕ್ರಮ. ಪ್ರತಿಯೊಂದು ಶಾಸನಸಭಾ ಕ್ಷೇತ್ರದಲ್ಲಿ ಒಂದೊಂದು ಸಾವಿರ ಜನರಿಗೆ ಇದರ ಲಾಭವಾಗುತ್ತದೆ. ಅಲ್ಲಿ ಇರತಕ್ಕಂಥ ಸಣ್ಣಪುಟ್ಟ ಗುಡಿ ಕೈಗಾರಿಕೆ ಮಾಡತಕ್ಕಂಥ ಜನರಿಗೆ ನಾವು ಕಚ್ಚಾವಸ್ತುಗಳನ್ನು ಕೊಡುವಂಥ ಕೆಲಸ ಮಾಡುವುದಾದರೆ ಖಂಡಿತವಾಗಿ ಇದರಿಂದ ಆ ಇಡೀ ಕುಟುಂಬ ಉದ್ಧಾರವಾಗುತ್ತದೆ. ನಾನು ಮೊನ್ನೆ ಇಂತಹ ಒಂದು ಕೆಲಸಮಾಡಿ ಬಂದಿದ್ದೇನೆ. ಹತ್ತು ಜನರ ಕುಟುಂಬಕ್ಕೆ ಇದೇ ರೀತಿ ಒಂದು ಸಾವಿರ ರೂಪಾಯಿ ಕೊಡುವಂಥ ಒಂದು ಯೋಜನೆಯನ್ನು ಈ ಜಲನಯನ ಪ್ರದೇಶದಲ್ಲಿ ಮಾಡಿದೆ. ಹೋದ ಸಾರಿ ನನಗೆ ಗೊತ್ತಿಲ್ಲದೇ ಹಣ ಕೊಟ್ಟಾಗ ಎಲ್ಲಾ ಕುಡಿದು ಹಾಳು ಮಾಡಿಕೊಂಡರು. ಇವತ್ತು ಹೋಗಿ ನೋಡಿದರೆ ಏನೇನು ಇಲ್ಲ. ಅದಕ್ಕೆ ಚರ್ಮ ಕೆಲಸ ಮಾಡತಕ್ಕಂಥ ಮನುಷ್ಯನಿಗೆ ಚರ್ಮವನ್ನೇ ಕೊಂಡು ಕೊಡಬೇಕು. ಬಟ್ಟೆ ಕೆಲಸ ಮಾಡುವವನಿಗೆ ಬಟ್ಟೆ ಕೊಂಡು ಕೊಡಬೇಕು. ಕಮ್ಮಾರ ಇದ್ದರೆ ಅವನಿಗೆ ಕೆಲವು ಉಪಕರಣಗಳನ್ನು ಮಾಡುವುದಕ್ಕೆ, ಕತ್ತಿ ಮಾಡುವುದಕ್ಕೆ, ಕುಡುಗೋಲು ಮಾಡುವುದಕ್ಕೆ ಕಬ್ಬಿಣವನ್ನು ಕೊಡಬೇಕೆಂದು ಹೇಳಿ ಮೊನ್ನೆ ತೀರ್ಮಾನ ಮಾಡಿದೆವು. ಆ ರೀತಿ ಇವತ್ತು ಮಾಡಿದರೆ ಒಳ್ಳೆಯದು. ಅವರ ಕೈಗೆ ಆಗ ಹಣ ಹೋಗುವುದಿಲ್ಲ. ವಸ್ತು ಹೋಗುತ್ತದೆ. ಹೀಗೆ ಒಂದು ಒಳ್ಳೆಯ ಕೆಲಸ ಮಾಡಿದರೆ ಒಂದು ಒಳ್ಳೆಯ ಹೆಸರು ಬರುತ್ತದೆ. ಆ ಹೆಸರು ಯಾವಾಗ ಉಳಿಯುತ್ತದೆ. ನಾವು ಯೋಜನೆಗಳನ್ನು ಸೃಷ್ಟಿಮಾಡುತ್ತೇವೆ. ಅದು ಕಾರ್ಯಗತವಾಗಿ ಅಂತಿಮವಾಗಿ ಫಲಾನುಭವಿಗಳ ಕೈಗೆ ಹೋಗುವಾಗ ಅದೇ ಪ್ರಮಾಣದಲ್ಲಿರಬೇಕು. ಅದಕ್ಕೆ ಅಷ್ಟೇ ವೇಟೇಜ್ ಇರಬೇಕು. ಅಷ್ಟೇ ಲಾಭ ಅವನಿಗೆ ಸಿಗಬೇಕು. ಇಲ್ಲಿಂದ ಹೊರಟಿದ್ದು ಅಲ್ಲಿಗೆ ಹೋಗಿ ಕರಗಿಹೋಗಬಾರದು. That benefit should reach the last man. ಆ ಒಂದು ದೃಷ್ಟಿಯಿಂದ ಈ ಒಂದು ಕಾರ್ಯಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳು ಏನು ಜಾರಿಗೆ ತಂದಿದ್ದಾರೆ, ಅದನ್ನು ನಾನ ತುಂಬಾ ಸ್ವಾಗತ ಮಾಡುತ್ತೇನೆ. ಈ ರೀತಿ ನೇರವಾದ ಕಾರ್ಯಕ್ರಮವನ್ನು ರೂಪಿಸುವಾಗ Wಂ

should take the realistic picture into consideration. That is all my concern. ಈ ಕೆಲಸವನ್ನು ಮಾಡುವುದರ ಜೊತೆಗೆ ನಮ್ಮಲ್ಲಿ ಅಗಾಧವಾದಂಥ ಈ ನಿರುದ್ಯೋಗ ಏನಿದೆ, ಇದನ್ನು ಹೋಗಲಾಡಿಸಲು ಹೆಚ್ಚು ಉದ್ಯೋಗವನ್ನು ಸೃಷ್ಟಿ ಮಾಡತಕ್ಕಂಥ ವಾತಾವರಣ ನಮ್ಮ ರಾಜ್ಯದಲ್ಲಿ ಆಗಬೇಕು. ಇದು ಈ ಸಾರಿ ಆಗುತ್ತದೆ ಎನ್ನುವ ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ. ಅದರ ಜೊತೆಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಉದ್ಯೋಗ, ಜವಳಿ ಉದ್ಯೋಗ, ಕೈಮಗ್ಗದ ಉದ್ಯೋಗ ಇವು ವ್ಯಾಪಕವಾಗಿವೆ. ಆದ್ದರಿಂದ ಇವುಗಳಿಗೆ ನಾವು ಹೆಚ್ಚು ಪ್ರೋತ್ಸಾಹವನು ಕೊಡಬೇಕು. ಇವುಗಳಿಗಾದರೆ ಹೆಚ್ಚು ಬಂಡವಾಳ ತೊಡಗಿಸಬೇಕಾದಂಥ ಅಗತ್ಯವಿಲ್ಲ, ಯಾವುದೇ ಇನ್‌ಫ್ರಾಸ್ಟ್ರಕ್ಚರ್ ಮಾಡಬೇಕಾದಂಥ ಅಗತ್ಯವಿಲ್ಲ. ಆತನಲ್ಲಿ ಕೌಶಲ್ಯವಿದೆ, ಆತನಿಗೆ ಬುದ್ಧಿ ಬಂದಿದ್ದು, ಅದರಲ್ಲಿ ಆತ ದಕ್ಷತೆ ಪಡೆದಿದ್ದಾನೆ. ಅದರ ಬಗ್ಗೆ ಆತನಿಗೆ ನಾವು ಯಾವ ಶಾಲೆಯಲ್ಲೂ ಕಲಿಸಲಿಲ್ಲ. ವಂಶಪಾರಂಪರ್ಯದಿಂದ ಕಲಿತು ಬಂದಂಥ ವಿದ್ಯೆ ಆತನಲ್ಲಿದೆ. ಆತನಿಗೆ ಮುಖ್ಯವಾಗಿ ಬೇಕಾಗಿರತಕ್ಕಂಥಾದ್ದು ಪ್ರೋತ್ಸಾಹ. ಆತ ರೇಷ್ಮೆ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ನೇಕಾರನಾಗಿರಬಹುದು, ಬಣ್ಣ ಹಾಕುವವನಿರಬಹುದು, ರೇಷ್ಮೆ ಬೆಳೆಸುವವನಾಗಿರಬಹುದು. ಆತನಿಗೆ ಯಾವ ಪ್ರೋತ್ಸಾಹದಾಯಕವಾದ ಪ್ರೇರೇಪಣೆ ಬೇಕೋ ಅದನ್ನು ಆತನಿಗೆ ನಾವು ಕೊಡಬೇಕು. ಹಾಗಾಗಿ ಈ ಎರಡೂ ಕ್ಷೇತ್ರಗಳಲ್ಲಿ ಹೆಚ್ಚು ಕಡಿಮೆ ತರತಕ್ಕಂಥ ಉದ್ಯೋಗಿಗಳಿಗೆ ನಾವು ಪ್ರೋತ್ಸಾಹ ಕೊಡುವುದಾದರೆ ಮತ್ತು ಆತ ಉತ್ಪಾದನೆ ಮಾಡತಕ್ಕಂಥ ವಸ್ತುಗಳ ಗುಣಮಟ್ಟದಲ್ಲಿ ಹಾಗೂ ಅವುಗಳನ್ನು ಮಾರಾಟ ಮಾಡುವುದಕ್ಕೆ ಒಳ್ಳೆಯ ಮಾರುಕಟ್ಟೆಯನ್ನು ಒದಗಿಸಿಕೊಡುವುದರಲ್ಲಿ ನಾವು ಪ್ರಾಮುಖ್ಯತೆ ಕೊಟ್ಟರೆ ಅಥವಾ ನಮ್ಮ ಪ್ರಯತ್ನ ನಡೆಸುವುದಾದರೆ ಖಂಡಿತವಾಗಿಯೂ ಈ ಕ್ಷೇತ್ರದಲ್ಲಿ ಏನು ಸುಮಾರು ಐದು ಲಕ್ಷ ಕುಟುಂಬಗಳವರು ಈ ಉದ್ಯಮದಲ್ಲಿ ತೊಡಗಿದ್ದಾರೋ ಅವರುಗಳನ್ನು ಅತ್ಯಂತ ಸಂಪದ್ಭರಿತ ಉದ್ಯೋಗಿಗಳನ್ನಾಗಿ ನಾವು ಪ್ರೋತ್ಸಾಹಿಸುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಈ ಕ್ಷೇತ್ರಕ್ಕೆ ವಿಶೇಷವಾದ ಆದ್ಯತೆ ಕೊಡಬೇಕಾಗಿದೆ. ಇವೆರಡೂ ನಮ್ಮ ಕರ್ನಾಟಕ ರಾಜ್ಯಕ್ಕೆ ವರವಾಗಿ ಬಂದಿವೆ. ಇವೊತ್ತು ಈ ಉದ್ಯಮವನ್ನು ಯಾರೋ ಪ್ರಾರಂಭಿಸಿದ್ದಲ್ಲ. ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದಂಥ ಕಲೆಗಳು ಮತ್ತು ವೃತ್ತಿಗಳು ಇವು. ಇವುಗಳನ್ನು ಶಾಶ್ವತವಾಗಿ ನಾವು ಉಳಿಸಿಕೊಳ್ಳಬೇಕಾದರೆ ಇದರ ಬಗ್ಗೆ ಹೆಚ್ಚು ವಿಶೇಷ ಗಮನ ಕೊಟ್ಟು ಉತ್ತಮ ಮಾರುಕಟ್ಟೆ ವ್ಯವಸ್ಥೆ ನೋಡಿಕೊಳ್ಳುವುದು ತುಂಬಾ ಅಗತ್ಯವಾಗಿದೆ. ಏಕೆಂದರೆ ನಾನು ಆಗಲೇ ಹೇಳಿದಂತೆ, ನಮ್ಮಲ್ಲಿ ಕಾರ್ಖಾನೆ ನಡೆಸುವ ಕೆಲವರು ಸಿದ್ಧಪಡಿಸಿದ ಉಡುಪುಗಳನ್ನು ಪರದೇಶಗಳಿಗೆ ರಫ್ತು ಮಾಡುತ್ತಾರೆ. ನಾನು ಅವರನ್ನು ಬಟ್ಟೆ ಎಲ್ಲಿಂದ ತರಿಸುತ್ತೀರಿ ಎಂದು ಕೇಳಿದಾಗ ಅವರು ತಮಿಳುನಾಡಿನಿಂದ ತರಿಸುತ್ತೇವೆಂದರು. ಏಕೆ ಬಟ್ಟೆಗಳನ್ನು ಅಲ್ಲಿಂದಲೇ ತರಿಸುತ್ತಾರೆಂದರೆ, ಎಕ್ಸ್‌ಪೋರ್ಟ್ ಕ್ವಾಲಿಟಿ ಮಾಡತಕ್ಕಂಥ ಕೈಮಗ್ಗದವರು ಅಲ್ಲಿದ್ದಾರೆ. ಹಾಗಿದ್ದರೆ, ನಮ್ಮ ರಾಜ್ಯದಲ್ಲಿ ಏಕೆ ಆ ರೀತಿ ಮಾಡುವುದಕ್ಕಾಗುವುದಿಲ್ಲ ? ಅವರಿಗೆ ಏನು ಬೇಕಾಗಿದೆ ? ಅವರಿಗೆ ವಿನ್ಯಾಸ (ಡಿಸೈನ್ಸ್)ಗಳು ಬೇಕು, ಕ್ವಾಲಿಟಿಯನ್ನು ಹೇಗೆ ಮಾಡಬೇಕೆಂದು ಹೇಳಿಕೊಡಬೇಕು. ಅವರಿಗೆ ಇವೆಲ್ಲವೂ ಗೊತ್ತಿದ್ದು, ಸ್ವಲ್ಪ ದುಡಿಯುವ ಬಂಡವಾಳ (ವರ್ಕಿಂಗ್ ಕ್ಯಾಪಿಟಲ್) ಬೇಕಷ್ಟೆ, ಅದನ್ನು ಕಲ್ಪಿಸಿಕೊಟ್ಟರೆ ಆತ ತಮಿಳುನಾಡಿನಿಂದ ಬಟ್ಟೆ ತರಿಸುವುದನ್ನು ಬಿಟ್ಟು, ಇಲ್ಲೇ ಬಟ್ಟೆ ಉತ್ಪಾದನೆ ಮಾಡುತ್ತಾನೆ. ಹಾಗೆ ಉತ್ಪಾದನೆ ಮಾಡಿದ ಬಟ್ಟೆಗಳಿಗೆಲ್ಲಾ ಒಳ್ಳೆಯ ಮಾರುಕಟ್ಟೆ ದೊರಕುವ ಬಗ್ಗೆ ಭರವಸೆ ಸಿಕ್ಕಿದರೆ ಆತ ಇಲ್ಲೇ ಉತ್ಪಾದನೆ ಮಾಡುತ್ತಾನೆ. ಏಕೆ ಇದನ್ನೆಲ್ಲಾ ಮಾಡುವುದಕ್ಕಾಗುವುದಿಲ್ಲ ? ಶಿವಮೊಗ್ಗದ ಸಾಗರದಲ್ಲಿ ನಾಲ್ಕೈದು ವರ್ಷಗಳ ಹಿಂದೆ ಕೈಗಾರಿಕಾ ಶೆಡ್ಡುಗಳನ್ನು ಕಲ್ಪಿಸಿ ಕೊಟ್ಟಿದ್ದು, ಅಲ್ಲಿ ಏನೂ ಕೆಲಸ ಪ್ರಾರಂಭಿಸದಿರುವುದರಿಂದ ಸುಮ್ಮನೆ ಹಾಳಾಗಿದೆ. ನಂತರ 'ನಮಸ್ತೆ' ಗಾರ್ಮೆಂಟ್‌ನವರು ಬಂದು, ನಮಗೆ ಎಲ್ಲಾ ಸೌಲಭ್ಯಗಳನ್ನು ಕೊಡಿಸಿ, ನಾವು ಏನಾದರೂ ಉತ್ಪಾದನೆ ಮಾಡುತ್ತೇವೆ ಎಂದರು. ನಂತರ ಅವರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟೆವು. ಇವೊತ್ತು ಆ ಚರ್ಮದ ಕೈಗಾರಿಕೆಯಲ್ಲಿ ಸುಮಾರು ೫೦೦ ಹೆಣ್ಣುಮಕ್ಕಳು ಕೆಲಸ ಮಾಡುತ್ತಿದ್ದಾರೆ. ಅವರು ಬೇರೊಂದು ಘಟಕ ಪ್ರಾರಂಭ ಮಾಡಿ ಬಟ್ಟೆಯನ್ನೂ ಸಹ ಹೊಲಿಯುತ್ತಾರೆ. ಮಾನ್ಯ ಘೋರ್ಪಡೆಯವರೆ, ತಾವು ಹೋಗಿ ಆ ಚರ್ಮದ ಕೈಗಾರಿಕೆಯನ್ನು ನೋಡಬೇಕು, ಬಹಳಷ್ಟು ಸಂತೋಷವಾಗುತ್ತದೆ. ಅವರು ಬೇರೆ ಕಡೆಯಿಂದ ಬಟ್ಟೆ ತರುತ್ತಾರೆ, ರಫ್ತು ಮಾಡುತ್ತಾರೆ. ಅದಕ್ಕೆ ಇವೊತ್ತು ನಾವು ಪ್ರೋತ್ಸಾಹ ಕೊಡುವಂಥ ಕೆಲಸ ಮಾಡಬೇಕು. ಈ ಕೆಲಸವನ್ನು ನಮ್ಮಲ್ಲಿ ಏಕೆ ಮಾಡುವುದಕ್ಕಾಗುತ್ತಿಲ್ಲ ? ಈಗ ನಮ್ಮಲ್ಲಿ ಗಂಧದ ಸಂಕೀರ್ಣಗಳಿವೆ. ಮುಂಚೆ ನಾವು ಗಂಧದ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಿದೆವು. ಈಗ ಅದು ಕರ್ನಾಟಕ ಸರ್ಕಾರದ ಕರಕುಶಲ ಕೈಗಾರಿಕಾ ಅಭಿವೃದ್ಧಿ ನಿಗಮದ ಮುಖಾಂತರ ನಡೆಯುತ್ತಿದೆ. ಹಿಂದೆ ಪಶ್ಚಿಮ ಘಟ್ಟ ಯೋಜನೆಯ ಅಭಿವೃದ್ಧಿಯಡಿಯಲ್ಲಿ ಸ್ವಲ್ಪ ದುಡ್ಡು ಬಂದಿದ್ದರಿಂದ, ೧೯೭೭-೭೮ರಲ್ಲಿ ಸರ್ಕಾರದ

ಮುಖ್ಯ ಕಾರ್ಯದರ್ಶಿಗಳಾಗಿದ್ದ ಜಿ. ವಿ. ಕೆ. ರಾವ್‌ರವರು ಕೊಟ್ಟ ಸಲಹೆ ಆಧಾರದ ಮೇಲೆ ಇದನ್ನು ಪ್ರಾರಂಭ ಮಾಡಿದ್ದೇವು. ಈಗ ಅದನ್ನು ಸರ್ಕಾರ ನಡೆಸುತ್ತಿರುವುದರಿಂದ ಏನಾಗಿದೆಯೆಂಬುದಕ್ಕೆ ಒಂದು ಉದಾಹರಣೆ. ಅಲ್ಲಿ ಲೇಟೆಸ್ಟ್ ಪ್ರೆಸ್ಸಿಂಗ್ ಮೆಷಿನ್ ತಂದಿದ್ದಾರೆ. ಆದರೆ ಅವುಗಳನ್ನು ಯಾವ ರೀತಿ ಉಪಯೋಗಿಸಬೇಕೆಂದು ಕುಶಲಕರ್ಮಿಗಳಿಗೆ ಗೊತ್ತಿಲ್ಲ. ಅವುಗಳನ್ನು ತಂದು ಎರಡು ವರ್ಷಗಳಾಗಿದೆ. ಅವರುಗಳಿಗೆ ಉಪಯೋಗಿಸಲು ಬರುವುದಿಲ್ಲವಾದ್ದರಿಂದ ಅವುಗಳನ್ನು ಎತ್ತಿಕೊಂಡು ಹೋಗಿ, ಬೇಕಾದಾಗ ತಂದು ಹಾಕಿ ಎಂದು ಹೇಳಿದ್ದೇನೆ. ಖಾಸಗಿಯವರಿಗೆ ವಹಿಸಿದರೆ ಈ ತರಹ ಮಾಡುತ್ತಾರೆ, ಸರ್ಕಾರಿ ಕ್ಷೇತ್ರದಲ್ಲಿ ಮಾಡಿ ಎಂದು ಸೌಲಭ್ಯ ಕಲ್ಪಿಸಿಕೊಟ್ಟರೆ ಹಣದ ದುರುಪಯೋಗ ಮಾಡುತ್ತಾರೆ. ಸರ್ಕಾರಿ ಕ್ಷೇತ್ರದಲ್ಲಿ ಇವುಗಳು ವ್ಯವಸ್ಥಿತವಾಗಿ ನಡೆಯುವುದಕ್ಕಾಗುವುದಿಲ್ಲ, ಪ್ರಾಮಾಣಿಕವಾಗಿ ಕೆಲಸವಾಗುವುದಿಲ್ಲ. ಆದುದರಿಂದ, ಇದನ್ನು ಗಮನದಲ್ಲಿಟ್ಟುಕೊಂಡು ನಾವು ದೊಡ್ಡ-ದೊಡ್ಡ ಉದ್ಯಮಗಳ ಕಡೆಗೆ ಗಮನ ಕೊಡುವುದಕ್ಕಿಂಥ ಸಣ್ಣ ಉದ್ಯಮಗಳ ಕಡೆಗೆ ಲಕ್ಷ್ಯ ವಹಿಸಿ ವಿಶೇಷ ಅಧ್ಯಯನ, ಪ್ರಯತ್ನ, ಆಸಕ್ತಿ ಕೊಡುವುದಾದರೆ ಖಂಡಿತವಾಗಿಯೂ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಜವಳಿ ಮತ್ತು ರೇಷ್ಮೆ ಕ್ಷೇತ್ರ ಹಾಗೂ ಇನ್ನಿತರ ಕೈಗಾರಿಕಾ ಕ್ಷೇತ್ರಗಳನ್ನು ಅತ್ಯಂತ 'ಉಪಯುಕ್ತ ಕ್ಷೇತ್ರ' ಗಳೆಂದು ಪರಿಗಣಿಸಿ, ಇವು ರಫ್ತು ಮಾಡತಕ್ಕಂಥ ಕ್ಷೇತ್ರಗಳೆಂದು ಗುರುತಿಸುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ವಿಚಾರ ಮಾಡಬೇಕು. ಹಿಂದೆ ಸಣ್ಣ ಕೈಗಾರಿಕಾ ಮಂತ್ರಿಗಳಾಗಿದ್ದಂಥ ಶ್ರೀಮಾನ್ ವೀರಪ್ಪ ಮೊಯಿಲಿಯವರು ಆ ಕ್ಷೇತ್ರದ ಇಲಾಖೆಗಳಲ್ಲಿ ಸಾಕಷ್ಟು ಕೆಲಸ ಮಾಡಿರುವುದು ಗೊತ್ತಿದೆ. ಅವರು ಸಣ್ಣ ಕೈಗಾರಿಕಾ ಮಂತ್ರಿಗಳಾಗಿದ್ದಂಥ ಕಾಲದಲ್ಲೇ ಗಂಧದ ಸಂಕೀರ್ಣಗಳನ್ನು ಮಂಜೂರು ಮಾಡಿದ್ದಾರೆ. ಇಂತಹುದೇ ಒಂದು ಸಂಕೀರ್ಣವನ್ನು ಬೀದರ್‌ನಲ್ಲಿ ಸ್ಥಾಪಿಸಿದ್ದಾರೆ. ಆದುದರಿಂದ, ಸಣ್ಣ ಕೈಗಾರಿಕೆಯಲ್ಲಿ ಅವರಿಗೆ ಅಪಾರವಾದ ಅನುಭವವಿರುವುದರಿಂದ ಕರ್ನಾಟಕ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಉತ್ಪಾದನೆಗೆ ಒಳ್ಳೆಯ ಮಾರುಕಟ್ಟೆ ನೋಡಿಕೊಂಡು ಮಾರಾಟ ಮಾಡಬೇಕೆಂದರೆ, ಇರತಕ್ಕಂಥ ವ್ಯವಸ್ಥೆಯಲ್ಲಿ, ಬಂಡವಾಳವಿರತಕ್ಕಂಥ ಜನರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಾವು ಆ ಕ್ಷೇತ್ರವನ್ನು ವಿಸ್ತರಿಸುವುದಕ್ಕೆ ಸಾಧ್ಯತೆಯಿದೆ. ಆದಕಾರಣ ಅದಕ್ಕೆ ಸ್ವಲ್ಪ ವಿಶೇಷವಾದ ಆಸಕ್ತಿ ಮತ್ತು ಗಮನವನ್ನು ಹರಿಸಬೇಕಾದಂಥ ಅಗತ್ಯವಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನೀರಾವರಿ ಕ್ಷೇತ್ರವು ನಮ್ಮ ರಾಜ್ಯದ ದೃಷ್ಟಿಯಿಂದ ಬಹಳ ಪ್ರಮುಖವಾದುದು. ಈ ವರ್ಷ ಈ ಬಾಬಿಗಾಗಿ ಸುಮಾರು ೧೦೨೦ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಹಿಂದಿನ ಎಲ್ಲಾ ವರ್ಷಗಳಿಗೆ ಹೋಲಿಸಿ ನೋಡಿದರೆ ಈ ಕ್ಷೇತ್ರಕ್ಕೆ ಒದಗಿಸುವ ಹಣವೇ ದೊಡ್ಡ ಪ್ರಮಾಣದಲ್ಲಿರುತ್ತದೆ. ಕೃಷ್ಣಾ ಜಲಾನಯನ ಪ್ರದೇಶದಲ್ಲಿ ನಮಗೆ ಕೊಟ್ಟಿರತಕ್ಕ ನೀರಿನ ಪಾಲನ್ನು ಬಳಸಿಕೊಳ್ಳಬೇಕಾದಂಥ ಅಗತ್ಯ ನಮಗೆ ಇದೆ. ಅದನ್ನು ಇನ್ನು ಆರು ವರ್ಷಗಳಲ್ಲಿ ಬಳಸಿಕೊಳ್ಳಬೇಕಾಗಿದೆ. ಅದಕ್ಕೆ ಸುಮಾರು ೨೬೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಲೆಕ್ಕ ಹಾಕಿ ಹೇಳಿದ್ದಾರೆ. ಇದೇನು ದೊಡ್ಡ ಮೊತ್ತದ ಹಣವೇನಲ್ಲ. ಈಗ ಮಾನ್ಯ ಎಸ್. ಎಂ. ಕೃಷ್ಣರವರ ಕೈಯಲ್ಲಿ ನೀರಾವರಿ ಖಾತೆ ಇದೆ. ಅವರು ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿ, ಲೋಕಸಭೆಯ ಸದಸ್ಯರಾಗಿ ಕೆಲಸ ಮಾಡಿ ಒಳ್ಳೆಯ ಅನುಭವವನ್ನು ಪಡೆದಿದ್ದಾರೆ. ಈ ರಾಜ್ಯದಲ್ಲಿ ಕೈಗಾರಿಕಾ ಸಚಿವರಾಗಿ ಸಹ ಕೆಲಸ ಮಾಡಿ ಅಪಾರವಾದ ಅನುಭವವನ್ನು ಪಡೆದಿರತಕ್ಕವರ ಕೈಯಲ್ಲಿ ಈ ನೀರಾವರಿ ಖಾತೆಯನ್ನು ಕೊಟ್ಟಿದ್ದೀರಿ. ಆದರೆ ಅವರು ಈ ಬಾಬಿನಲ್ಲಿ ಸ್ವಲ್ಪ ಹೆಚ್ಚಿನ ಆಸಕ್ತಿ ವಹಿಸಿ ಹೆಚ್ಚು ಕೆಲಸ ಮಾಡುವ ಕಡೆಗೆ ಗಮನವನ್ನು ಹರಿಸಬೇಕು. ಈಗ ಹೇಮಾವತಿಯಿಂದ ತುಮಕೂರಿಗೆ ನೀರನ್ನು ಒದಗಿಸುವ ಸಲುವಾಗಿ ದೊಡ್ಡ ಕಾಲುವೆಯನ್ನು ತಂದು ನಿಲ್ಲಿಸಿಬಿಟ್ಟಿದ್ದೀರಿ. ಈ ಕಾಲುವೆಯಿಂದ ತುಮಕೂರಿಗೆ ನೀರು ಬರುವುದು ಯಾವಾಗ? ಏಕೆಂದರೆ ನೀವು ಇಪ್ಪತ್ತು ಕಿ.ಮೀ. ದೊಡ್ಡ ಕಾಲುವೆಯನ್ನು ಏನು ತೆಗೆದಿದ್ದೀರಿ ಆ ಇಪ್ಪತ್ತು ಕಿ.ಮೀ. ವ್ಯಾಪ್ತಿಯಲ್ಲಿ ಬರತಕ್ಕ ಅಚ್ಚುಕಟ್ಟು ಪ್ರದೇಶವನ್ನು ಅಭಿವೃದ್ಧಿ ಪಡಿಸಿ ನೀರನ್ನು ಕೊಡಬೇಕು. ಅನಂತರ ಮತ್ತೆ ಇಪ್ಪತ್ತು ಕಿ.ಮೀ. ದೊಡ್ಡ ಕಾಲುವೆಯನ್ನು ಮಾಡಿ ಅದನ್ನು ಅಭಿವೃದ್ಧಿ ಪಡಿಸಬೇಕು. ಈ ರೀತಿ ಮಾಡಿದರೆ ನಾವು ಅದಕ್ಕೆ ಖರ್ಚು ಮಾಡತಕ್ಕ ಹಣವು ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತದೆ. ಮತ್ತು ಸಂಗ್ರಹಣೆ ಮಾಡಿರತಕ್ಕ ನೀರು ಭೂಮಿಗೆ ಸರಿಯಾಗಿ ವಿತರಣೆಯಾಗುತ್ತದೆ. ಇಲ್ಲದಿದ್ದರೆ ಖರ್ಚು ಮಾಡಿರತಕ್ಕ ಹಣದಿಂದ ಕಾಲುವೆಯಲ್ಲಿ ನೀರೂ ಬರುವುದಿಲ್ಲ, ಉಪ ಕಾಲುವೆಯೂ ಇರುವುದಿಲ್ಲ, ಫೀಲ್ಡ್ ಚಾನಲ್ ಸಹ ಇರುವುದಿಲ್ಲ, ನೀರೂ ಬರುವುದಿಲ್ಲ. ಆದರೆ ನೀರು ಮಾತ್ರ ಅಣೆಕಟ್ಟೆಯಲ್ಲಿ ಸಂಗ್ರಹವಾಗಿರುತ್ತದೆ. ಇದಕ್ಕೆ ಉಪಯೋಗ ಮಾಡಿದಂಥ ಹಣಕ್ಕೆ ಸರಿಯಾದ ಪ್ರತಿಫಲ ನಮಗೆ ಬರುವುದಿಲ್ಲ. ಇದು ನಾವು ಕಣ್ಣಿಂದ ಕಂಡಿರತಕ್ಕ ದೃಷ್ಟಾಂತಗಳು. ನಿಮಗೆ ಆಶ್ಚರ್ಯವಾಗಬಹುದು. ಒಂದು ಸಾರಿ ಕೃಷ್ಣಾ ಮೇಲ್ದಂಡೆಯ ದೊಡ್ಡ ಕಾಲುವೆಯಲ್ಲಿ ನೀರನ್ನು ನಿಲ್ಲಿಸಿ ಮೀನನ್ನು ಬೆಳೆದಿರತಕ್ಕ ಪ್ರಸಂಗವಿದೆ. ನಾವು ಮೀನನ್ನು ಬೆಳೆಯಲು ಈ ಕಾಲುವೆಯನ್ನು ಮಾಡಿದ್ದು? ಅಲ್ಲ, ಭೂಮಿಗೆ ನೀರನ್ನು ಕೊಟು

ಎಲ್ಲಾ ರೀತಿಯಾದ ಫಸಲನ್ನು ತೆಗೆಯಬೇಕೆಂದು ಮಾಡಿದ್ದು. ಆದರೆ ಆ ರೀತಿ ಮಾಡುವುದಕ್ಕೆ ಅವಕಾಶ ವಿಲ್ಲದೆ ವಿನಾನನ್ನು ಬೆಳೆದಿರತಕ್ಕ ಪ್ರಸಂಗ ಇದೆ. ಆದಕಾರಣ ನಮ್ಮ ಯೋಜನೆಗಳನ್ನು ಕಾರ್ಯಗತ ಮಾಡುವುದಾಗಿದ್ದರೆ ಇದಕ್ಕೆ ಸ್ವಲ್ಪ ತಾಂತ್ರಿಕತೆ ಮತ್ತು ವಾಸ್ತವಿಕತೆ ಈ ಎರಡನ್ನೂ ಜೋಡಿಸಿಕೊಂಡು ಕೆಲಸ ಮಾಡಬೇಕಾಗಿದೆ. ಈಗ ನೀರಾವರಿ ಕ್ಷೇತ್ರ ಬಹಳ ದೊಡ್ಡದಾಗಿ ಬೆಳೆದಿದೆ, ಅದನ್ನು ಬಹಳ ಬೇಗ ಪೂರ್ಣಗೊಳಿಸಬೇಕು, ಆ ನೀರನ್ನು ಬಳಸಿಕೊಂಡು ನಮ್ಮ ಕೃಷಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕು. ಇದನ್ನು ಮಾಡುವುದಕ್ಕೆ ನಮ್ಮ ಹತ್ತಿರ ಹಣವಿದೆ. ನಮ್ಮ ಹತ್ತಿರ ಕಡಿಮೆ ಹಣ ಇದೆ ಎಂದೇನು ಹೇಳ ಬೇಡಿ. ಇರತಕ್ಕ ಹಣವನ್ನು ಯಾವ ರೀತಿಯಲ್ಲಿ ವ್ಯವಸ್ಥಿತವಾಗಿ, ಲಾಭದಾಯಕವಾಗಿ ಖರ್ಚು ಮಾಡ ಬೇಕು, ಇಮಿಡಿಯೇಟ್ ರಿಟರ್ನ್ ಪಡೆಯಬೇಕಾದರೆ ಯಾವ ರೀತಿಯಲ್ಲಿ ಹಣವನ್ನು ಖರ್ಚು ಮಾಡ ಬೇಕು ಎನ್ನುವುದನ್ನು ಮಾನ್ಯ ಘೋರ್ಪಡೆಯವರು ಹೇಳಬೇಕು. ಮಾನ್ಯ ಘೋರ್ಪಡೆಯವರು ಸ್ವತಃ ಕೈಗಾರಿಕೆಗಳನ್ನು ನಡೆಸತಕ್ಕವರು, ತಮಗೆ ಚೆನ್ನಾಗಿ ಇದರ ಬಗ್ಗೆ ಗೊತ್ತಿರುತ್ತದೆ. ತಾವು ಹೇಗೆ ಹಣವನ್ನು ಖರ್ಚು ಮಾಡಬೇಕು ಎಂಬ ಬಗ್ಗೆ ಹೇಳಬೇಕು. ಸುಮ್ಮನೆ ಹಣವನ್ನೆಲ್ಲವನ್ನೂ ತೆಗೆದು ಕೊಂಡು ಹೋಗಿ ಫ್ಯಾಕ್ಟರಿಗಳಿಗೆ ಹಾಕಿಬಿಟ್ಟು ವರ್ಕಿಂಗ್ ಕ್ಯಾಪಿಟಲ್ ಇಲ್ಲದೆಯೆ ಕೆಲವು ಕಾರ್ಖಾನೆಗಳನ್ನು ಮುಚ್ಚತಕ್ಕ ಪರಿಸ್ಥಿತಿ ಬರುತ್ತದಲ್ಲ, ಆ ರೀತಿ ಆಗಬಾರದು. ಆದಕೋಸ್ಕರ ಕೃಷ್ಣಾ ಮೇಲ್ದಂಡೆ ಯೋಜನೆಗೆ ಒಂದು ಹೊಸ ಪ್ರಾಧಿಕಾರವನ್ನು ರಚಿಸಬೇಕೆಂದು ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಇದು ಬಹಳ ಸ್ವಾಗತಾರ್ಹವಾದ ವಿಷಯ. ಅದನ್ನು ಬಹಳ ಬೇಗ ಮಾಡಬೇಕು. ಆದಕ್ಕಾಗಿ ನೀರಾವರಿ ಬಾಂಡುಗಳನ್ನು ಬೇಗನೆ ಬಿಡುಗಡೆ ಮಾಡಿ ಹಣವನ್ನು ಸಂಗ್ರಹ ಮಾಡಬೇಕು. ಮತ್ತು ಕೆಲಸವನ್ನು ಬೇಗನೆ ಮಾಡಬೇಕು. ಇಲ್ಲದಿದ್ದರೆ ನಿಗದಿಯಾದ ಸಮಯದಲ್ಲಿ ಆ ಯೋಜನೆ ಪೂರ್ಣವಾಗುವುದಿಲ್ಲ. ನಾನು ಹಲವಾರು ಯೋಜನೆಗಳನ್ನು ನೋಡಿದ್ದೇನೆ. ಎಲ್ಲಾ ವಾರ್ಷಿಕ ಯೋಜನೆಗಳಲ್ಲಿಯೂ ಹೆಚ್ಚಿನ ಹಣವನ್ನು ಈ ನೀರಾವರಿ ಮತ್ತು ವಿದ್ಯುತ್, ಎಂಬ ಎರಡೇ ಬಾಬಿಗೆ ಕೊಟ್ಟಿರುತ್ತಾರೆ. ಈ ರೀತಿ ಎಷ್ಟು ವರ್ಷ ನಡೆಯುತ್ತದೆ. ೧೯೭೦ರಲ್ಲಿ ಅವರು ಮಂತ್ರಿಗಳಾಗಿದ್ದರು. ಆವತ್ತಿನಿಂದ ಇವತ್ತಿನವರೆಗೆ ಇಪ್ಪತ್ತು ವರ್ಷಗಳಾಗಿವೆ. ಎರಡು ದಶಕಗಳಾಗಿವೆ. ಆದರೂ ಕೂಡ ನಮ್ಮ ಮೊದಲನೆಯ ಆದ್ಯತೆ ನೀರಾವರಿ ಮತ್ತು ವಿದ್ಯುಚ್ಛಕ್ತಿಗಿದೆ. ಇನ್ನೂ ಎರಡು ಶತಮಾನ ಇಲ್ಲವೇ ಎರಡು ದಶಕ ಇದಕ್ಕೆ ಇದೇ ರೀತಿ ಆದ್ಯತೆ ಕೊಡುತ್ತೀರಾ ? ಇದನ್ನು ಕಡಿಮೆ ಮಾಡಬೇಕಲ್ಲವೆ ? ಬೇರೆ ಕಡೆಗೆ ಹಣ ಹೋಗಬೇಕಲ್ಲವೆ ? ಇಡೀ ರಾಜ್ಯದಲ್ಲಿ ನಾವೆಷ್ಟೇ ಪ್ರಯತ್ನ ಮಾಡಿದರೂ ಸಹ ಎಲ್ಲಾ ಭೂಮಿಗೂ ನೀರನ್ನು ಒದಗಿಸಲು ಆಗುವುದಿಲ್ಲ. ಹೆಚ್ಚೆಂದರೆ ಶೇಕಡ ನಲವತ್ತು ಭಾಗ ಭೂಮಿಗೆ ಮಾತ್ರ ನೀರನ್ನು ಕೊಡಬಹುದು. ಉಳಿದ ಎಲ್ಲಾ ಭೂಮಿಯು ಬರಡು ಭೂಮಿ. ಇವತ್ತು ಸಂಡೂರು ತಾಲ್ಲೂಕಿನಲ್ಲಿ ಅಣೆಕಟ್ಟನ್ನು ಕಟ್ಟಲು ಆಗುತ್ತದೆಯೇ ? ಕಟ್ಟಲು ಆಗುವುದಿಲ್ಲ. ಅಲ್ಲಿರುವ ಭೂಮಿ ಒಣ ಮತ್ತು ಬಂಜರು ಭೂಮಿ. ಆದರೂ ಇವತ್ತು ಅವುಗಳಿಗೆ ನೀರನ್ನು ಕೊಡತಕ್ಕ ಯೋಚನೆ ಮಾಡಬೇಕಲ್ಲವೆ ? ಅದಕ್ಕೋಸ್ಕರ ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಬೇಗ ಪೂರ್ಣಗೊಂಡರೆ, ಇರತಕ್ಕ ನೀರನ್ನು ನಾವು ಸರಿಯಾಗಿ ಬಳಸಿಕೊಂಡರೆ ನಮ್ಮ ಬೇರೆ ಭೂಮಿಯ ಕಡೆಗೆ ಗಮನ ಹರಿಸಬಹುದು ಹಾಗೂ ಅಭಿವೃದ್ಧಿ ಪಡಿಸಬಹುದು. ಆದ್ದರಿಂದ ಇದರ ಬಗ್ಗೆ ಸ್ವಲ್ಪ ವಿಶೇಷವಾಗಿ ಒಂದು ಪ್ರಾಧಿಕಾರವನ್ನು ರಚನೆ ಮಾಡಬೇಕು. ನೀರಾವರಿ ಬಾಂಡುಗಳ ಮೂಲಕ ಹಣವನ್ನು ಸಂಗ್ರಹ ಮಾಡಿ ನಿಗದಿಯಾಗಿರುವ ಅವಧಿಯಲ್ಲಿ ಅಂದರೆ ಆರು ವರ್ಷಗಳಿಗೆ ಬದಲಾಗಿ ನಾಲ್ಕು ವರ್ಷಗಳಲ್ಲಿಯೇ ಅದನ್ನು ಪೂರ್ಣಗೊಳಿಸುವ ಕೆಲಸ ಮಾಡಬೇಕು. ಆಲ್‌ಮಟ್ಟಿ ಡ್ಯಾಂ ಮತ್ತು ನಾರಾಯಣಪುರ ಡ್ಯಾಂ ನಲ್ಲಿ ನೀರು ನಿಂತುಬಿಟ್ಟಿದೆ. ಕಾಲುವೆ ಮಾಡಿದ ಪ್ರದೇಶಗಳಲ್ಲಿ ಭೂಮಿಯು ಅಭಿವೃದ್ಧಿಯಾಗಬೇಕು. ಆದರೆ ಕೆಲವು ಕಡೆಗಳಲ್ಲಿ ಅದು ಆಗುತ್ತಿಲ್ಲ, ಸಮತಟ್ಟಾಗಿಲ್ಲ. ಅಲ್ಲಿರತಕ್ಕಂಥ ಕಾಡುಗಳು ಏನಿವೆ ಅಲ್ಲೂ ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಏಕೆ ಮಾಡುವುದಿಲ್ಲ ? ಅಲ್ಲಿಗೆ ಹೋಗುವ ಇಂಜಿನೀಯರುಗಳು. ಎಂ.ಡಿ. ಗಳು ಅಲ್ಲಿಯೇ ವಾಸ ಮಾಡುವುದಿಲ್ಲ. ಅಲ್ಲಿಗೆ ೬ ತಿಂಗಳು ವರ್ಷದಲ್ಲಿ ನಿವೃತ್ತಿ ಹೊಂದುವವರನ್ನು ಪೋಸ್ಟ್ ಮಾಡುತ್ತಾರೆ. ಅವರು ಪ್ರತಿ ಶುಕ್ರವಾರ ಬೆಂಗಳೂರಿಗೆ ಬಂದರೆ ಸೋಮವಾರ ಅಥವಾ ಮಂಗಳವಾರವೇ ಅಲ್ಲಿಗೆ ಹೋಗುವುದು. ಹೀಗೆ ಅವರು ಬೆಂಗಳೂರಿನಲ್ಲಿದ್ದರೆ ಅಲ್ಲಿ ಕೆಲಸ ಹೇಗೆ ಆಗುತ್ತದೆ ? ಅಲ್ಲಿಗೆ ಒಬ್ಬ ಚೀಫ್ ಇಂಜಿನೀಯರ್ ಆಗಲಿ. ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್ ಆಗಲಿ ಹೋಗದೆ ಜಿಲ್ಲಾ ಕೇಂದ್ರಗಳಲ್ಲಿಯೇ ವಾಸ ಮಾಡುತ್ತಾರೆ. ಅವರು ಅಲ್ಲಿ ವಾಸ ಮಾಡುವುದಿಲ್ಲ. ಅವರಿಗೋಸ್ಕರ ಮನೆಗಳಿವೆ ಮತ್ತು ಬೇಕಾದಂತಹ ಅನುಕೂಲಗಳಿವೆ. ಆದರೂ ಅಲ್ಲಿಗೆ ಯಾರೂ ಸಹ ಹೋಗಿ ಸಂಸಾರ ಮಾಡುವುದಿಲ್ಲ. ಏಕೆಂದರೆ ಇವರ ಮಕ್ಕಳಿಗೆ ಅಲ್ಲಿ ಕಾನ್ವೆಂಟ್ ಶಾಲೆಗಳು ಇಲ್ಲ. ಅಲ್ಲಿ ವಾಸ ಮಾಡದಿದ್ದರೆ ಕೆಲಸ ಹೇಗೆ ಆಗುತ್ತದೆ ? ಎಂ.ಪಿ.ಎಂ.ಎಲ್.ನಲ್ಲಿ ಕೆಲಸ ಮಾಡುವ ಎಂ.ಡಿ. ಆಗಲಿ, ಅಧಿಕಾರಿಗಳು ಆಗಲಿ, ಬೆಂಗಳೂರಿನಲ್ಲೇ ವಾಸ ಮಾಡಬೇಕು. ವಿ.ಐ.ಸಿ.

ಯಲ್ಲಿರುವವರು, ಮೈಸೂರು ಷುಗರ್ ಫ್ಯಾಕ್ಟರಿಯಲ್ಲಿರುವವರು ಮಲೆನಾಡು ಡೆವಲಪ್‌ಮೆಂಟ್‌ನಲ್ಲಿ ಕೆಲಸ ಮಾಡುವವರೆಲ್ಲರೂ ಬೆಂಗಳೂರಿನಲ್ಲೇ ವಾಸ ಮಾಡಬೇಕೆಂದರೆ ಕೆಲಸ ಹೇಗೆ ಆಗಬೇಕು. ಈಗ ಮನೆಯ ಕೆಲಸ ಬಿಟ್ಟು ನಿಮಗೆ ಪುರುಸೊತ್ತು ಆದ ಕೂಡಲೇ ಫ್ಯಾಕ್ಟರಿಯ ಕಡೆ ಹೋಗುತ್ತಾರೆ. ಹೋಗದೇ ಇದ್ದರೆ ಮುಚ್ಚಿ ಹೋಗುತ್ತಾರೆ. ಹೀಗೆ ಸಮರ್ಪಕವಾಗಿ ಕೆಲಸ ಮಾಡದೇ ಹೋದರೆ ಯಾವುದೂ ಸಹ ಅಭಿವೃದ್ಧಿಯಾಗುವುದಿಲ್ಲ. ಭೂಮಿಯ ತಳಪಾಯ ಅಭಿವೃದ್ಧಿಯಾಗದಿದ್ದಗೆ ಅಲ್ಲಿ ನೀರನ್ನು ಬಳಸುವುದಕ್ಕೆ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯದಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಏನೆಂದರೆ, ಹಿಂದಿನ ವರ್ಷದಲ್ಲಿ ಈ ವ್ಯತ್ಯಾಸ Potentiality-utilisation ಇದಕ್ಕೆ ಗ್ಯಾಪ್ ಜಾಸ್ತಿ ಇದೆ. Potentiality ಯುಟಿಲೈಜೇಷನ್ ಈ ಸಾರಿಯ ನಮ್ಮ ಪ್ರಯತ್ನದಲ್ಲಿ ಪ್ರಸಕ್ತ ವರ್ಷದಲ್ಲಿ ಇದನ್ನು ನಾವು ಕಡಿಮೆ ಮಾಡಿದ್ದೇವೆ. ಅದಕ್ಕಾಗಿ ಇದಕ್ಕೆ ಸ್ವಲ್ಪ ವಿಶೇಷವಾದಂತಹ ಗಮನ ಕೊಟ್ಟು ಚರ್ಚೆ ಮಾಡಿ ಅಧಿಕಾರಿಗಳನ್ನು ತಾಕತ್ತು ಮಾಡಿ ಕೆಲಸಕ್ಕೆ ಹಚ್ಚಬೇಕು ಎಂದು, ಇದನ್ನು ಕಡಿಮೆ ಮಾಡಿದ್ದೀರಲ್ಲಾ. ಇದು ಒಂದು ಒಳ್ಳೆಯ ಶುಭ ಸೂಚನೆ, ಇದನ್ನು ಮುಂದುವರೆಸಬಹುದು. ಇವತ್ತು ನೀರಾವರಿ ಕ್ಷೇತ್ರದಲ್ಲಿ ವಿಶೇಷವಾದಂತಹ ಗಮನ ಹರಿಸಿ ಕರ್ನಾಟಕ ರಾಜ್ಯದಲ್ಲಿ ನೀರು ಏನು ಸಂಗ್ರಹಣೆ ಮಾಡಿದ್ದೇವೆ ಅದನ್ನು ಬಳಸಿಕೊಳ್ಳುವಂತಹ ಪ್ರಯತ್ನ ಮಾಡಬೇಕು. ಅದರಲ್ಲೂ ಕೂಡ ಕಾವೇರಿ ಜಲಾನಯನ ಪ್ರದೇಶಗಳು ಈ ಯೋಜನಾ ವ್ಯಾಪ್ತಿಗೆ ಬರುವುದಿಲ್ಲ. ಈ ಯೋಜನೆಗೆ ಹೊರತಾಗಿ ಹೆಚ್ಚಿಗೆ ಹಣವನ್ನು ಕೊಟ್ಟು ಅದನ್ನು ಪೂರೈಸಬೇಕಾದಂತಹ ಕೆಲಸವನ್ನು ಮಾಡಬೇಕು. ಇನ್ನೊಂದು ವಿಚಾರವನ್ನು ಶ್ರೀಮಾನ್ ಯಡಿಯೂರಪ್ಪನವರು ಹಾಗೂ ಇತರರು ಪ್ರಸ್ತಾಪ ಮಾಡಿದರು. ಬಗರ್ ಹುಕುಂ ಸಾಗುವಳಿಯ ಬಗ್ಗೆ ವಿವರವಾಗಿ ಸರ್ಕಾರ ಆಯವ್ಯಯದಲ್ಲಿ ನಮೂದು ಮಾಡಿದ್ದಾರೆ. ಇದರ ಬಗ್ಗೆ ಸ್ವಲ್ಪ ಪ್ರಸ್ತಾಪ ಮಾಡಬೇಕಾಗಿದೆ. ೧೯೯೧ನೇ ಇಸವಿಯಲ್ಲಿ ಕಂದಾಯ ಕಾನೂನಿಗೆ ಅಂದರೆ Land Revenue Actಗೆ ತಿದ್ದುಪಡಿ ಮಾಡಿದ್ದಾರೆ. ಬಗರ್ ಹುಕುಂ ಸಾಗುವಳಿ ಮಾಡುವವರಿಗೆ ಮಂಜೂರು ಮಾಡತಕ್ಕದ್ದು ಎಂದು ಅವರು ಹೇಳುವುದರಲ್ಲಿ ಸತ್ಯಾಂಶ ಇದೆ. ನಮ್ಮ ಪಕ್ಷ ಇದರ ಒಂದು ತತ್ವ ಹಾಗೂ ಸಿದ್ಧಾಂತವನ್ನು ಸಂಪೂರ್ಣವಾಗಿ ಒಪ್ಪಿದೆ. ಜೊತೆಗೆ ಇಡೀ ನಮ್ಮ ಶಾಸನ ಸಭೆಯ ಎಲ್ಲಾ ಸದಸ್ಯರೂ ಇದನ್ನು ಒಪ್ಪಿದ್ದಾರೆ. ಅದಕ್ಕೋಸ್ಕರ ಒಂದು ಕಾನೂನನ್ನು ತಂದಿದ್ದಾರೆ. ೧೯೯೧ರ ಫೆಬ್ರವರಿಯಲ್ಲಿ ಇದಕ್ಕೆ ರಾಜ್ಯಪಾಲರು ಒಪ್ಪಿಗೆಯನ್ನು ಕೊಟ್ಟಿದ್ದಾರೆ, ೧೯೯೧ ರಿಂದ ೧೯೯೨ ಮತ್ತು ೧೯೯೨ ರಿಂದ ೯೩ ಮತ್ತು ೯೪ ಈ ಮೂರು ವರ್ಷಗಳು ಕಂದಾಯ ಸಂದಾಯವಾಗಿದೆ. ಈ ಮೂರು ವರ್ಷಗಳಲ್ಲಿ ಮೂರು ಲಕ್ಷ ಅರ್ಜಿಗಳನ್ನು ತೀರ್ಮಾನ ಮಾಡಿದೆ. ಇದೇ ವೇಗದಲ್ಲಿ ಹೋದರೆ ಇನ್ನು ಉಳಿದಿರುವಂತಹ ೮ ಲಕ್ಷ ಅರ್ಜಿಗಳನ್ನು ತೀರ್ಮಾನ ಮಾಡಬೇಕಾದರೆ ಎಷ್ಟು ವರ್ಷಗಳು ಬೇಕು ? ಇನ್ನೂ ೬ ವರ್ಷಗಳು ಬೇಕಾಗಬಹುದು. ಈಗ ಇಲಾಖೆಯ ಅಧಿಕಾರಿಗಳನ್ನು ಕೇಳುತ್ತಾ ಕುಳಿತರೆ ಸಮಯಬದ್ಧವಾಗಿ ಈ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಆಗುವುದಿಲ್ಲ. Certain amount of political will is absolutely necessary in this regard, because ಕಂದಾಯ ಇಲಾಖೆಯಲ್ಲಿ they have their traditional outlook. ರಾಜ ಮಹಾರಾಜರ ಪ್ರಿವಿಲೇಜ್ ಎಲ್ಲವನ್ನೂ ಕಿತ್ತು ಹಾಕುವುದಕ್ಕೆ ಆಗಿಲ್ಲ. ಆ ಕಾನೂನನ್ನು ತಿದ್ದುಪಡಿ ಮಾಡುವಂತಹ ಸಂದರ್ಭದಲ್ಲಿ ನಮ್ಮ ಶಾಸಕಾಂಗ ಪಕ್ಷದಲ್ಲಿ ಒಮ್ಮತದಿಂದ ತೀರ್ಮಾನವಾಗಿತ್ತು. ನಮ್ಮ ಸದಸ್ಯರುಗಳಿಗೂ ಅದು ಗೊತ್ತಿದೆ. ನಮ್ಮ ಮಲೆನಾಡಿನ ಪ್ರದೇಶಗಳಾದ ಹಾಸನ, ಕೂರ್ಗ್, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಅಥವಾ ಹೈದರಾಬಾದ್ ಪ್ರದೇಶ ಇಂತಹ ಭಾಗಗಳಲ್ಲಿ ಕೆಲವು privilages ಇದ್ದವು.

೧.೪೫ ಪಿ.ಎಂ,

ಆದಕಾರಣ ಈ ಬಗ್ಗೆ ವಿಶೇಷವಾಗಿ ಚರ್ಚೆ ಮಾಡಿ, ಪ್ರತ್ಯೇಕವಾಗಿ ಒಂದು ಶಾಸನ ತರೋಣ. ಈಗ ಸದ್ಯಕ್ಕೆ ಅವನ್ನು ಹಾಗೆ ಬಿಟ್ಟು ಉಳಿದಂತಹ ಬಗರ್ ಹುಕುಂ ಸಾಗುವಳಿಯನ್ನು ಮಂಜೂರು ಮಾಡುವುದಕ್ಕೆ ಕಾನೂನು ತರೋಣವೆಂದು ನಾವು ಒಪ್ಪಿಕೊಂಡಿದ್ದೀವಿ. ಈಗ ಏನಾಗಿದೆ, ಆ ಪ್ರಿವಿಲೇಜಸ್‌ನಲ್ಲಿ ಬರತಕ್ಕಂತಹ ಭೂಮಿಗೆ ನಾವು ತಿದ್ದುಪಡಿ ತರದೇ ಹೋದರೆ ಆ ಪ್ರದೇಶದಲ್ಲಿ ಒಬ್ಬನಿಗೆ ನಾವು ಮಂಜೂರು ಮಾಡುತ್ತೇವೆ, ಇನ್ನೊಬ್ಬನಿಗೆ ಮಂಜೂರು ಮಾಡುವುದಕ್ಕಾಗುವುದಿಲ್ಲ. ಆ ಪ್ರಿವಿಲೇಜಸ್ ತೆಗೆದು ಹಾಕುವುದಕ್ಕೆ ದೊಡ್ಡ ಶಾಸನ ಏನೂ ಮಾಡಬೇಕಾದಂತಹ ಅವಶ್ಯಕತೆ ಇಲ್ಲ. ಏಕೆಂದರೆ ಈ ಸೆಕ್ಷನ್ ೭೯(೨)ಗೆ ಹೊಸ ಶಾಸನ ರಚನೆ ಮಾಡಬೇಕಾದ ಅಗತ್ಯ ಇಲ್ಲ.

"Notwithstanding anything contained in Sub-section (1), but subject to such general or special order that may be issued by the Government from time to time, the privilages that are enjoyed either by custom or under any order such privileges in respect of Kumki land, Bane land, Kane land in South Kanara District Betta lands and Hadi lands in North Kanara District, Kan and Soppina lands in Mysore Area, Jamma and Bane in Coorg District and Wet lands in Hyderabad area, shall continue."

Either by general or special order, ಆರ್ಡರ್ ಪ್ರಕಾರ ಇದನ್ನು ಮುಂದುವರೆಸಬಹುದು, ತೆಗೆದು ಹಾಕಬಹುದು. ಅಂದಮೇಲೆ ಇದನ್ನು ಸರ್ಕಾರ ಮಾಡುವುದಕ್ಕೆ ಏನು ತೊಂದರೆ ಇದೆ. ಏಕೆಂದರೆ ನಾನು ಈ ಸದನದಲ್ಲಿ ಹೇಳಬೇಕಾಗಿದೆ. ಏಕೆಂದರೆ ವಿರೋಧಪಕ್ಷದಿಂದ ನಾವು ಕಲಿಯಬೇಕಾದ ಅಗತ್ಯ ಇಲ್ಲ, ಏಕೆಂದರೆ ಆಸಕ್ತಿ ನಮಗೂ ಇದೆ. ನಾವೇ ಶಾಸನ ತಂದವರು ಹಾಗೂ ಕಾರ್ಯಗತ ಮಾಡಿದವರು. ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿದವರು ನಮ್ಮ ಸರ್ಕಾರವೇ. ನಮ್ಮ ಮೇಲೆ ಜವಾಬ್ದಾರಿ ಜಾಸ್ತಿ ಇದೆ. ಆದುದರಿಂದ ಇದನ್ನು ನಮ್ಮ ಕಂದಾಯ ಸಚಿವರಾದ ಮಾನ್ಯ ಧರ್ಮಸಿಂಗ್ ಅಕ್ಟೋಬರ್ ತಿಂಗಳ ಒಳಗೆ, ಇದನ್ನು ನಾವು ಪೂರ್ಣ ಮಾಡುತ್ತೇವೆ ಎಂದು ಹೇಳಿದ್ದಾರೆ ಏಕೆಂದರೆ ಆಯವ್ಯಯದಲ್ಲಿಯೂ ಒಂದು ಮಾತನ್ನು ಸ್ಪಷ್ಟ ಮಾಡಿದ್ದಾರೆ. ೧೯೭೪ನೇ ಸೆಪ್ಟೆಂಬರ್ ತಿಂಗಳ ಆಖೈರು ಒಳಗೆ ಇದನ್ನು ಪೂರ್ಣ ಮಾಡುತ್ತೇವೆ ಎಂದು. ಎಲ್ಲಿ ಆಗುತ್ತದೆ. ಆಗದೇ ಇರುವ ಕೆಲಸಕ್ಕೆ ನಾವು ಏಕೆ ಹೇಳುವುದಕ್ಕೆ ಹೋಗಬೇಕು. ಅದು ಆಗುತ್ತದೆ, ಏಕೆ ಆಗುತ್ತದೆ ಎಂದರೆ ಅದನ್ನು ನಾನು ಮುಂದೆ ಹೇಳುತ್ತೇನೆ. ಏಕೆಂದರೆ ಈ ಪ್ರಿವಿಲೇಜಸ್ ಲ್ಯಾಂಡ್‌ನಲ್ಲಿ ಮನೆ ಮಾಡಿಕೊಂಡಿದ್ದಾರೆ, ಜಮೀನು ಸಾಗುವಳಿ ಮಾಡಿದ್ದಾರೆ, ತೋಟ ಮಾಡಿದ್ದಾರೆ. ಈಗ ಅವರನ್ನು ಎಲ್ಲಿಗೆ ಹಾಕಬೇಕು, ಸಮುದ್ರಕ್ಕೆ ಹಾಕೋಣವೇ ನಾವು, ಅಥವಾ ದೇವರು ಈ ಭೂಮಿಯನ್ನು ಸೃಷ್ಟಿ ಮಾಡಿದ ಹಾಗೆ ಸೃಷ್ಟಿ ಮಾಡಿರತಕ್ಕಂತಹ ಪ್ರಿವಿಲೇಜಸೇ ಇವು. ಬ್ರಿಟಿಷರ ಕಾಲದಲ್ಲಿ ಮನುಷ್ಯರು ಸೃಷ್ಟಿ ಮಾಡಿರತಕ್ಕಂತಹ ಪ್ರಿವಿಲೇಜಸೇ ಇವು. ಅನೇಕ ಪ್ರಿವಿಲೇಜಸ್‌ನ್ನು ನಾವು ಕಿತ್ತು ಹಾಕಿದ್ದೇವೆ. ಇನಾಂ ಲ್ಯಾಂಡ್‌ನ್ನು ಕಿತ್ತು ಹಾಕಿದ್ದೇವೆ. ರಾಜಮಹಾರಾಜರ ಲ್ಯಾಂಡನ್ನು ಕಿತ್ತು ಹಾಕಿದ್ದೇವೆ. ಭೂಸುಧಾರಣ ಕಾನೂನು ಮಾಡಿ ಉಳತಕ್ಕಂತಹ ರೈತರಿಗೆ ಭೂಮಿಯನ್ನು ಮಾಲಿಕತ್ವ ಕೊಟ್ಟಿದ್ದೇವೆ. ಇಷ್ಟೆಲ್ಲಾ ಮಾಡಿ ನಾವು ಈ ಕೀರ್ತಿಯನ್ನು ಕಾಂಗ್ರೆಸ್ ಸರ್ಕಾರ ಮಾಡಿರಬೇಕಾದರೆ ಈ ಲ್ಯಾಂಡ್‌ನಲ್ಲಿ ಭೂಮಿ ಸಾಗುವಳಿ ಮಾಡಿರತಕ್ಕಂತಹ ಜನರಿಗೆ ಈ ಪ್ರಿವಿಲೇಜ್ ಬಗ್ಗೆ ಒಂದು ಆರ್ಡರ್ ಹೊರಡಿಸಿದರೆ ಆಯಿತು. ಅದನ್ನೇ ನಮ್ಮ ಕೂರ್ಗ್ ಜಿಲ್ಲೆಯಲ್ಲಿ ವಿಶೇಷವಾಗಿ ಅನೇಕ ಜನ ಬಡವರು, ಹರಿಜನರು ಅಲ್ಲಿರತಕ್ಕಂತಹ ಗುಡ್ಡಗಾಡಿನಲ್ಲಿ ವಾಸ ಮಾಡತಕ್ಕಂತಹ ಜನ ಸಣ್ಣಪುಟ್ಟ ಕಾಫಿ ತೋಟ ಮಾಡಿಕೊಂಡಿದ್ದಾರೆ. ಮನೆ ಕಟ್ಟಿಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಗೆ ಹೋದರೆ ಜನರು ಜಮೀನಿನಲ್ಲಿ ಮನೆ ಕಟ್ಟಿಕೊಂಡು ಅದನ್ನು ಸಾಗುವಳಿ ಮಾಡಿದ್ದಾರೆ. ನಮ್ಮಲ್ಲಿ ಇರತಕ್ಕಂತಹ ನಮ್ಮ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಲ್ಲಿರತಕ್ಕಂತಹ ಕಾನ್ ಜಮೀನಿನಲ್ಲಿ ಅಲ್ಲಿರತಕ್ಕಂತಹ ಸೊಪ್ಪಿನ ಬೆಟ್ಟದ ಜಮೀನಿನಲ್ಲಿ ಇವತ್ತು ಮನೆ, ತೋಟ ಎಲ್ಲಾ ಮಾಡಿಕೊಂಡಿದ್ದಾರೆ. ಅದನ್ನು ಮಂಜೂರು ಮಾಡುವುದಕ್ಕೆ ನಾವು ಏಕೆ ಹಿಂದು ಮುಂದು ಆಲೋಚನೆ ಮಾಡಬೇಕು. ಅದು ನೈಸರ್ಗಿಕವಾಗಿ ಬಂದಂತಹ ಸಂಪತ್ತು. ಒಪ್ಪುತ್ತೇನೆ ನಾನು, ಆ ಸೊಪ್ಪಿನ ಬೆಟ್ಟ, ಕಾನು, ಆ ಬಾಣೆ ಜಮೀನುಗಳ ಬಗ್ಗೆ ಪೂರ್ವದಲ್ಲಿ ಆ ಪ್ರಿವಿಲೇಜ್‌ನ್ನು ಸೃಷ್ಟಿ ಮಾಡತಕ್ಕಂತಹ ಕಾಲದಲ್ಲಿ ಯಾವ ಸ್ಥಿತಿಯಲ್ಲಿ ಇತ್ತು .ಅದೇ ಸ್ಥಿತಿಯಲ್ಲಿ ಈಗಲೂ ಇದನ್ನು ಹಾಗೆ ಉಳಿಸಿ. ನಾವು ಬೇಡ ಎಂದು ಹೇಳುವುದಿಲ್ಲ. ಈಗ ಅಲ್ಲಿ ಕಾನೂನೂ ಇಲ್ಲ. ಸೊಪ್ಪಿನ ಬೆಟ್ಟವೂ ಇಲ್ಲ. ಸಾಗುವಳಿ ಭೂಮಿ ಇದೆ, ಮನೆ ಇದೆ, ತೋಟ ಇವೆ. ಇದನ್ನು ನಾವು ಮಂಜೂರು ಮಾಡಿಕೊಡುವುದಕ್ಕೆ ಏನು ತೊಂದರೆ ಇದೆ ? ಅದಕ್ಕೆ ಕಾನೂನನ್ನು ತಿದ್ದುಪಡಿ ಮಾಡಬೇಕಾದ್ದು ಇಲ್ಲ. ಸರ್ಕಾರ ಒಂದು ವಿಶೇಷವಾದ ಆಜ್ಞೆ ಹೊರಡಿಸಿದರೆ ಇದನ್ನು ಜಾರಿ ಮಾಡುವುದಕ್ಕೆ ಬರುತ್ತದೆ. ಆದುದರಿಂದ ಬೇಗ ಆಜ್ಞೆ ಹೊರಡಿಸಿ. ಈ ಒಂದು ಪ್ರಿವಿಲೇಜಸ್ ಲ್ಯಾಂಡ್‌ನಲ್ಲಿ ಏನು ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ, ಆ ಜಮೀನನ್ನು ಮಂಜೂರು ಮಾಡತಕ್ಕಂತಹ ಕೆಲಸ ನಮ್ಮ ಸರ್ಕಾರ ಮಾಡಬೇಕು ಎಂದು ನಾವು ಒತ್ತಾಯ ಮಾಡುತ್ತೇವೆ. ಅದಕ್ಕೆ ಅರ್ಜಿ ಕೊಡಬೇಕು; ಎರಡನೆಯದಾಗಿ ಇವತ್ತು ನಮ್ಮ ಫಾರೆಸ್ಟ್ ಭೂಮಿಯಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರ

ತಕ್ಕಂತಹ ಅನೇಕ ಪ್ರಕರಣಗಳು ಇವೆ. ಅದಕ್ಕೆ ಒಂದು ಕಮಿಟಿ ಮಾಡಬೇಕು ಎಂದು ತೀರ್ಮಾನ ಆಗಿದೆ. ಆದರೆ ಆ ಕಮಿಟಿಯನ್ನು ಇವತ್ತಿನವರೆಗೂ ರಚನೆ ಮಾಡಲಿಲ್ಲ. ಇದಕ್ಕೆ ಎಷ್ಟು ದಿವಸ ಬೇಕು. ಒಂದು ವರ್ಷ ಬೇಕಾ, ಎರಡು ವರ್ಷ ಬೇಕಾ, ಮೂರು ವರ್ಷ ಬೇಕಾ. ನಾವು ಕಮಿಟ್ ಆಗಿದ್ದೇವೆ. ಸಮಿತಿ ಮಾಡುತ್ತೇವೆಂದು ಪ್ರಕಟ ಮಾಡಿದ್ದೇವೆ. ಇದನ್ನು ಮಾಡುತ್ತೇವೆ ಎಂದು ಜನರಿಗೆ ಭರವಸೆ ಕೊಟ್ಟಿದ್ದೇವೆ. ಅಂದ ಮೇಲೆ ಹಿಂದು ಮುಂದು ನೋಡತಕ್ಕಂತಹ ಕೆಲಸ ಏನಿದೆ. ಆದುದರಿಂದ ತತ್‌ಕ್ಷಣ ವಿಳಂಬ ಮಾಡದೆ ೧೫ ದಿವಸದ ಒಳಗಾಗಿ ಎಲ್ಲಾ ತಾಲ್ಲೂಕು ಮಟ್ಟದ ಸಮಿತಿಗಳನ್ನು ನೇಮಕ ಮಾಡಬೇಕು. ಮತ್ತು ಕೂಡಲೇ ಅರ್ಜಿಗಳನ್ನು ಕರೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಅರ್ಜಿಗಳನ್ನು ತೆಗೆದುಕೊಂಡು ಅವುಗಳನ್ನು ಕಮಿಟಿಗಳ ಮೂಲಕ ಪ್ರೊಸೆಸ್ ಮಾಡಿಸಿ, ನಿರ್ಣಯಗಳನ್ನು ಮಾಡಿಸಿ ಜಾಗ್ರತೆ ಸರ್ಕಾರಕ್ಕೆ ಕಳುಹಿಸಿದರೆ, ನಂತರ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡಬಹುದು. ನಿಮ್ಮಿಂದ ಮನವಿ ಬಂದರೆ ನಾವು ಖಂಡಿತ ಅರಣ್ಯ ಪ್ರದೇಶಗಳನ್ನು ಬಿಡುಗಡೆ ಮಾಡಿ ಕೊಡುತ್ತೇವೆಂದು ಕೇಂದ್ರ ಸರ್ಕಾರದವರು ಹೇಳುತ್ತಾರೆ. ನಾನು ಹೇಳಿದ ಕೆಲಸದಲ್ಲಿ ಹಿಂದೆ ಬಿದ್ದರೆ ಕೇಂದ್ರ ಸರ್ಕಾರದವರು ಹೇಗೆ ನಿಮಗೆ ಬಿಡುಗಡೆ ಮಾಡಿ ಕೊಡುತ್ತಾರೆ? ಆದುದರಿಂದ ಈ ಕೆಲಸವನ್ನು ಕೂಡ ಇದೇ ಸಮಿತಿಗೆ ಕೊಟ್ಟು ಮಾಡಿಸಬೇಕು. ಮೂರನೆಯದು ಅಧ್ಯಕ್ಷರೇ, ಈಗ ಬಗರ್‌ಹುಕುಂ ಸಾಗುವಳಿ ಮಂಜೂರು ಮಾಡತಕ್ಕಂತಹ ಶಾಸಕ ಸಮಿತಿ ಇದೆ. ನಾವು ಕಾನೂನು ಮಾಡಿದ್ದೇವೆ. ಏಕೆಂದರೆ ಕಾನೂನು ಮಾಡುವ ಸಂದರ್ಭದಲ್ಲಿ ನಾವು ಜನರ ಅನುಕೂಲಕ್ಕಾಗಿ ಮಾಡಿದರೆ, ಅದೇ ಕಾನೂನಿಗೆ ವಿರುದ್ಧವಾಗಿ ಕಂದಾಯ ಇಲಾಖೆಯಿಂದ ಸುತ್ತೋಲೆ ಹಾಕತಕ್ಕಂಥಾದ್ದು, ನಿಯಮಾವಳಿ ಮಾಡತಕ್ಕಂಥಾದ್ದು, ಮತ್ತು ಜಿಲ್ಲಾಧಿಕಾರಿಗಳಿಗೆ ಅವರದೇ ಆದ ವ್ಯಾಖ್ಯಾನವನ್ನು ಇಟ್ಟು ಸುತ್ತೋಲೆಯನ್ನು ಹೊರಡಿಸತಕ್ಕಂಥಾದ್ದು, ಇವತ್ತು ನಡೆಯುತ್ತಿದೆ. ಏಕೆಂದರೆ ಸರ್ಕಾರಕ್ಕೆ ಒಂದು ಕಮಿಟ್‌ಮೆಂಟ್ ಇದೆಯಲ್ಲಾ, ಸರ್ಕಾರದ ಪ್ರಾಮಾಣಿಕತನ ಇದೆಯಲ್ಲಾ, ಇದು ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಮತ್ತು ನಮ್ಮ ಕಂದಾಯ ಇಲಾಖೆಯ ಅಧಿಕಾರಿಗಳ ಮಟ್ಟದಲ್ಲಿ ಇಲ್ಲ. ಹಾಗಾಗಿ ಇವತ್ತು ವಿಳಂಬವಾಗುತ್ತಿದೆ ಎಂಬ ಆತಂಕ ಬರುತ್ತದೆ. ನಮ್ಮ ಕಮಿಟಿಗಳು ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಸಾಗುವಳಿ ಚೀಟಿ ಕೊಡುವುದಕ್ಕೆ ಆಗುತ್ತಿಲ್ಲ. ಈಗ ಇಲ್ಲಿಂದ ಹೋಗಿರುವ ಸುತ್ತೋಲೆ ಏನಿದೆ, ಅದರಲ್ಲಿ ಈ ರೀತಿ ಹೇಳಿದ್ದಾರೆ:—

"The grant of land if any shall be provisional subject to the confirmation by the concerned Tahsildar on the amount payable/being paid in three equal instalments of which the first one shall be paid before the expiry of a period of 30 days from the date of communication of the order/provisional grant and the remaining two within the period prescribed. If any instalment is not paid within the period referred to above, the provisional grant shall stand cancelled. The amount of instalments paid if any shall also be liable for forfeiture." ಎಂದು ಇದೆ. ಇದರಲ್ಲಿ ಇದನ್ನು ತಿದ್ದುಪಡಿ ಮಾಡುವಾಗ ಇನ್ನೂ ಒಂದು ಪ್ರಾವಿಷನ್ ಇದೆ. ಏನೆಂದರೆ,

"Trees if any standing on the land granted and the grant in such land shall continue to belong to the Government which may at its discretion be disposed of by it in such manner as it deems fit." ಎಂದು

ಅಂದರೆ ಸರ್ಕಾರದ ಆಸ್ತಿ ಇದೆಯಲ್ಲಾ, ಅದನ್ನು ಯಾವಾಗ ಬೇಕಾದರೂ ಕೂಡ ವಿಲೆ ವಾರಿ ಮಾಡಿ ಕೊಡಬಹುದು ಎಂದು ಹೇಳಿ ನಾವು ಇಲ್ಲಿ ಕಾನೂನಿನಲ್ಲಿ ಹೇಳಿದ್ದೇವೆ. ಆದರೆ ನಮ್ಮ ಜಿಲ್ಲಾಧಿಕಾರಿಗಳು ಅದರಲ್ಲಿ ಮರ ಇದ್ದರೆ ಜಮೀನನ್ನು ಕೊಡಬೇಡಿ ಎಂದು ನಮ್ಮ ಕಂದಾಯ ಇಲಾಖೆಯಿಂದ ಒಂದು ಸುತ್ತೋಲೆ ಬಂದಿದೆ ಎಂದು ಹೇಳುತ್ತಾರೆ. ಅದರಲ್ಲಿರತಕ್ಕಂತಹ ಈ ಸಮಿತಿ ಇದೆಯಲ್ಲಾ, ಈ ಸಮಿತಿ. ಆಜ್ಞೆ ಮಾಡಿದ ಮೇಲೆ ಅದರ ಮೇಲೆ ಎ.ಸಿ. ಯವರಿಗೆ ಅಪೀಲು ಹಾಕಬಹುದೆಂದು ಇದೆ. ಅಂದರೆ ಕಮಿಟಿ ತೀರ್ಮಾನದ ವಿರುದ್ಧ. ಎ. ಸಿ. ಗೆ ಅಪೀಲ್ ಹಾಕಬೇಕು ಅಂತ ಏನು ತಿದ್ದುಪಡಿ ಮಾಡಿದ್ದಾರಲ್ಲಾ, ಇದನ್ನು ನಾವು ಅಳವಡಿಸಿದ್ದೇವಾ? ಆದರೂ ಇವರು ಹೊರಡಿಸಿದರು.

> "Dated 26th June 1992 If the grant proposed to be made by the Committee is contrary to rules and the Tahsildar of the concerned ...who is also the Member Secretary of the Committee should oppose such move. The Tahsildar being Member Secretary of the Committee should guide and advise the committee about the correct procedure and applicability......"

ನಾನು ಹೇಳುತ್ತೇನೆ. ಹಾಗಿದ್ದರೆ ಇದಕ್ಕೆ ತಿದ್ದುಪಡಿ ನೀವು ಮಾಡಿ. ಏನೆಂದರೆ,—

> "If the grant under the scheme is irregular or contrary to rules, such grant can be cancelled by the Asst. Commissioner of the Sub Division concerned."

ಎಂದು; ಕಾನೂನಿನಲ್ಲಿ ಅವಕಾಶ ಇದ್ದರೆ ಮಾತ್ರ ಇವರು ಪವರ್ ಎಕ್ಸರ್‌ಸೈಸ್ ಮಾಡಬೇಕು. ಇಲ್ಲವೇ
ಸರ್ಕಾರವೇ ಈ ಅಧಿಕಾರ ಇಟ್ಟುಕೊಳ್ಳಲಿ. ಇಲ್ಲ. ಕಾನೂನಿಗೆ ತಿದ್ದುಪಡಿ ತನ್ನಿ. ಕಾನೂನು ಮಾಡ್ತಾ
ವಾಗ ಈ ವಿಚಾರ ಹೇಳಲಿಲ್ಲ. ಈಗ ಹೊಸದಾಗಿ ಹೇಳಿದ್ದಾರೆ. ಏತಕ್ಕೆಂದರೆ ಯಾರಾದರೂ ಒಂದ್ತ್ರಿ
ತಕರಾರು ಹಾಕಿದ ಕೂಡಲೇ ಕ್ಯಾನ್ಸಲ್ ಮಾಡಿದರೆ ಅದು ಸರಿಯಲ್ಲ. ಐದು ಜನ ಇರತಕ್ಕ ಸಮಿತಿ
ಯನ್ನು ಮಾಡಿದ್ದೀರಿ. ಆಯಾಯ ಊರಿನಲ್ಲಿ ವಿಚಾರ ಮಾಡಿ ತೀರ್ಮಾನ ಮಾಡುತ್ತಾರೆ. ಆದ್ದರಿಂದ
ಕಾನೂನಿನಲ್ಲಿ ಇಲ್ಲದೇ ಇರತಕ್ಕ ವಿಚಾರಗಳನ್ನು ಸೇರಿಸಿಕೊಂಡು ಸರ್ಕ್ಯುಲರ್ ಕೊಟ್ಟರೆ ಅದು ಸರಿ
ಯಲ್ಲ. ಜಿಲ್ಲಾಧಿಕಾರಿಗಳು ಈ ರೀತಿ ಸರ್ಕ್ಯುಲರ್ ಕೊಟ್ಟಿದ್ದಾರೆ. ಹೀಗಾದರೆ ಅದನ್ನು ಹೇಗೆ
ಕಾರ್ಯಗತ ಮಾಡಲು ಆಗುತ್ತದೆ? ಇವತ್ತು ಸರ್ಕಾರ ಏನು ಕಮಿಟ್‌ಮೆಂಟ್ ಮಾಡಿಕೊಂಡಿದೆ,
ಸರ್ಕಾರದ ಪ್ರಾಮಾಣಿಕವಾದ ಅನಿಸಿಕೆ ಈ ಕಾನೂನು ತರುವಾಗ ಏನಿದೆ ಎಂದರೆ ಬಗರ್‌ಹುಕುಂ
ಸಾಗುವಳಿ ಮಾಡುತ್ತಿರುವವರನ್ನು ಖಾಯಂಗೊಳಿಸಬೇಕು ಎಂದು ಅದಕ್ಕಾಗಿ ನಿಯಮಾವಳಿ ಅಥವಾ
ಕಾನೂನಿಗೆ ತಿದ್ದುಪಡಿ ತರಬೇಕು. ಹಿಂದೆ ಭೂಸುಧಾರಣೆ ಕಾನೂನು ತಂದಾಗ ಶ್ರೀ ದೇವರಾಜ್ ಅರಸ್
ರವರು ಇಂತಹ ಫಾರ್ಮಿನಲ್ಲಿ ಹಣ ಕಟ್ಟಿದರೆ ಮಾತ್ರ ಹಕ್ಕು ಪತ್ರಗಳನ್ನು ಕೊಡಲು ಅವಕಾಶವಿದೆ
ಎಂದು ಮಾಡಿದ್ದರು. ಆಗ ಹಣ ಕೊಡಲು ಯಾರೂ ಸಿದ್ಧರಿರಲಿಲ್ಲ. ಆಮೇಲೆ ಒಂದು ತಿದ್ದುಪಡಿ
ಯನ್ನು ಮಾಡಿ ಒಂದು ನೂರು ರೂ. ಕೊಟ್ಟರೆ ಸಾಕು. ಹಕ್ಕು ಪತ್ರ ಕೊಡಬಹುದು ಎಂದು ಮಾಡಿ
ದರು. ನಂತರ ಅದಕ್ಕೂ ಮುಂದೆ ಹೋಗಿ ಆಗಿನ ಕಂದಾಯ ಸಚಿವರಾಗಿದ್ದ ಶ್ರೀ ಮಲ್ಲಿಕಾರ್ಜುನ
ಖರ್ಗೆರವರು ಶ್ರೀ ಗುಂಡೂರಾವ್ ಮುಖ್ಯ ಮಂತ್ರಿಯಾಗಿದ್ದಾಗ ಒಂದು ತಿದ್ದುಪಡಿಯನ್ನು ತಂದರು.
ಆಗ ನಾನೂ ಸಹ ಮಂತ್ರಿಯಾಗಿದ್ದೆ. ಆಗ ಒಂದು ತಿದ್ದುಪಡಿಯನ್ನು ಮಾಡಿ ಭೂ ನ್ಯಾಯ ಮಂಡಳಿ
ಯಲ್ಲಿ ತೀರ್ಮಾನ ಮಾಡಿದ ತಕ್ಷಣ ಫಾರಂ ೧೧ರ ಪ್ರಕಾರ ಹಕ್ಕುಪತ್ರಗಳನ್ನು ಕೊಡಬೇಕು
ಎಂದಾಯಿತು. ಅದರ ಪ್ರಕಾರ ಎಲ್ಲರಿಗೂ ಹಕ್ಕು ಪತ್ರಗಳನ್ನು ಕೊಡಬೇಕು ಎಂದು ತೀರ್ಮಾನ
ಮಾಡಿದೆವು. ಅದರಂತೆ ಎಲ್ಲರಿಗೂ ಕೊಟ್ಟುಬಿಟ್ಟಿದ್ದಾರೆ. ಅದು ಗೇಣಿದಾರ ಕೊಡತಕ್ಕಂಥ ಹಣ
ವನ್ನು ಲ್ಯಾಂಡ್, ರೆವಿನ್ಯೂ ರೂಪದಲ್ಲಿ ವಸೂಲು ಮಾಡಿದ್ದಾರೆ. ಆದರಿಂದ ಎಲ್ಲಾ
ಗೇಣಿ ರೈತರಿಗೆ ಹಕ್ಕು ಪತ್ರಗಳು ಸಿಕ್ಕಿವೆ. ಇಲ್ಲದಿದ್ದರೆ ಅದು ಜಾರಿ ಆಗುತ್ತಿರಲಿಲ್ಲ.
ಈಗಲೂ ಅದನ್ನೇ ಮಾಡಬಹುದು ಎಂದು ನಾನು ಒತ್ತಾಯ ಮಾಡುತ್ತೇನೆ.
ಸಮಿತಿಗಳು ತೀರ್ಮಾನ ಮಾಡಿದ ಕೂಡಲೇ ಅವರಿಗೆ ಸಾಗುವಳಿ ಚೀಟಿ ಕೊಡಬೇಕು.
ನಂತರ ಅವರಿಂದ ಗೇಣಿ ಹಣವನ್ನು ಲ್ಯಾಂಡ್ ರೆವಿನ್ಯೂ ರೂಪದಲ್ಲಿ ವಸೂಲು ಮಾಡತಕ್ಕಂತಹ ಕೆಲಸ
ವನ್ನು ಮಾಡಿದರೆ ನೀವು ಹೇಳಿದ ಹಾಗೆ ಸೆಪ್ಟಂಬರ್‌ನೊಳಗೆ ಎಲ್ಲಾ ಅರ್ಜಿಗಳನ್ನು ಇತ್ಯರ್ಥ ಮಾಡಲು
ಸಾಧ್ಯವಾಗುತ್ತದೆ. ಇಲ್ಲದಿದ್ದರೆ ನೀವು ತಲೆ ಕೆಳಗೆ ಹಾಕಿ ಕಾಲು ಮೇಲೆ ಮಾಡಿದರೂ ಸೆಪ್ಟೆಂಬರ್ ಒಳಗೆ
ಮಾಡಲು ಆಗುವುದಿಲ್ಲ. ಇನ್ನು ಎರಡನೆಯದಾಗಿ ಟಿ. ಟಿ. ಫೈನ್ ಹಾಕಬೇಕಾಗಿದೆ ಎಂದು ಈ
ಸರ್ಕ್ಯೂಲರ್‌ನಲ್ಲಿ ಹೇಳಿದ್ದಾರೆ. Logically T. T. fine should be collected from
the unauthortsed cultivators only.........ಅವರು ಅರ್ಜಿಕೊಟ್ಟು ೧೫,೨೦ ಮತ್ತು ೨೫
ವರ್ಷಗಳಿಂದಲೂ ಸಾಗುವಳಿ ಮಾಡುತ್ತಿದ್ದಾರೆ. ಈಗ ೨೫ ವರ್ಷಕ್ಕೆ, ವರ್ಷಕ್ಕೆ ೫೦ ರೂ. ಅಂತೆ
ಹಾಕಿದರೆ ೨೫ ವರ್ಷಕ್ಕೆ ಎಷ್ಟು ಆಗುತ್ತದೆ ? ಅವರು ಏನು ಟಾಟಾ, ಬಿರ್ಲಾಗಳೇ ? ದುಡಿದು ದುಡಿದು
ಅವರು ಸಾಯುತ್ತಿದ್ದಾರೆ, ಅದು ಏನು ನೀರಾವರಿ ಭೂಮಿ ಆಗಿದೆಯೇ ? ಅವರು ದುಡಿದು
ತಿನ್ನುತ್ತಿದ್ದಾರೆ. ನಾವು ಏನು ಅವರಿಗೆ ಉದ್ಯೋಗ ಕೊಟ್ಟಿದ್ದೇವೆಯೇ ? ಅವರು ಐದುನೂರು ರೂ

ಸಂಬಳ ಕೊಡುವ ಕೆಲಸ ಕೊಟ್ಟರೆ ಸಾಕು ಎಂದು ಹೇಳುತ್ತಾರೆ. ನಿಮಗೆ ಕೊಡುವುದಕ್ಕೆ ಸಾಧ್ಯವಿದೆಯೇ ? ಅವರು ದುಡಿಯುತ್ತಿದ್ದಾರೆ. ಶ್ರಮವಹಿಸಿ ಕೆಲಸ ಮಾಡುತ್ತಾರೆ. ಅವರು ಮಾಡುತ್ತಿರುವ ಭೂಮಿಯನ್ನು ಅವರಿಗೇ ಕೊಡೋಣ ಎಂಬುದು ಸರ್ಕಾರದ ಉದ್ದೇಶ. ನಾವು ಟಿ. ಟಿ. ಫೈನ್ ಹಾಕುತ್ತೇವೆಂದು ಈ ಕಾನೂನಿನಲ್ಲಿ ಎಲ್ಲಿ ಹೇಳಿದ್ದೀವಿ ? ಎಲ್ಲೂ ಹೇಳಿಲ್ಲ. ಬಡವರ ಬಗ್ಗೆ ನಾವು ಕೆಲಸ ಮಾಡುತ್ತೇವೆ. ಅವರಿಗೆ ಉದ್ಯೋಗ ಕೊಡುವುದಕ್ಕೆ ಆಗುತ್ತಿಲ್ಲ. ಕನಿಷ್ಟ ಪಕ್ಷ ಅವರು ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಅವರಿಗೆ ಮಂಜೂರು ಮಾಡಿದರೆ ಅದರಿಂದ ಅವರು ಬದುಕಲು ಸಾಧ್ಯವಾಗುತ್ತದೆ. ಹಿಂದೆ ರಾಜಮಹಾರಾಜರು ಹಾಗೂ ಬ್ರಿಟೀಷರು ಭೂಮಿಯನ್ನು ಪುಕ್ಕಟ್ಟೆಯಾಗಿ ಕೊಡುವಕಾಲ ಇತ್ತು. ಐದನೂರು ಎಕರೆ, ಸಾವಿರ ಎಕರೆ, ಹತ್ತು ಸಾವಿರ ಎಕರೆ ಭೂಮಿಯನ್ನು ಪುಕ್ಕಟೆಯಾಗಿ ಕೊಟ್ಟಿದ್ದಾರೆ. ಗ್ರಾಮ ಗ್ರಾಮಗಳಲ್ಲಿ ಪಲ್ಲಕ್ಕಿ ಹೊರುವವರಿಗೆ, ಅಡಿಗೆ ಮಾಡಿ ಬಡಿಸುವವರಿಗೆ, ಜಿಂದಾಬಾದ್ ಎಂದು ಹೇಳುವವರಿಗೆ ಉಂಬಳಿ ಕೊಟ್ಟಿಲ್ಲವೇ ? ಆದರೆ ಆ ರೀತಿ ನಾವು ಕೊಡುತ್ತಿಲ್ಲ, ಅವನು ಸ್ವತಃ ದುಡಿದು, ಬೆವರು ಸುರಿಸಿ ಕಷ್ಟಪಟ್ಟು ಭೂಮಿ ಮಾಡಿಕೊಂಡಿರುವ ಜಮೀನನ್ನು ಅವನಿಗೆ ಕೊಡುತ್ತಿದ್ದೇವೆ. ನನ್ನ ಪ್ರಕಾರ ಮುಫತ್ತಾಗಿ ಹರಿಜನ ಗಿರಿಜನರಿಗೆ ಹೇಗೆ ಕೊಡುತ್ತಿರೋ, ಅದೇ ರೀತಿ ಬೇರೆ ಬಡವರಿಗೂ ಸಹ ಕೊಡಬೇಕು. ಅವರು ಅನ್ನ ಕೊಡುತ್ತಾರೆ. ರಾಜ್ಯಕ್ಕೆ ಸಹಾಯ ಮಾಡುತ್ತಿದ್ದಾರೆ. ಕನಿಷ್ಟ ಪಕ್ಷ ಸರಳವಾದ ರೀತಿಯಲ್ಲಿ ಅವರಿಗೆ ಕೊಡಬೇಕು. ನಮ್ಮ ಚಿಕ್ಕಮಾಧುರವರು ಹುಣಸೂರು ತಾಲ್ಲೂಕಿನ ಬಗ್ಗೆ ಹೇಳುತ್ತಿದ್ದರು. ಅಲ್ಲಿ ಒಂದೊಂದು ಎಕರೆ ಭೂಮಿ ಬೆಲೆ ಮೂರು ಸಾವಿರ ಆಗಿದೆ ಎಂದು. ಅವರಿಗೆ ಹೇಗೆ ಇಷ್ಟೊಂದು ಹಣ ಕೊಡಲು ಆಗುತ್ತದೆ ? ಅವರು ಎಲ್ಲಿಂದ ಇಷ್ಟೊಂದು ಹಣವನ್ನು ತರಬೇಕು. ಬಡವರಿಗೆ ಸರಳವಾದ ರೀತಿಯಲ್ಲಿ ಕೊಡಿ. ಬಡವರು ಬದುಕಲಿ. ಇನ್ನು ಎರಡನೆಯದಾಗಿ ಹೇಳುವುದಾದರೆ, ಹಿಂದೆ ನಾವು ಬಹಳಷ್ಟು ಭೂಮಿಯನ್ನು ದರ್ಖಾಸ್ತು ಮೂಲಕ ಕೊಡುತ್ತಿದ್ದೆವು. ದರ್ಖಾಸ್ತು ಮೂಲಕ ಎಂದರೆ ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್‌ಸ್ಪೆಕ್ಟರ್‌ಗಳು ಹೋಗಿ ಸ್ಥಳ ಮಹಜರ್‌ಮಾಡಿ, ರೆವಿನ್ಯೂ ಸ್ಕೆಚ್ ಮಾಡಿದ ಮೇಲೆ ನಾವು ಅದನ್ನು ಮಂಜೂರು ಮಾಡಿ ನಂತರ ಸಾಗುವಳಿ ಚೀಟಿಯನ್ನು ಕೊಡುತ್ತಿದ್ದೆವು. ಅನಂತರ ಪಕ್ಕಾ ಪೋಡಿ ಆಗುತ್ತಿತ್ತು. ಇದು ಮಾಮೂಲಿಯಾಗಿ ನಡೆದುಕೊಂಡು ಬಂದಂಥ ರೀತಿ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸ್ವಾತಂತ್ರ್ಯ ಬಂದಮೇಲೆ ಇದುವರೆಗೆ ಎಲ್ಲ ಲೆಕ್ಕ ಹಾಕಿದರೂ ಕೂಡ ಎಷ್ಟು ಭೂಮಿಯನ್ನು ಕೊಟ್ಟಿದ್ದೇವೆ ಎಂಬ ಲೆಕ್ಕ ಮಾನ್ಯ ಖರ್ಗೆಯವರ ಬಳಿ ಇದೆ. ಅವರು ಏನು ಹೇಳುತ್ತಿದ್ದಾರೆಂದರೆ, ಅರ್ಧಭಾಗದಷ್ಟು ಭೂಮಿಯನ್ನು ಹರಿಜನಗಿರಿಜನರಿಗೆ ಕೊಡಬೇಕಾಗಿತ್ತು, ನೀವೆಲ್ಲಾ ಹೀಗೆ ಮಾಡಿದ್ದೀರಿಂದ ಅವರಿಗೆ ಕೊಡಬೇಕಾಗಿದ್ದಂಥ ಭಾಗವನ್ನು ಈಗ ಕೊಡಿ ಎಂದು. ಹೌದು, ಇದು ನ್ಯಾಯ. ಆಗುವುದು ಆಗಿ ಹೋಗಿದೆ. ನಾವು ಕೊಡುವುದಿಲ್ಲವೆಂದು ಹೇಳಿದೆ ? ಕೊಡಬೇಕೆಂದು ನಮ್ಮ ಮನಸ್ಸಿನಲ್ಲಿದೆ. ಆದರೆ ಈಗ ಅವರು ಸಾಗುವಳಿ ಮಾಡುತ್ತಿದ್ದಾರೆ. ಉಳಿದುದನ್ನು ಕೊಡೋಣ. ಎಲ್ಲೆಲ್ಲಿ ಖಾಲಿ ಜಮೀನು ಇದೆ ಅದರ ಬಗ್ಗೆ ಅವರಿಗೇ ವಿಶೇಷವಾಗಿ ಸರ್ಕಾರದಿಂದ ರೆಕಾರ್ಡ್ ಕೊಡೋಣ. ನೂರಕ್ಕೆ ನೂರುಪಾಲು ಅಥವಾ ಇನ್ನೂ ಹೆಚ್ಚಿಗೆ ಕೊಡಬೇಕೆಂದು ಹೇಳುವವನು ನಾನು. ಆದರೆ ಬಗರ್ ಹುಕುಂ ಸಾಗುವಳಿ ವಿಚಾರಕ್ಕೆ ಬಂದಾಗ ನಾವು ಏನು ಮಾಡಬೇಕು ? ಯಾರು ಸಾಗುವಳಿ ಮಾಡುತ್ತಿದ್ದಾರೆ, ಅವರಿಗೆ ಕೊಡಬೇಕಾಗುತ್ತದೆ. ಏಕೆಂದರೆ ಹಿಂದೆ ಭೂ ಸುಧಾರಣಾ ಕಾನೂನನ್ನು ಜಾರಿಗೆ ತಂದಾಗ ಯಾರು ಭೂಮಿಯನ್ನು ಮಾಡುತ್ತಿದ್ದರು ಅವರಿಗೇ ಕೊಟ್ಟೆವು. ಹಾದಿಯಲ್ಲಿ ಹೋಗುತ್ತಿರುವವನಿಗೆ ನಾವು ಕೊಡುವುದಕ್ಕೆ ಬರುವುದಿಲ್ಲ. ಹಿಂದೆ ದರ್ಖಾಸ್ತು ಮೂಲಕ ಕೊಟ್ಟಿದರ ಎಲ್ಲ ಕಡೆ ಆಗಿದೆ. ರೆವಿನ್ಯೂ ಇನ್‌ಸ್ಪೆಕ್ಟರ್‌ರವರ ಮಹಜರ್ ಪ್ರಕಾರ ರೆವಿನ್ಯೂ ಸ್ಕೆಚ್ ಮಾಡಿ ಅದು ಪ್ರಕಾರ ನಾವು ಕೊಟ್ಟಿದ್ದೇವೆ. ಅನಂತರ ಅಳತೆ ಮಾಡಿಸಿ ಪಕ್ಕಾ ಪೋಡ ಮುಂತಾದ್ದು ಮಾಡಿಸಿದೆವು. ಈಗ ಬಗರ್‌ಹುಕುಂ ಸಾಗುವಳಿ ವಿಚಾರ ಬಂದಾಗ ನಿಮ್ಮ ಹೊಟ್ಟೆಗೆ ಏತಕ್ಕೆ ಕಿಚ್ಚು ಬೀಳುತ್ತಿದೆ, ಸರ್ವೇಯರ್ ಹೋಗಲೇಬೇಕಂತೆ, ಬಾಂಡ್‌ಕಲ್ಲು ಹಾಕಲೇಬೇಕಂತೆ, ಅಳತೆ ಮಾಡಲೇಬೇಕಂತೆ. ಆಮೇಲೆ ಕೊಡಬೇಕಂತೆ ಶಿವಮೊಗ್ಗಾದ ಜಿಲ್ಲಾಧಿಕಾರಿಯೊಬ್ಬರು ಈರೀತಿ ಬರೆದಿದ್ದಾರೆ. ಇಲ್ಲಿ ಒಂದು ದೊಡ್ಡ ಸಿದ್ಧಾಂತವನ್ನೇ ತಯಾರಿಸಿ ದೊಡ್ಡ ಕಲಂನ್ನು ಬರೆದಿದ್ದಾರೆ. ಮೊದಲನೆಯದಾಗಿ ಇದನ್ನು ಹೊರಡಿಸುವುದಕ್ಕೆ ಅವರಿಗೆ ಅಧಿಕಾರವೇ ಇಲ್ಲ. ನಿಯಮವನ್ನು ಮಾಡತಕ್ಕ ಅಧಿಕಾರ ಸರ್ಕಾರಕ್ಕಿದೆ, ಸರ್ಕಾರದ ನಿಯಮದ ಪ್ರಕಾರ ಸುತ್ತೋಲೆಯನ್ನು ಹೊರಡಿಸಬೇಕು. ಆದರೆ ಈ ಜಿಲ್ಲಾಧಿಕಾರಿ ಹೊರಡಿಸಿರತಕ್ಕದ್ದು ಅಧಿಕಪ್ರಸಂಗೀತನ. ಅವರು ಏನು ಹೇಳಿದ್ದಾರೆಂದರೆ, ಮೇಲೆ ಕಾಣಿಸಿರುವಂತೆ ಮಂಜೂರಾತಿದಾರರಿಂದ ಸರ್ಕಾರಕ್ಕೆ ಹಣವನ್ನು ಕಟ್ಟಿಸಿಕೊಂಡ ಮೇಲೆ ಮತ್ತು ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ಅಳತೆ ಆಗಿ ಬಂದಮೇಲೆ ಕಚ್ಚಾ ದುರಸ್ತಿ ಸಂಖ್ಯೆ: ಕೆ. ಜಿ. ಡಿ. ಮಂಜೂರಾತಿದಾರರಿಗೆ ಸಾಗುವಳಿ ಚೀಟಿಯನ್ನು ಚೆಕ್ಕುಬಂದಿಯನ್ನು ನಮೂದಿಸಿ ಕೊಡತಕ್ಕದ್ದು". ಎಂದು. ಕಚ್ಚಾ, ಪಕ್ಕಾ ಪೋಡಿ ಆದಮೇಲೆ ಕೊಡಿ ಎಂದು ಹೇಳುತ್ತಿರುವುದು. ಆದರೆ ಅವರ

ನಿಯಮಾವಳಿಯ ಪ್ರಕಾರ ಒಬ್ಬ ಸರ್ವೇಯರ್ ೧ ತಿಂಗಳಿಗೆ ೧೫ ಸರ್ವೆಗಳನ್ನು ಮಾಡಬೇಕೆಂದು ಗುರಿ ಇದೆ. ಆದರೆ ಇಲ್ಲಿ ೧೦ ಲಕ್ಷ ಅರ್ಜಿಗಳನ್ನು ಇಟ್ಟುಕೊಂಡು ಎಷ್ಟು ಜನರು ಮಾಡಬೇಕು ? ಒಂದು ಸಾವಿರ ಜನ ಸರ್ವೇಯರ್‌ಗಳನ್ನು ನೇಮಕಾತಿ ಮಾಡಿಕೊಳ್ಳಲು ಸಂಬಂಧಪಟ್ಟಂತೆ ಫೈಲು ಆ ಕಡೆಯಿಂದ ಈಕಡೆ ಈ ಕಡೆಯಿಂದ ಆಕಡೆಗೆ ಓಡಾಡುತ್ತಲೇ ಇದೆ. ಇದನ್ನು ಮಾಡುವುದಕ್ಕಾಗುತ್ತದೆಯೋ ? ಅವರ ತಲೆಯಲ್ಲಿ ಏನೋ ಹತ್ತಿದೆ. ಏನೋ ಇವರ ಅಪ್ಪನ ಮನೆಯ ಭೂಮಿಯನ್ನು ಕೊಡುತ್ತಿರುವಂತೆ ಕಾಣುತ್ತದೆ. ಆ ಬಡವ ಸುಮ್ಮನೆ ಭೂಮಿಯನ್ನು ಹೊತ್ತುಕೊಂಡು ಹೋಗುತ್ತಿದ್ದಾನೆ. ಆದ್ದರಿಂದ ಏನಾದರೂ ಮಾಡಿ ಇದನ್ನು ಆತನಿಗೇ ಉಳಿಸಬೇಕು ಎಂದು ನಮ್ಮ ಕಾತುರ. ಆದರೆ ಇದನ್ನು ಉಳಿಸುವುದಕ್ಕೆ, ಕೊಡಿಸುವುದಕ್ಕೆ ಇವರು ಯಾರು ? ನಾವು ಶಾಸನವನ್ನು ಮಾಡಿಟ್ಟಿದ್ದೇವೆ. ಶಾಸನದ ಪ್ರಕಾರ ಅವರು ನಡೆದುಕೊಳ್ಳಬೇಕಾದುದು ಅವರ ಜವಾಬ್ದಾರಿಯಾಗಿದೆ. ಒಂದುವೇಳೆ ಶಾಸನಬದ್ಧವಾಗಿ, ಕಾಲಬದ್ಧವಾಗಿ ಆ ಭೂಮಿಯನ್ನು ಮಂಜೂರು ಮಾಡುವುದಕ್ಕೆ ಏನಾದರೂ ತೊಂದರೆ ಇದ್ದರೆ ಅವರು ಬಂದು ಈ ಸರ್ಕಾರಕ್ಕೆ ಹೇಳಿ ಪೂರಕವಾಗಿ ಸಹಾಯವನ್ನು ಮಾಡಬೇಕೇ ಹೊರತು ಈ ರೀತಿ ಅಡ್ಡಗಟ್ಟಿ ಹಾಕುವುದು ಸರಿಯಲ್ಲ. ಹಿಂದೆ ಜಿಲ್ಲಾಧಿಕಾರಿಯಾಗಿದ್ದಂಥ ಶ್ರೀ ಹೆಚ್. ಕೆ. ದಾಸ್ ಎನ್ನುವವರು ಈಗ ಮುಖ್ಯಮಂತ್ರಿಗಳಿಗೆ ಕಾರ್ಯದರ್ಶಿಯಾಗಿದ್ದಾರೆ. ಹಿಂದೆ ಇವರು ಮಂಗಳೂರಿನಲ್ಲಿ ಜಿಲ್ಲಾಧಿಕಾರಿಯಾಗಿದ್ದಾಗ ಈ ಭೂಸುಧಾರಣಾ ಕಾನೂನು ಕಾರ್ಯಗತವಾಗುವ ಸಂದರ್ಭದಲ್ಲಿ ಅವರು ಇದ್ದರು. ಅವರು ಬಹಳ ಚೆನ್ನಾಗಿ ಕೆಲಸಮಾಡುತ್ತಿದ್ದರು ಯಾವುದೇ ಒಂದು ಲ್ಯಾಂಡ ಟ್ರಿಬ್ಯೂನಲ್‌ನಲ್ಲಿ ಯಾರೇ ಒಬ್ಬರು ಸದಸ್ಯರು ಮೋಸ ಮಾಡುತ್ತಾರೆಂದು ತಿಳಿದು ಬಂದ ಕೂಡಲೇ ಎನ್‌ಕ್ವೈರಿ ಮಾಡಿ ಇಲ್ಲಿ'' ಬಂದು ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಿ ಅಂಥ ಸದಸ್ಯರನ್ನು ಸಮಿತಿಯಿಂದಲೇ ಕಿತ್ತುಹಾಕಿಸುವಂಥ ಮಟ್ಟಕ್ಕೆ ಹೋಗುತ್ತಿದ್ದರು. ಆ ರೀತಿ ಪ್ರಾಮಾಣಿಕವಾಗಿ ಕೆಲಸಮಾಡುತ್ತಿದ್ದುದರಿಂದಲೇ ಮಂಗಳೂರು ಜಿಲ್ಲೆಯಲ್ಲಿ ಇವತ್ತು ಭೂಸುಧಾರಣಾ ಕಾನೂನು ಚೆನ್ನಾಗಿ ಜಾರಿಯಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಗಹನವಾಗಿ ಅತ್ಯಂತ ಅಮೂಲ್ಯವಾದ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದಾರೆ. ಆದರೆ ಅವರು ಇದನ್ನು ಯಾರಿಗೆಹೇಳುತ್ತಿದ್ದಾರೆಂಬುದು ನನ್ನ ಪ್ರಶ್ನೆ. ತಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ. ಸಾಗುವಳಿಯ ಬಗ್ಗೆ ಬಹಳ ಅಪಾರವಾದ ವಿಚಾರಗಳನ್ನು ತಾವು ಹೇಳುತ್ತಿದ್ದೀರಿ. ಇಲ್ಲಿ ಆಯ್ಯವಯ ಚರ್ಚೆಯಾಗುವಾಗ ಸದನದಲ್ಲಿ ಎಷ್ಟು ಜನ ಸಚಿವರಿರಬೇಕು, ಹೇಗಿರಬೇಕು ಎಂಬ ನೀತಿ ನಿಯಮ ಗಳೇನೂ ಈ ಸದನಕ್ಕೆ ಇಲ್ಲವೇ ? ಹೇಳುವವರೂ ಕೇಳುವವರೂ ಇಲ್ಲವೆ ? ತಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ. ಮಾನ್ಯ ಖರ್ಗೆಯವರು ಒಬ್ಬರಿದ್ದಾರೆ. ಅವರೂ ಕೂಡ ಎದ್ದು ಹೋಗುತ್ತಾ ರೆಂದು ಭಾವನೆ ಮಾಡಿಕೊಂಡಿದ್ದೆವು ಕಾದಿದ್ದೆವು ಆದರೆ ಅವರು ಹೋಗಲಿಲ್ಲ. ಆದ್ದರಿಂದ ನಾನು ಮಾತನಾಡುತ್ತಿದ್ದೇನೆ. ಈ ರೀತಿ ಕಾರ್ಯಕಲಾಪಗಳು ನಡೆಯುವುದರಿಂದ ಈ ಸದನಕ್ಕೆ ಶೋಭೆ ಬರುವುದಿಲ್ಲ. ಆಯವ್ಯಯ ಚರ್ಚೆ ನಡೆಯುವಾಗ ಮಂತ್ರಿ ಮಂಡಲದಲ್ಲಿ ೩೫-೩೬ ಜನ ಮಂತ್ರಿಗಳು ಇರುವಾಗ ಕನಿಷ್ಟ ೬ ಜನ ಮಂತ್ರಿಗಳಾದರೂ ಇಲ್ಲಿರಬೇಕು. ಒಬ್ಬ ಮಂತ್ರಿಗಳು ಅಲ್ಲಿ ನಿಂತಿದ್ದಾರೆ, ಇನ್ನೊಬ್ಬ ಮಂತ್ರಿಗಳು ಹಿಂದೆ ಕೂತಿದ್ದಾರೆ, ತಾವೂ ಅಲ್ಲಿ ಕೂತಿದ್ದೀರಿ. ಈ ಸದನ ಈ ಪರಿಸ್ಥಿತಿಯಲ್ಲಿ ನಡೆಯುತ್ತಿದೆ ಈ ಪರಿಸ್ಥಿತಿಯಲ್ಲಿ ತಾವು ಸದನವನ್ನು ನಡೆಸುವುದಾದರೆ, ಈ ಸದಕ್ಕೆ ಗೌರವ ಇರುವುದಿಲ್ಲ. ಏಕೆಂದರೆ, ಅನೇಕ ಅಮೂಲ್ಯವಾದ ವಿಚಾರಗಳನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಸದನದ ಗಮನಕ್ಕೆ ತರುತ್ತಿದ್ದಾರೆ. ಅದು ಕೇವಲ ಕಡತದಲ್ಲಿ ಹೋಗುತ್ತಿದೆಯೇ ಹೊರತು ಇದನ್ನು ಸಂಬಂಧಪಟ್ಟ ಮಂತ್ರಿಯಾಗಲಿ, ಬೇರೆ ಮಂತ್ರಿಯಾಗಲಿ ಗುರುತು ಹಾಕಿಕೊಳ್ಳುತ್ತಿಲ್ಲ. ಮಾನ್ಯ ಖರ್ಗೆಯವರ ಬಗ್ಗೆ ನನಗೆ ಬಹಳ ಗೌರವ ಇದೆ. ಅವರೂ ಕೂಡ ಎದ್ದು ಹೋಗುತ್ತಾರೆಂದು ನಾನು ತಿಳಿದಿದ್ದೆ. ಅವರು ಹೋಗಲಿಲ್ಲ, ಅವರು ಹೋಗುವುದಿಲ್ಲ, ಇಲ್ಲೇ ಇರುತ್ತಾರೆ. ನಾನಾದರೂ ಹೇಳುತ್ತೇನೆ ದಯವಿಟ್ಟು ಈರೀತಿಯಲ್ಲಿ ಸಭೆಯನ್ನು ನಡೆಸಬೇಡಿ. ಈ ಸಭೆಯನ್ನು ಬೇಕಾದರೆ ಅರ್ಧಗಂಟೆಕಾಲ ಮುಂದಕ್ಕೆಹಾಕಿ.

SRI QUMARUL ISLAM.—I fully support Mr. Vatal Nagaraj because. Mr. Kagodu Thimmappa is speaking nicely hear and except one or two ministers, nobody is hear to note down.

ಶ್ರೀ ವಾಟಾಳ್ ನಾಗರಾಜ್.—ಅರಣ್ಯ ಇಲಾಖೆಯ ಮಂತ್ರಿಗಳು ಬೇರೆಯವರ ಖುರ್ಚಿಯಲ್ಲಿ ಕೂತಿದ್ದಾರೆ. ಗೃಹ ಮಂತ್ರಿಗಳು ಎಲ್ಲೋ ಮೂಲೆಯಲ್ಲಿದ್ದರು. ನಾನು ಇದನ್ನು ಒಪ್ಪುವುದಿಲ್ಲ.

ಇದೊಂದು ದುರಂತ. ಬಹಳ ಪ್ರಮುಖವಾದ ವಿಚಾರ ಸದನದಲ್ಲಿ ನಡೆಯುವಾಗ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿ ಆಯವ್ಯಯ ಚರ್ಚೆ ನಡೆಯುವಾಗ ಎಷ್ಟು ಜನ ಮಂತ್ರಿಗಳಿರಬೇಕು, ಹೇಗಿರಬೇಕು, ಈ ಸದನದ ಪರಿಸ್ಥಿತಿ ಹೇಗಿರಬೇಕು, ಇದು ಯಾವುದನ್ನೂ ನೀವು ಪಾಲಿಸುವುದಿಲ್ಲವೇ ?

SRI QUMARUL ISLAM.—We will wait for another five minutes. Kindly send the message. Otherwise. you can adjourn the Houses for half an hour.

ಉಪಾಧ್ಯಕ್ಷರು.—೮ ಜನ ಮಂತ್ರಿಗಳು ಆ ಸದನದಲ್ಲಿದ್ದಾರೆ. ಉಳಿದವರನ್ನು ನಾನು ಕರೆಯಿಸುತ್ತೇನೆ.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್.—ಈ ಸರ್ಕಾರ ಈ ಸದನಕ್ಕೆ ತೋರಿಸುತ್ತಿರುವ ಅಗೌರವವನ್ನು ವಿರೋಧಿಸಿ ಈ ಸದನದಿಂದ ಸಭಾತ್ಯಾಗ ಮಾಡುತ್ತಿದ್ದೇನೆ. ಇದು ನಾಚಿಕೆಗೇಡು, ಅತ್ಯಂತ ಅಪಮಾನ.

ಶ್ರೀ ಖಮರಲ್ ಇಸ್ಲಾಂ.—ಮಾನ್ಯ ವಾಟಾಳ್ ನಾಗರಾಜ್‌ರವರ ಜೊತೆ ನಾನೂ ಕೂಡ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಹಾಗೂ ಮಾನ್ಯ ಖಮರಲ್ ಇಸ್ಲಾಮ್‌ವರವರು ಸಭೆಯಿಂದ ನಿರ್ಗಮಿಸಿದರು).

ಶ್ರೀ ಕಾಗೋಡು ತಿಮ್ಮಪ್ಪ.—ಬಗರ್ ಹುಕುಂ ಸಾಗುವಳಿದಾರರು ಹಣವನ್ನು ಕಟ್ಟಿದಮೇಲೆ ಅವರಿಗೆ ಸಾಗುವಳಿ ಚೀಟಿಯನ್ನು ಕೊಡುವ ವ್ಯವಸ್ಥೆ ವಸ್ತುಸ್ಥಿತಿಯಿಂದ ಸಾಧ್ಯವಾಗುತ್ತಿಲ್ಲ. ಏಕೆಂದರೆ, ಇವರೆಲ್ಲರೂ ಬಡವರು. ಬಹಳ ಜನರು ಅವಿದ್ಯಾವಂತರು. ಅವರೊಬ್ಬರೇ ಸ್ವತಃ ತಾಲ್ಲೂಕು ಕಛೇರಿಗೆ ಹೋಗಿ, ಅಲ್ಲಿಯ ಗುಮಾಸ್ತನ ಹತ್ತಿರ ಚಲನ್ ಬರೆಸಿಕೊಂಡು ಅದನ್ನು ಬ್ಯಾಂಕ್‌ಗೆ ತೆಗೆದುಕೊಂಡು ಹೋಗಿ ಹಣವನ್ನು ಕಟ್ಟಿ, ಮತ್ತೆ ಆ ಚಲನ್‌ನ್ನು ತಂದು ಆ ಗುಮಾಸ್ತನಿಗೆ ಕೊಟ್ಟರೆ ಅದನ್ನು ಆ ರೆಕಾರ್ಡ್‌ನಲ್ಲಿ ಹಾಕಿಕೊಳ್ಳುತ್ತಾನೆ. ಅನಂತರ ಅವನು ಸಾಗುವಳಿ ಚೀಟಿಯನ್ನು ಬರೆಯುತ್ತಾನೆ. ಆದರೆ ಈ ಕೆಲಸ ಈ ಬಡವರಿಂದ ಮಾಡಲು ಸಾಧ್ಯವಾಗುವುದಿಲ್ಲ. ನಮಗೆ ಇದು ಅನುಭವದಿಂದ ಚೆನ್ನಾಗಿ ಗೊತ್ತಾಗಿದೆ. ಆ ಅವಿದ್ಯಾವಂತರಿಂದ ಹಣವನ್ನು ಕಟ್ಟಿಸಬೇಕಾದರೆ ಅವನ ಜೊತೆ ಇನ್ನೊಬ್ಬ ಹೋಗಬೇಕು, ಕಟ್ಟಿದ ಚಲನ್‌ನ್ನು ಬ್ಯಾಂಕ್‌ಗೆ ಕೊಡಬೇಕು. ಯಾರಾದರೂ ಒಬ್ಬರು ತಿಳುವಳಿಕೆ ಇರುವವರು ಅವನ ಜೊತೆ ಇದ್ದರೆ ಮಾತ್ರ ಸಕಾಲದಲ್ಲಿ ಹಣವನ್ನು ಬ್ಯಾಂಕ್‌ಗೆ ಕಟ್ಟಿ ಸಾಗುವಳಿ ಚೀಟಿಯನ್ನು ತೆಗೆದುಕೊಳ್ಳುತ್ತಾನೆ. ಆದರೆ ಅವನ ಜೊತೆಗೆ ಹೋದವನು ಸರಿಯಾಗಿದ್ದರೆ ಪರವಾಗಿಲ್ಲ, ಇಲ್ಲದಿದ್ದರೆ ಆ ಹಣವನ್ನು ಇವನೇ ಜೇಬಿಗೆ ಇಳಿಸುತ್ತಾನೆ. ತಮಗೆ ಹೇಳುವುದಾದರೆ ೭೮-೭೯ನೇ ಸಾಲಿನಲ್ಲಿ ಬ್ಯಾಂಕ್‌ಗೆ ಹಣವನ್ನು ಕಟ್ಟಿದ್ದರೂ ಇದುವರೆಗೂ ಕೆಲವರು ಸಾಗುವಳಿ ಚೀಟಿಯನ್ನು ತೆಗೆದುಕೊಂಡಿಲ್ಲ. ಕಾರಣ ಬ್ಯಾಂಕ್‌ಗೆ ಹಣವನ್ನು ಕಟ್ಟಿದ ಮೇಲೆ ಆ ಚಲನ್‌ನ್ನು ತಾಲ್ಲೂಕು ಕಛೇರಿಗೆ ತಂದುಕೊಡಬೇಕು, ಆದರೆ ಕೊಟ್ಟಿಲ್ಲ. ಇವರ ಲೆಕ್ಕದಲ್ಲಿ ಅವನು ಹಣವನ್ನು ಕಟ್ಟಿಲ್ಲ. ಏಕೆಂದರೆ ಚಲನ್ ಬಂದಿಲ್ಲ. ಅವನ ಲೆಕ್ಕದಲ್ಲಿ ಹಣ ಕಟ್ಟಿದ್ದಾನೆ. ಏಕೆಂದರೆ ಚಲನ್ ಅವನ ಹತ್ತಿರವೇ ಇದೆ. ಇದು ಪ್ರೊಸೀಜರ್. ಇವತ್ತು ಅವಿದ್ಯಾವಂತರಿಗೆ ಹಳ್ಳಿಯಲ್ಲಿ ಇರತಕ್ಕ ಈ ಜನರಿಗೆ ಸ್ವತಃ ತಾಲ್ಲೂಕು ಕಛೇರಿಗೆ ಹೋಗಿ ತಮ್ಮ ಕೆಲಸವನ್ನು ತಾವೇ ನಿಂತು ಮಾಡಿಸಿಕೊಳ್ಳುವ ಶಕ್ತಿ ಅವರಲ್ಲಿಲ್ಲ. ಇದು ನಮ್ಮ ಕ್ಷೇತ್ರದಲ್ಲಿ ಹಾಗೂ ಪ್ರತಿಯೊಂದು ಕಡೆ ಇರತಕ್ಕ ತೊಂದರೆ. ನೀವು ಯಾರನ್ನೇ ಕೇಳಿದರೂ ಅವರೆಲ್ಲರೂ ಇದನ್ನೇ ಹೇಳುತ್ತಾರೆ. ಆದ್ದರಿಂದ ನಾವು ಮಂಜೂರಾತಿಯನ್ನು ಮಾಡಿದ ಕೂಡಲೇ ಅವರಿಗೆ ಸಾಗುವಳಿ ಚೀಟಿಯನ್ನು ಕೊಟ್ಟು, ಅವನು ಕಟ್ಟುವಂಥ ಹಣವನ್ನು ಎಷ್ಟು ಕಂತುಗಳಲ್ಲಿ ಕಟ್ಟಬೇಕೆಂದಿದೆ ಅದನ್ನು ಲ್ಯಾಂಡ್ ರೆವಿನ್ಯೂ ಮುಖಾಂತರ ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಎಂದು ಭೂಸುಧಾರಣಾ ಕಾನೂನಿನಲ್ಲಿ ನಾವೇನು ಮಾಡಿದ್ದೇವೆ, ಅದೇರೀತಿ ಮಾಡಿದರೆ ಇನ್ನು ೩-೪ ತಿಂಗಳಲ್ಲಿ ಎಲ್ಲ ಪ್ರಕರಣಗಳನ್ನೂ ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಧರ್ಮಸಿಂಗ್‌ರವರು ಕಂದಾಯ ಸಚಿವರು

ಮಾನ್ಯ ಖಾರ್ಗೆಯವರು ಸಹಕಾರಿ ಸಚಿವರು, ಮಂತ್ರಿಮಂಡಲದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಪ್ರಸ್ತಾಪ ಮಾಡಿದಾಗ ಎಲ್ಲರೂ ಇದನ್ನು ಒಪ್ಪಿಕೊಂಡಿದ್ದರು. ಮಾನ್ಯ ಮಂತ್ರಿಗಳು ಇದರ ಬಗ್ಗೆ ಆಸಕ್ತಿವಹಿಸಿ ಕೆಲಸ ಮಾಡಬೇಕು. ಈ ಸದನ ೬ನೇ ತಾರೀಖಿನವರೆಗೆ ನಡೆಯುತ್ತದೆ. ಅಷ್ಟರಲ್ಲಿ ಇದಕ್ಕೆ ತಿದ್ದುಪಡಿ ಬರುತ್ತದೆಂದು ನಾನು ತಿಳಿದಿದ್ದೆ. ಒಂದು ವೇಳೆ ತಿದ್ದುಪಡಿ ಬರದಿದ್ದರೂ ಸುಗ್ರೀವಾಜ್ಞೆಯನ್ನು ತಂದು ಇದನ್ನು ಖಂಡಿತವಾಗಿ ಜಾರಿಗೆ ತರಬೇಕು. ಈ ಸದನದ ಎಲ್ಲ ಸದಸ್ಯರ ಸರ್ವಾನುಮತದ ತೀರ್ಮಾನ ಕೂಡ ಇದು ಹೌದು. ಆದ್ದರಿಂದ ಇದು ಕಾರ್ಯಗತವಾಗುವಂಥ ಸಂದರ್ಭದಲ್ಲಿ ಏನು ತೊಂದರೆಗಳಿವೆ, ಅಧಿಕಾರಿಗಳು ಯಾವ ರೀತಿಯಲ್ಲಿ ನಮ್ಮ ಸರ್ಕಾರದ ನೀತಿಯನ್ನು ತದ್ವಿರುದ್ಧವಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆಂಬುದನ್ನು ಮಂತ್ರಿಗಳ ಗಮನಕ್ಕೆ ತರುವ ಉದ್ದೇಶದಿಂದಲೇ ನಾನು ಇದನ್ನು ಪ್ರಸ್ತಾಪ ಮಾಡಿದ್ದೇನೆ. ಮಧ್ಯದಲ್ಲಿ ನಮ್ಮ ಯಡಿಯೂರಪ್ಪನವರು ಇದನ್ನು ಕೇಳಿದರು. ಆದರೆ ಅವರು ಕೇಳುವುದಕ್ಕಿಂತ ಮೊದಲೇ ನಾವೇ ಇದನ್ನು ಮಾಡಿಕೊಡಬೇಕು. ಇವರಿಂದ ನಾವು ಏತಕ್ಕೆ ಹೇಳಿಸಿಕೊಳ್ಳಬೇಕು. ಶಾಸನಗಳನ್ನು ನಾವೇ ಇಲ್ಲಿ ತಂದಿದ್ದೇವೆ. ನಾವೇ ತಂದು ನಾವೇ ಅವುಗಳನ್ನು ಜಾರಿಗೆ ಕೊಟ್ಟಿದ್ದೇವೆ, ಮತ್ತೆ ನಾವೇ ಕ್ರಮ ತೆಗೆದುಕೊಳ್ಳುವಂತೆಯೂ ಮಾಡಿದ್ದೇವೆ. ಇವತ್ತು ಏನಾದರೂ ನ್ಯೂನ್ಯತೆಗಳು ಬಂದರೆ ಅದನ್ನು ಸರಿಪಡಿಸಿಕೊಂಡು ನಾವು ಕೊಟ್ಟಂಥ ಮಾತನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಭರವಸೆಗಳನ್ನು ಈಡೇರಿಸುವ ದೃಷ್ಟಿಯಿಂದ ಕೆಲವು ತಿದ್ದುಪಡಿಗಳನ್ನು ಮಾಡಬೇಕಾದಂಥ ಅಗತ್ಯವಿದೆ. ಆ ಕೆಲಸವನ್ನು ನಾವು ಮಾಡಬೇಕು. ಹಾಗೆ ಮಾಡಿದರೆ ಮಾತ್ರ ಈ ಕೆಲಸವಾಗುತ್ತದೆಂದು ಕೂಡ ಹೇಳಿದ್ದೇವೆ. ಈ ಗೋಮಾಳಗಳನ್ನು ರಿಸಂಪಷನ್ ಮಾಡತಕ್ಕಂಥ ಕೆಲಸ ಜಿಲ್ಲಾಧಿಕಾರಿಗಳಿಗೆ ಇತ್ತು. ಈಗ ಅದನ್ನು ಅಸಿಸ್ಟೆಂಟ್ ಕಮೀಷನರಿಗೆ ಕೊಟ್ಟಿದ್ದಾರೆ. ನಾನು ಹೇಳುವುದೇನೆಂದರೆ ಅದನ್ನು ತಹಶೀಲ್ದಾರರಿಗೆ ಕೊಡಬೇಕೆಂದು. ಏತಕ್ಕೆಂದರೆ ಇದರಿಂದ ಕೆಲಸ ಬೇಗ ಬೇಗ ಆಗುತ್ತದೆ. ಇಲ್ಲದೆ ಹೋದರೆ ಈ ರೆಕಾರ್ಡ್‌ಗಳನ್ನು ಅಸಿಸ್ಟೆಂಟ್ ಕಮೀಷನರಿಗೆ ಕೊಟ್ಟರೆ ಅದು ಅಲ್ಲಿ ಹೋಗಿ ಕುಳಿತು ಕೊಳ್ಳುತ್ತದೆ. ಅವರು ಸುಮ್ಮನೆ ಮಾಡುತ್ತಾರೆಯೋ, ಒಂದು ಇನ್‌ಫರ್‌ಮೇಷನ್ ಕೇಳುತ್ತಾರೆ. ಈ ರೀತಿ ಇನ್‌ಫರ್‌ಮೇಷನ್‌ಗಳನ್ನೆಲ್ಲಾ ಮೊನ್ನೆ ಕೇಳಿದ್ದಾರೆ. ಈಗ ಸರ್ಕಾರಕ್ಕೆ ಬಂದಿದೆ. ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಬಂದಾಗ ಅಲ್ಲಿ ಏನಾದರೂ ಅವರು ಬಂದರೆ ಫೋನ್‌ಮಾಡಿ ತರಿಸಿ ಕೊಳ್ಳಬಹುದು. ಬಹುಶಃ ಅವರೇ ಅಲ್ಲಿ ಫೈನಲೈಸ್ ಮಾಡಬಹುದು. ಅದು ಇಲ್ಲವೇ ಇಲ್ಲ. ಆ ರೀತಿ ಮಾಡುತ್ತಿಲ್ಲ. ಫೈಲನ್ನು ವಾಪಸ್ ಕಳುಹಿಸಿ ಕ್ಲಾರಿಫಿಕೇಷನ್ ಕೇಳುವುದು, ಅದರೊಳಗೆ ಕಾಲ ಕಳೆಯುವುದು ಇದರಿಂದಲೇ ಯಾವುದೇ ಫೈಲ್ ಬರುವುದಿಲ್ಲ. ಅವರು ರಿಸಂಪಷನ್ ಮಾಡುವ ವರೆಗೂ ಸಾಗುವಳಿ ಚೀಟಿಯನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಬೇರೆ ಸಂದರ್ಭದಲ್ಲಿ ವಿಚಾರ ಮಾಡಿದಂತೆ ನಾವು ಈ ಬಗ್ಗೆ ಮಾಡಕೂಡದು. ಅದಕ್ಕೆ ಒಂದು ಏನೋ ಮುಂಜಾಗರ ಮಾಡಿಕೊಂಡು ಹೋಗುತ್ತಾರೆಂದು ತಲೆಗೆ ಬಂದುಬಿಟ್ಟಿದೆ. ಈಗ ಬೆಂಗಳೂರು ಸುತ್ತಮುತ್ತಲೂ ಬೇಕಾದರೆ, ಏನಾದರೂ ಮಾಡಿಕೊಳ್ಳಿ. ಬೆಂಗಳೂರು ಸುತ್ತಮುತ್ತಲೂ ಬೆಲೆಬಾಳತಕ್ಕಂಥ ಭೂಮಿಗಳು ಇವೆ ಇಲ್ಲಿ ಏನೋ ಲಪಟಾಯಿಸುತ್ತಾರೆ, ಏನೋ ಹೊಡೆದುಕೊಂಡು ಹೋಗುತ್ತಾರೆನ್ನುವ ವಿಚಾರ ನಿಮಗೆ ಇದೆ. ಇದರ ಬಗ್ಗೆ ವಿವಿಧವಾದಂಥ ಕಾನೂನು ಮಾಡಿಕೊಂಡು ಬೇಕಾದರೆ ನೀವು ಹೇಗೆ ಬೇಕಾದರೂ ತೀರ್ಮಾನ ಮಾಡಿಕೊಳ್ಳಿ. ಇದರ ವ್ಯವಹಾರಕ್ಕೆ ನಾವು ಬರುವುದಿಲ್ಲ. ಆದರೆ ಹಳ್ಳಿಗಳಲ್ಲಿರತಕ್ಕಂಥ ನಮ್ಮನ್ನು ಏತಕ್ಕೆ ಕೊಲ್ಲಲಿಕ್ಕೆ ಹೋಗುತ್ತೀರಿ. ಆದ್ದರಿಂದ ದಯವಿಟ್ಟು ತಹಶೀಲ್ದಾರ್‌ರಿಗೆ ರಿಸಂಪಷನ್ ಮಾಡತಕ್ಕಂಥದ್ದಕ್ಕೆ ಅಧಿಕಾರವನ್ನು ಕೊಡಬೇಕು. ಇನ್ನು ನಿಮ್ಮ ಆಶ್ರಯ ಯೋಜನೆಯ ಪ್ರಕಾರ ಸೈಟುಗಳನ್ನು ಕೊಡುತ್ತೀರಿ ಅದಕ್ಕೂ ಕೂಡ ರಿಸಂಪಷನ್ ಮಾಡತಕ್ಕಂಥ ಅಧಿಕಾರವನ್ನು ನಮ್ಮ ತಹಶೀಲ್ದಾರರಿಗೆ ಕೊಟ್ಟರೆ ನಾವು ಬೇಕುಬೇಕಾದವರಿಗೆ ಸೈಟುಗಳನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ರಿಸಂಪಷನ್ ಮಾಡುವುದಕ್ಕೆ ಅಸಿಸ್ಟೆಂಟ್ ಕಮೀಷನರ್‌ರವರಿಗೆ ಪವರ್‌ನ್ನು ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದು ಆಗುವುದಿಲ್ಲ, ಅವರಿಗೂ ಅದೇ ಗತಿ.

ಒಬ್ಬ ಮಾನ್ಯ ಸದಸ್ಯರು.—ಈಗ ತಹಶೀಲ್ದಾರರು ಏನಿದ್ದಾರೆ ಅವರ ಕೈಕೆಳಗೆ ಸೆಕ್ರೆಟರಿಯವರು ಇರುವುದರಿಂದ ಅವರಿಂದ ಏನು ಮಾಡಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಡಿ. ಸಿ. ಎ. ಸಿ. ಏನೂ ಮಾಡುವುದಿಲ್ಲ. ಇದು ಫಾರ್ಮಾಲಿಟೀಸ್, ಮದುವೆಯಾಗುವಾಗ ತಾಳಿಯನ್ನು ಕಟ್ಟುವ ಹಾಗೆ. ತಾಳಿಯನ್ನು ಕಟ್ಟಬೇಕೆಂದು

ಕಾನೂನಿನಲ್ಲಿ ಬರೆದಿದ್ದಾರಯೇ ? ನಮ್ಮ ಹಿಂದೂ ಮ್ಯಾರೇಜ್ ಆಕ್ಟ್‌ನಲ್ಲಿ ಆ ರೀತಿ ಏನಾದರೂ ಬರೆದಿದ್ದೇವೆಯೇ ? ಆ ರೀತಿ ಏನು ಬರೆದಿಲ್ಲ. ಆದರೆ ತಾಳಿ ಕಟ್ಟಬೇಕೆಂದು ಕಟ್ಟುತ್ತೇವೆ ಅಷ್ಟೇ ಕಾನೂನು ಪ್ರಕಾರವಾಗಿ ಅದನ್ನು ರಿಜೆಕ್ಟ್ ಮಾಡಲಿಕ್ಕೆ ಬರುವುದಿಲ್ಲ, ಜಸ್ಟ್ ಫೈಲ್ ಹೋಗಬೇಕು. ಅದಕ್ಕೆ ಒಂದು ಮಂಜೂರಾತಿ ಆಗಬೇಕು. ಒಂದು ವೇಳೆ ಬಹಳ ಕಾಲದಿಂದ ಅದು ಬೆಳೆದುಕೊಂಡು ಬಂದಿದ್ದರೆ ವಿವರ ಕೇಳುವುದು. ನೀವು ಇದನ್ನು ಏತಕ್ಕೆ ಮೊದಲೇ ಕಳುಹಿಸಲಿಲ್ಲ. ಅವನು ಎಷ್ಟು ವರ್ಷಗಳಿಂದ ಮಾಡಿದ್ದಾನೆ ಟಿ.ಟಿ. ಹಾಕಿದ್ದಾರೆಯಾ ಅವನಿಗೆ ದಾಖಲಾತಿ ಇದೆಯೇ ? ಇವನ್ನು ಸಾಗುವಳಿ ಮಾಡಿದ್ದಾನೆ ಎನ್ನುವುದಕ್ಕೆ ಏನು ದಾಖಲೆ ಇದೆ ಎಂದು ಕೇಳುತ್ತಾರೆ, ಈ ದಾಖಲೆಗಳನ್ನೆಲ್ಲ ನೋಡಿ ಮಾಡುವುದಾದರೆ ಕಮಿಟಿ ಏತಕ್ಕೆ ಬೇಕು. ಆದ್ದರಿಂದ ಇವತ್ತು ತಹಶೀಲ್ದಾರರಿಗೆ ಅಧಿಕಾರ ಕೊಡುವುದರಿಂದ it is just a formality, a ritual. It is legally hundred percent co rect, It is a creation. ಈ ಒಂದು ಹೈರಾರ್ಕಿ ಇದೆಯಲ್ಲ, ಅಫಿಷಿಯಲ್ ಮಟ್ಟದಲ್ಲಿ ಅವರದು ಒಂದು ಪ್ರೆಸ್ಟೀಜ್ ಇರಬೇಕೆಂದು, ಅದು ಹೋಗಬೇಕು. ಶಾಸನ ಮಾಡುವವರು ಯಾರು ? ಶಾಸನ ಸಭೆಯಲ್ಲಿ ನಾವೇ ಅಲ್ಲವೇ ? It is prerogative of the legislature. If you have got the political will, you can do it, what is there ? Nothing is prevented by God. It is man-made. There is legislation, we have got supreme power. Why we should go back, why you should hesitate ? Therefore, you must dictate terms. ಭೂ ಸುಧಾರಣಾ ಕಾನೂನು ಜಾರಿಗೆ ಬಂದಾಗಲೂ ಕೂಡ ೭-೮ ಲಕ್ಷ ಅರ್ಜಿಗಳು ಬಂದಿದ್ದವು. ಮಾನ್ಯ ಖಾರ್ಗೆಯವರು ಕಂದಾಯ ಸಚಿವರಾಗಿ ಬರುವವರೆಗೂ ಸುಮಾರು ೫-೬ ಲಕ್ಷ ಅರ್ಜಿಗಳು ಇದ್ದು ನಾವು ಹೊಸದಾಗಿ ಹೆಚ್ಚು ಟ್ರಿಬ್ಯುನಲ್‌ಗಳನ್ನು ಮಾಡಿ ಈ ರೀತಿ ಕೆಲವು ತಿದ್ದುಪಡಿಗಳನ್ನು ಮಾಡಿದ್ದರಿಂದ ಇವುಗಳನ್ನು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಯಿತು ಇವತ್ತು ಎಂಟುಲಕ್ಷ ಅರ್ಜಿಗಳನ್ನು ಬಾಕಿ ಇಟ್ಟಿದ್ದಾರೆ. ಮೂರು ವರ್ಷಗಳು ಕಳೆದರೂ ೩ ಲಕ್ಷ ಅರ್ಜಿಗಳು ತೀರ್ಮಾನವಾಗಿಲ್ಲ. ಎಂಟು ಲಕ್ಷ ಅರ್ಜಿಗಳನ್ನು ನಾವು ಇಟ್ಟುಕೊಂಡು ಸುಮ್ಮನೆ ಆಚೆ ಈಚೆ ಓಡಾಡಿದರೆ ಕೆಲಸವಾಗುತ್ತದೆಯೇ ?

೨-೧೫ ಪಿ-ಎಂ.

ಆಮೇಲೆ ಸುಲಭವಾಗಿ ವಿರೋಧಪಕ್ಷದವರು ಇದನ್ನೇ ಹೇಳುತ್ತಾರೆ. ಇದೇ ಕಾರಣಕ್ಕಾಗಿ ರೈತಸಂಘದ ಅನೇಕ ಚಳುವಳಿಗಳೇ ಆಯಿತು. ಬಗರ್‌ಹುಕುಂ ಸಾಗುವಳಿ ಮಂಜೂರು ಮಾಡಬೇಕು ಎಂಬುದು ಅವರದೊಂದು ಚಳುವಳಿ ಆಗಿತ್ತು. ಈಗ ಎಲ್ಲಿದೆ ? ಆದ್ದರಿಂದ ನಾವು ಮಾಡದೇ ಹೋದರೆ ವಿರೋಧ ಪಕ್ಷಗಳಿಗೆ ಚಳುವಳಿ ಮಾಡುವುದಕ್ಕೆ, ನಮ್ಮ ವಿರುದ್ಧ ಟೀಕೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇದಕ್ಕೆಲ್ಲಾ ನಾವು ಏತಕ್ಕೆ ಅವಕಾಶ ಮಾಡಿ ಕೊಡಬೇಕು ? ಇವತ್ತು ನ್ಯೂನತೆಗಳನ್ನು ಸರಿಪಡಿಸಿಕೊಂಡರೆ ಖಂಡಿತವಾಗಿ ಸರ್ಕಾರಕ್ಕೆ ಹೆಸರು ಬರುತ್ತದೆ. ಜನರು ನಮ್ಮಲ್ಲಿ ವಿಶ್ವಾಸ ಇಟ್ಟಿದ್ದಾರೆ. ಆದ್ದರಿಂದ ಈ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಪಂಚಾಯಿತಿಗಳಿಗೆ ಚುನಾವಣೆಗಳಾಗಿವೆ. ಇವತ್ತು ಸಾಮಾಜಿಕ ನ್ಯಾಯ ಕೊಡುವ ದೃಷ್ಟಿಯಿಂದ ಪಂಚಾಯಿತಿ ಚುನಾವಣೆ ಖಂಡಿತವಾಗಿ ಕೂಡ ಒಂದು ಇತಿಹಾಸವನ್ನು, ಚರಿತ್ರೆಯನ್ನು ಸೃಷ್ಟಿ ಮಾಡಿದೆ. ನಮ್ಮಲ್ಲಿ ೫೬೦೦ ಪಂಚಾಯಿತಿಗಳಿವೆ. ಇದರಲ್ಲಿ ಸುಮಾರು ೧೪೦೦ ರಷ್ಟು ಮಹಿಳೆಯರು ಪಂಚಾಯಿತಿ ಅಧ್ಯಕ್ಷರಾಗುತ್ತಾರೆ. ಸುಮಾರು ೧೨೦೦ ರಷ್ಟು ಹರಿಜನ ಗಿರಿಜನರು ಪಂಚಾಯಿತಿ ಅಧ್ಯಕ್ಷರಾಗುತ್ತಾರೆ. ಸುಮಾರು ೧೫೦೦ರಷ್ಟು ಹಿಂದುಳಿದವರು ಪಂಚಾಯಿತಿ ಅಧ್ಯಕ್ಷರಾಗುತ್ತಾರೆ ಸ್ವಾಮಿ, ಇತಿಹಾಸದಲ್ಲಿ ಯಾವತ್ತಾದರೂ ದೃಶ್ಯವ ಕಂಡಿದ್ದೀರಾ ? ಆದರೆ ಇವತ್ತು ಕಾಣುವುದಕ್ಕೆ ಸಾಧ್ಯವಿದೆ. ಮಹಿಳೆಯರು ಶೇಕಡ ೪೦ ರಷ್ಟು ಈಗ ಬರುತ್ತಾರೆ. ೫ ಸಾವಿರದಲ್ಲಿಒಂದೂವರೆ ಸಾವಿರ ಮಹಿಳೆಯರೇ ಪಂಚಾಯಿತಿ ಅಧ್ಯಕ್ಷರಾಗುತ್ತಾರೆ. ಇದೊಂದು ಬದಲಾದ ವಾತಾವರಣ ಅಲ್ಲವೆ ? ಸಾಮಾಜಿಕ ನ್ಯಾಯ ಕೊಟ್ಟಿದ್ದಲ್ಲವೆ ? ಇವತ್ತು ಹಳ್ಳಿಯಲ್ಲಿರತಕ್ಕ ಕೂಲಿ ಮಾಡುವ ಹೆಣ್ಣು ಮಕ್ಕಳು ಪಂಚಾಯಿತಿ ಅಧ್ಯಕ್ಷ ಸ್ಥಾನ ವಹಿಸಿಕೊಂಡು ಕೆಲಸ ನಿರ್ವಹಿಸುತ್ತಾಳೆ ಎಂಬ ಒಂದು ಕಾಲ ಬಂದಿದ್ದರೆ ಅದನ್ನು ನೋಡಿ ಸಂತೋಷ ಪಡುವ ಕಾಲ ಅಲ್ಲವೇ ಇದು ? ಒಬ್ಬ ಮಹಿಳೆ ಇವತ್ತು ಪಂಚಾಯಿತಿ ಅಧ್ಯಕ್ಷಳಾಗಿದ್ದಾಳೆ ಎಂದರೆ, ಹರಿಜನರು ಪಂಚಾಯಿತಿ ಅಧ್ಯಕ್ಷರಾಗಿದ್ದಾರೆ ಎಂದರೆ ಸಂತೋಷ ಪಡುವ ಕಾಲ ಅಲ್ಲವೇ ? ಹಿಂದೆ ಮಂಡಲ ಪಂಚಾಯಿತಿ ಎಂದು ಇತ್ತು. ಅದಕ್ಕಿಂತ ಹಿಂದೆ ಬೇರೆ ಪಂಚಾಯಿತಿ ಇತ್ತು. ಆಗ ಎಷ್ಟು ಜನ ಜಿಲ್ಲಾ ಪರಿಷತ್ ಅಧ್ಯಕ್ಷರು ಹರಿಜನರು ಆಗಿದ್ದರು ? ಎಷ್ಟು ಜನ ಹಿಂದುಳಿದವರಾಗಿದ್ದರು ? ಎಷ್ಟು ಜನ ಮಂಡಲ

ಪಂಚಾಯಿತಿ ಅಧ್ಯಕ್ಷರಾಗಿದ್ದರು ? ಹರಿಜನರು ಎಷ್ಟು ಜನರಾಗಿದ್ದರು ? ಹಿಂದುಳಿದವರು ಎಷ್ಟು ಜನರಾಗಿದ್ದರು ? ಆದರೆ ಇವತ್ತು ಆ ಕಾಲವನ್ನು ಪರಿವರ್ತನೆ ಮಾಡಿದ್ದೇವೆ. ನಮ್ಮ ಪಕ್ಷಕ್ಕೆ, ನಮ್ಮ ಸರ್ಕಾರಕ್ಕೆ ಬೆಂಬಲ ಯಾವುದು ? ಇದೇ ದುರ್ಬಲರೆ. ಈ ಸಮಾಜದ ಬೆಂಬಲವೆ. ನಮಗೆ ಅವರೇ ಬೆಂಬಲ ಕೊಟ್ಟವರು, ಆದರೆ ಅವರಿಗೆ ಅಧಿಕಾರ ಕೊಡುವುದಕ್ಕೆ ನಾವು ಏತಕ್ಕೆ ಹಿಂದೆ ಹೋಗ ಬೇಕು ? ಅದಕ್ಕಾಗಿ ಈಗ ಅದನ್ನು ಕೊಟ್ಟಿದ್ದೇವೆ. ಈ ಕೀರ್ತಿ ಸಂಪಾದನೆ ಮಾಡಿದ್ದನ್ನು ಹೆಮ್ಮೆ ಯಿಂದ ನಾವು ಹೇಳಿಕೊಳ್ಳುತ್ತಿದ್ದೇವೆ. ಹೆಮ್ಮೆಯ ಶಿಖರವನ್ನು ಏರಿರತಕ್ಕ ನಮ್ಮ ಪಕ್ಷದ ಸರ್ಕಾರ ತಾಲ್ಲೂಕು ಪಂಚಾಯಿತಿಗಳಿಗೆ ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆ ಮಾಡುವುದಿಲ್ಲ ಎಂಬ ಅಪನಂಬಿಕೆ ನಿಮಗೆ ಬಂದಿದ್ದರೆ ನಿಮ್ಮಷ್ಟು ದಡ್ಡರು ಯಾರೂ ಇಲ್ಲ. ನಾವೇನೂ ಮಾಡಬೇಕಾಗಿಲ್ಲ. ಏಕೆಂದರೆ ಇವತ್ತು ಈ ಚರಿತ್ರಾರ್ಹವಾದ ಘಟನೆಯನ್ನು ನಮ್ಮ ಸರ್ಕಾರ ಮಾಡಿದೆ. ಅದರ ಕೀರ್ತಿ ನಮಗೇ ದಕ್ಕಬೇಕು. ಒಳ್ಳೆಯ ಅಡಿಗೆ ವ್ಯವಸ್ಥೆ ಮಾಡಿ ಇಟ್ಟು ಅದನ್ನು ಊಟ ಮಾಡುವಂಥ ಸಂದರ್ಭದಲ್ಲಿ ನಿಮಗೆ ಬಿಟ್ಟು ಬಿಡುತ್ತೇವೆ ಎಂದು ತಿಳಿದುಕೊಂಡಿರಾ ? ನಾವು ಶ್ರಮವಹಿಸಿ ಮಾಡಿಟ್ಟಿದ್ದೇವೆ. ಊಟ ಮಾಡುವ ಕೆಲಸದಲ್ಲಿ ನಿಮಗೆ ಕೊಡುತ್ತೇವಾ ? ಕೊಡುವುದಿಲ್ಲ. ತಾಲೂಕು, ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣೆ ಆಗುತ್ತದೆ. ಅಲ್ಲೂ ಕೂಡ ಹರಿಜನ ಅಧ್ಯಕ್ಷರನ್ನು ನೋಡುತ್ತೀರಿ. ಮಹಿಳಾ ಅಧ್ಯಕ್ಷರನ್ನು ನೋಡುತ್ತೀರಿ, ಅಲ್ಪಸಂಖ್ಯಾತರನ್ನು ನೋಡುತ್ತೀರಿ. ನಮ್ಮ ತಾಲ್ಲೂಕಿನಲ್ಲಿ ಅಲ್ಪಸಂಖ್ಯಾತರೊಬ್ಬರು ಅಧ್ಯಕ್ಷರಾಗಿದ್ದಾರೆ. ಇವತ್ತು ಮುಸ್ಲಿಂ......

ಶ್ರೀ ಬಿ. ಆರ್. ಪಾಟೀಲ್.—ಹರಿಜನರಿಗೆ ಮಹಿಳೆಯರಿಗೆ ರಿಸರ್ವೇಷನ್ ಕೊಟ್ಟಿರುವುದನ್ನು ನಾವು ಒಪ್ಪುತ್ತೇವೆ. ಇಲ್ಲ ಎಂದು ಹೇಳುವುದಿಲ್ಲ. ಆದರೆ ಮೆಜಾರಿಟಿ ಇಲ್ಲದೇ ಇದ್ದರೂ ಅಧಿಕಾರ ನಡೆಸಬಹುದೇ ಹೇಗೆ ಎಂಬ ಬಗ್ಗೆ ಒಂದು ಮಾತನ್ನು ಹೇಳುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಈ ಕಾನೂನಿನ ತೊಡಕು ಕೆಲವು ಸಾರಿ ಬರುತ್ತದೆ. ಪ್ರಜಾಸಂಖ್ಯೆ ಇಲ್ಲದಿದ್ದರೆ ರಿಸರ್ವೇಷನ್ ಮಾಡುವುದಕ್ಕೆ ಕೆಲವು ಮಾಡಿಫಿಕೇಷನ್ ಮಾಡಬೇಕಾಗುತ್ತದೆ.

ಶ್ರೀ ಬಿ.ಆರ್. ಪಾಟೀಲ್.—ನಿಜವಾಗಿ ಹರಿಜನರನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಬೇಕು ಎಂಬ ಇಚ್ಛೆ ಇದ್ದರೆ ನೇರವಾಗಿ ನೀವು ಚುನಾವಣೆ ಮಾಡುತ್ತಿದ್ದಿರಿ. ಈಗ ನೇರವಾಗಿ ಚುನಾವಣೆ ಮಾಡಿದ್ದರೆ ಒಳ್ಳೆಯದು ಎಂದು ಹೇಳುತ್ತಿದ್ದೆವು ನಾವು. ಈಗ ಏನು ಮಾಡಿದ್ದೀರಿ ಎಂದರೆ ಮೂರು ಜನ ಇರುವಂಥ ಗ್ರೂಪಿಗೆ ಅಧಿಕಾರ ಕೊಟ್ಟಿರಿ. ೧೨ ಜನ ವಿರೋಧಪಕ್ಷದವರು ಕುಳಿತುಕೊಂಡು ಅವರನ್ನು ಅಧಿಕಾರ ನಡೆಸುವುದಕ್ಕೆ ಬಿಡುತ್ತಾರಾ ? ಸೆಕ್ರೆಟರಿಗಳೇ ಆಯ್ಕೆ ಮಾಡುತ್ತಾರೆ ನೋಡುತ್ತೀರಿ. ಸುಮ್ಮನೆ ನೀವು ಕೊಚ್ಚಿಕೊಳ್ಳುತ್ತಿದ್ದೀರಿ.

ಶ್ರೀ ಕಾಗೋಡುತಿಮ್ಮಪ್ಪ.—ಈಗ ಮೆಜಾರಿಟಿ ಇದ್ದರೂ ಕೂಡ ವಿಶ್ವಾಸವನ್ನು ಕಳೆದುಕೊಂಡರೆ ಅವಿಶ್ವಾಸ ನಿರ್ಣಯ ಮಂಡಿಸುತ್ತಾರೆ. ಅವರಲ್ಲಿ ರಾಜಕೀಯ ಮಾಡಬೇಕೆಂದು ಹೇಳಿದರೆ, ಮೊಸರಿನಲ್ಲಿ ಕಲ್ಲು ಹುಡುಕಿದಹಾಗೆ ಮಾಡಬೇಕಾಗುತ್ತದೆ. ಆದ್ದರಿಂದ ಈವೊಂದು ವ್ಯವಸ್ಥೆಗೆ ನಾವು ಒಗ್ಗಬೇಕು. ಈ ವ್ಯವಸ್ಥೆಯ ರಕ್ಷಣೆಯಾಗಬೇಕು. ಇದು ಎಲ್ಲರ ಕರ್ತವ್ಯ. ಕಾನೂನಿನಲ್ಲಿ ಅಂತಹ ಒಂದು ತೊಂದರೆ ಬಂದರೆ ಅದನ್ನು ನಿವಾರಣೆ ಮಾಡತಕ್ಕ ಅಧಿಕಾರ ಶಾಸನಸಭೆಗೆ ಇದೆ. ಅದನ್ನು ಮಾಡೋಣ ಏನಿದೆ ಅದರಲ್ಲಿ.

ಶ್ರೀ ಕರಿಯಣ್ಣ.—ಹರಿಜನ ಗಿರಿಜನರು ಅಧ್ಯಕ್ಷರಾಗಿ ಬಂದರೆ, ಮಹಿಳೆಯರು ಅಧ್ಯಕ್ಷರಾಗಿ ಆರಿಸಿ ಬಂದರೆ ಏಕೆ ಬೇಡವೆಂದು ಹೇಳುತ್ತೀರಿ ?

ಶ್ರೀ ಎ.ಕೆ. ಅನಂತಕೃಷ್ಣ.—ಸ್ವಲ್ಪ ತಾಳ್ಮೆಯಿಂದಿರಬೇಕು ಅದು ಮುಖ್ಯ. ಈ ಅಧಿಕಾರ ಸಾವಿರಾರು ವರ್ಷಗಳಿಂದ ಇರಲಿಲ್ಲವೆ ? ಅವರು ಅಧಿಕಾರವನ್ನು ವಹಿಸಿಕೊಂಡಮೇಲೆ ಅವರು ಅಧಿಕಾರ ನಡೆಸುವಾಗ ನಾವು ತಾಳ್ಮೆಯಿಂದ ಜಾಣತನದಿಂದ, ಪ್ರೀತಿಯಿಂದ, ದಕ್ಷತೆಯಿಂದ ಸಮಾಜದ ಹಿತದೃಷ್ಟಿ ಯಿಂದ ಕಾದು ನೋಡಬೇಕು.

ಉಪಾಧ್ಯಕ್ಷರು.—ಮಾನ್ಯ ಬಾಬಾಗೌಡರೇ, ತಾವು ಮಾತನಾಡುವಾಗ ಮಾತನಾಡಿ, ಈಗ ಕುಳಿತು ಕೊಳ್ಳಿ.

ಶ್ರೀ ಬಿ. ಆರ್. ಪಾಟೀಲ್.—ನೇರವಾಗಿ ಚುನಾವಣೆ ಮಾಡಬೇಕಾಗಿತ್ತು ನೀವು.

ಶ್ರೀ ಕಾಗೋಡುತಿಮ್ಮಪ್ಪ.—ಬಗರ್ ಹುಕುಂ ಸಾಗುವಳಿಯನ್ನು ಮಂಜೂರು ಮಾಡುವಾಗ ಆ ಕಾನೂನಿಗೆ ನಾವು ತಿದ್ದುಪಡಿಯನ್ನು ತಂದಿದ್ದೇವೆ. ಈವೊಂದು ಕಾರ್ಯ ಕ್ಷೇತ್ರದಲ್ಲಿ ಆತಂಕಗಳು ತೊಡಕುಗಳು ಬಂದರೆ ಅವುಗಳನ್ನು ನಿವಾರಣೆ ಮಾಡಲಿಕ್ಕೆ ಶಾಸನಸಭೆ ಇದೆ. ಸರ್ಕಾರ ಕೂಡ ಇದೆ. ನಾವು ತಾಳ್ಮೆಯಿಂದ ಇರಬೇಕು. ನಮ್ಮಲ್ಲಿ ಅನೇಕ ಜನರಿಗೆ ಏನಾಗಿದೆ ಅಂದರೆ ಎದುರಿಗೆ ಹೇಳುವುದಕ್ಕಾಗುವುದಿಲ್ಲ. ಒಳಗೆ ಅವರಿಗೆ ಸಹಿಸಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ಅವರ ತಲೆಯಲ್ಲಿ ಯಾರೋ ಛೇರ್ಮನ್ ಆಗಬೇಕೆಂದು ಇತ್ತು. ಆದರೆ ಇವತ್ತು ಬೇರೆ ಯಾರೋ ಛೇರ್ಮನ್ ಆಗಿದ್ದಾರೆ. ಅವರು ಎದುರಿಗೆ ಹೇಳುವಹಾಗೆ ಇಲ್ಲ. ಅವರ ಕಷ್ಟವನ್ನು ಅವರು ನುಂಗಿಕೊಂಡಿದ್ದಾರೆ. ಹೆಣ್ಣು ಮಕ್ಕಳು ಶಾಸಕರಾಗಿ ಈ ಮನೆಯಲ್ಲಿದ್ದಾರೆ. ಇದು ಪುರುಷ ಪ್ರಧಾನವಾದಂತಹ ಸಮಾಜ. ಪುರುಷ ಪ್ರಧಾನವಾದ ಈ ಸಮಾಜದಲ್ಲಿ ನಾವುಪೂರ್ಣ ಅಧಿಕಾರವನ್ನು ಅವರಿಗೆ ಕೊಡುತ್ತೇವೆಂದು ಕೊಟ್ಟಿಲ್ಲ. ಇವತ್ತು ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಹಕ್ಕಿರಬೇಕೆಂದು ಕಾನೂನು ತಂದಿದ್ದೇವೆ. ಏಕೆ ತಂದಿದ್ದೇವೆ ? ಇವತ್ತು ಅವರ ಅಸ್ತಿತ್ವವನ್ನು ಗೌರವಿಸುತ್ತೇವೆ. ಇಷ್ಟು ವರ್ಷಗಳ ಮೇಲೆ ಅಂದರೆ ಸಹಸ್ರಾರು ವರ್ಷಗಳ ಮೇಲೆ ಅಧಿಕಾರಕ್ಕೆ ಬಂದಿದ್ದಾರೆ. ಹೆಣ್ಣುಮಕ್ಕಳು ಅಡಿಗೆ ಮಾಡಬೇಕೆನ್ನುವುದು ನಮ್ಮ ತಲೆಯಲ್ಲಿ ಬಂದಿದೆ. ಒಂದು ವೇಳೆ ಸಮಾಜ ಪರಿವರ್ತನೆಯಾಗಿ ಬೆಳಿಗ್ಗೆ ಎದ್ದ ತಕ್ಷಣ ಗಂಡಸರು ಕಾಫಿ ಮಾಡಬೇಕು ಅಡಿಗೆ ಮಾಡಿ ಬಡಿಸಬೇಕೆಂಬ ಕಾಲ ಬಂತು, ಆಗ ಏನು ಹೇಳುತ್ತೀರಿ ? ಮಾನ್ಯ ಶಿವನಂಜಪ್ಪನವರು ಹೇಳುತ್ತಾರೆ, ಈಗಲೂ ಕೂಡ ನಳಪಾಕ ಅಂದರೆ, ನಳಪಾಕದ ಮುಂದೆ ಯಾರೂ ಇಲ್ಲ ಎಂದು ಅಡಿಗೆ ಶಾಸ್ತ್ರದಲ್ಲಿ ಇದಕ್ಕಿಂತ ದೊಡ್ಡ ಶಾಸ್ತ್ರ ಯಾವುದೂ ಇಲ್ಲ. ದಮಯಂತಿ ಪಾಕ ಎಂದು ಎಲ್ಲೂ ಇಲ್ಲ. ನಳಪಾಕದ ಮುಂದೆ ಯಾವುದೂ ಇಲ್ಲ. ಆದ್ದರಿಂದ ಸಾಮಾಜಿಕ ಪರಿವರ್ತನೆಯಿಲ್ಲದೆ ಸಾಮಾಜಿಕ ನ್ಯಾಯ ಸಿಗುವುದಿಲ್ಲ. ಸಮಾನತೆ ಬರುವುದಿಲ್ಲ. ಪಂಚಾಯಿತಿ ಚುನಾವಣೆಯಲ್ಲಿ ಸಮಾಜವಾದದಲ್ಲಿ ನಂಬಿಕೆ ಇರತಕ್ಕ ಸರ್ಕಾರಕ್ಕೆ ಇವತ್ತು ಸಾಮಾಜಿಕ ನ್ಯಾಯ ಕೊಡತಕ್ಕ ವ್ಯವಸ್ಥೆಯನ್ನು ಪಂಚಾಯಿತಿ ಚುನಾವಣೆಯಲ್ಲಿ ಮಾಡಿದೆ. ಇದನ್ನು ಸ್ವಾಗತ ಮಾಡಬೇಕು ಹಾಗೂ ಇದರಲ್ಲಿ ತಪ್ಪಿದ್ದರೆ ಅದನ್ನು ವಿವರಿಸಿ ಹೇಳತಕ್ಕ ಕೆಲಸ ವಿರೋಧ ಪಕ್ಷಗಳಿಂದ ಆಗಬೇಕೆ ವಿನಹ ಇವತ್ತು ಯಾವುದೋ ಒಂದು ನೆಪವನ್ನು ಹೇಳಿಕೊಂಡು ಪುಂಡು ನೆಪಗಳನ್ನು ಹೇಳಿಕೊಂಡು ಹೊರಗೆ ಇದ್ದರೆ ಅದನ್ನು ಜನ ಮೆಚ್ಚುತ್ತಾರೆಯೆ ? ಆದ್ದರಿಂದ ನಾನು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಇದೊಂದು ನಮ್ಮ ಸರ್ಕಾರದ ಸಾಧನೆ, ಐತಿಹಾಸಿಕ ಮತ್ತು ಚರಿತ್ರಾರ್ಹವಾದ ಒಂದು ಘಟನೆ, ಇದನ್ನು ಯಾರೂ ಮುರಿಯುವುದಕ್ಕೆ ಆಗುವುದಿಲ್ಲ. ಈವೊಂದು ಶಾಸನವನ್ನು ಜಾರಿಗೆ ತಂದಮೇಲೆ ಎಲ್ಲರೂ ಒಪ್ಪಬೇಕಾಗುತ್ತದೆ. ಏಕೆಂದರೆ ದಿವಂಗತ ರಾಜೀವಗಾಂಧಿಯವರು ವಿಶೇಷವಾಗಿ ರಾಜ್ಯಾಂಗಕ್ಕೆ ತಿದ್ದುಪಡಿ ತಂದು ಮಾಡಿರುವಂತಹ ವ್ಯವಸ್ಥೆ ಇದು. ಈಗಿರತಕ್ಕ ಪ್ರಧಾನಮಂತ್ರಿಗಳು ಇದನ್ನು ಜಾರಿಗೆ ತಂದರು. ಇವತ್ತು ಅದರ ಅಂಗವಾಗಿ ಇಡೀ ರಾಷ್ಟ್ರದಲ್ಲಿ ಈ ಕಾನೂನನ್ನು ಮೊದಲನೆಯದಾಗಿ ಪ್ರಥಮವಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತಂದಿದೆ. ಅದನ್ನು ಎಲ್ಲರೂ ಸೇರಿ ಸ್ವಾಗತ ಮಾಡೋಣ. ಮುಂದೆ ಚುನಾವಣೆ ನಡೆಸುತ್ತಾರೆ, ಅದರ ಪ್ರಕಾರ ನಾವೆಲ್ಲರೂ ಹೊಂದಿಕೊಂಡು ಹೋಗಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ವಿರೋಧ ಪಕ್ಷದವರಿಗೆ ಹೇಳುತ್ತಾ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI QUMARUL ISLAM (Gulbarga).—Mr. Deputy Speaker Sir, the Budget presented for the year 1994-1995 seems to be an electicn Budget. In this Budget lot of assurances and promises have been made. I will justify it in my speech later on. No concrete proposals have been made to help minorities in this Budget. No definite amount has been earremarked in thisBudget; it is only assumptions. High targets have been fixed as far as the development If minorities is concerned. This has been done keeping in mind the elections. But, this Government is not in a position to fulfil those targets which have beed fixed judging from the past

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

experience. Last year also they have failed to achieve the targets set by the Government in the Budget. There is a ban in the treasury to pass cheques excepting pension and salary, no other cheques are paid. This ban is applicable even to Ashraya Scheme. The Deputy Commissioner of the Gulbarga District has released Rs. 5 lakhs for the purchase of land under the Ashraya Scheme. I have presented the cheque for Rs. 5 lakhs and got token for the same, the number being 163. For the last 12 days I could not encash the cheque. You can verify the fact. When I enquired with the Deputy Director of Treasuries at Gulbarga he said that he, should reeeive a telephone message from the Director of Treasuries from Bangalore and then only he would release the amount. But, till date, the amount is not released. This is the state of affairs as far as the finances of the State is concerned.

The H.K.D.B. works have to be taken up on priority basis. Rs. 3 crores worth works are pending and till date they have not released the money. It is the same case with regard to PWD also. Here, high targets have been fixed but they are not able to fulfill them. I would like to quote a few sentences from the Budget speech. On page 8, It is mentioned as follows ;

"Special action pian for poverty all eviation"

Here, I would like to read another sentence, on the same page.

" I intend to reduce the end price of rice and wheat to green card holders by Re. 1 and Re. 0.50 per kg. respectively w.e.f. 1-4-1994".

I have not understood the logic behind it. Where these green card holders live ? Do they exist in urban areas ? They live only in rural areas. Further it is stated.-

"This measure of providing relief to the green card holders, who form roughly 50% of the population of the State, will cost the Government Rs. 42.50 crores per annum".

How the 50% of the population of the State is benefitted by this measure ? I cannot understand the logic behind it. Green card holders liveonly in rural areas, and they do not live in urban areas. How can the Government discriminate between the urban poor and the rural poor ? Do you mean to say that only rural poor have voted to you ? Do you say that urban poor have not voted for you? I want a specific answer from the Hon'ble Chief Minister while he replies to the Debates on the Budget. Do you want to satisfy only the rural poor ? I cannot understand this logic. Is it the opinion of the Government that urban poor do not require any assistance or help on par with rural poor ? I demand that green cards should also be provided to urban poor who come under informal nationing

areas and also in cities like Bangalore, Mysore. Gulbarga etc. Sir, another point which I wanted to mention is that the people of the Urban area of Bangalore, it seems they are thinking that they are super-human beings. As per the Government Order, 13 litres of kerosene will be given per unit in Bangalore. Whereas, in Gulbarga, we are getting only 11 litres and in Shahabad they give only 10 litres. Why this discrimination should exist ? I have asked this question to the Deputy Commissioner also. They only say that the Govt. Order is there. Whether the Deputy Commissioners are purposely reducing this or whether there is a specific Order that Bangalore should be given 13 litres and Gulbarga and other parts in the State should be given 2-3 litres less ? Sir, this shows there is also discrimination being made between the Urban area people from Bangalore and that of the Hyderabad Karnataka area of Gulbarga and Shahabad. Sir, Irrigation is a very important subject. Here, on page 37, it is said that Irrigation holds the key to agriculture production and the general rural debevopment in the State, and Irrigation potential of approximately 31.53 lakh Hectares is expected to be created up to the end of March 1994 out of the total potential of 55 lakh Hectares. There is still a wide gap of about 20 Lakh Hectares Sir, in Upper Krishna Project, we all know that the water share which we have to utilise for Upper Krishna before 2000 AD, we should be in a position to utilise our share of the water before 2000 AD. It has been mentioned that a minimum of about Rs. 2600 and odd crores will have to be spent. Sir, how much has been allotted in this Budget to this Upper Krishna ? It has also been mentioned that there is a wide gap for the potentiality of the 20-22 lakh hectares which has been created and in this Budget only Rs. 346 Crores have been allotted.

ಉಪಾಧ್ಯಕ್ಷರು.—ಈಗ ಸದನದ ಕಲಾಪವನ್ನು ಮುಂದೂಡಿ ಮತ್ತೆ ಸದನವು ೩.೩೦ ಗಂಟೆಗೆ ಸೇರುತ್ತದೆ.

(The House reassembled at 3.40 p.m.)

(Mr. Deputy Speaker Sri Anjana Murthy was in the Chair)

SRI QUMARUL ISLAM.—Mr. Deputy Speaker, Sir, I was discussing about the Irrigation Department Irrigation, as we all know is very important but the allocation which was given for the Upper Krishna Project is only Rs. 346 crores whereas for the completion of this project it needs Rs. 3675 crores. Suppose if this is the rate of allocation to be given for the next five years, this irrigation project will never be completed and we will not be in a position to utilise our share of water before the 2000 AD. It has also been mentioned that irrigation helps in the development of the rural area and higher agricultural production but this Government has failed to give maximum concentration on the completion of the Upper Krishna Project in time. So, I demand in this House that a least

some more funds – maximum amount has to be allotted and a special subject is brought before this House to complete the Upper Krishna Project. This Upper Krishna Project has to be completed in time which is very much essential. Sir, we all know Chairperson of the Karnatak -Hyderabad Development Board has said here that the HKDB was given Rs. 65 crores during this year and in earlier years, it was given Rs. 50 crores or so, in 1990-91, it was given Rs. 40 crores for the Hyderabad Karnataka area – *ie.*, 4 districts which includes 33 constituencies of the Hyderabad Karnataka area. I think this is very very meagre amount. Sir, I don't know why this Government has not increased the amount, We need a minimum of Rs. 1200 crores to bring these districts *ie.*, Gulbarga, Bidar, Bellary and Raichur on par with other areas of old Mysore. This Rs. 1200 crores, in addition to the regular budget, should be provided to the Hyderabad-Karnataka area. Sir, during the last four years, only Rs. 40 crores was given every year.

SMT. DAMAYANTHI BOREGOWDA.—Do you mean to say Rs. 2 crores is not enough for one constitutency ?

SRI QUMARUL ISLAM.—Do you want us remain backward for another ten years ? Why this step-motherly attitude towards this area ? Do you mean to say that we have got to live in the same difficult situation ? Infact they are not able to release funds and let me know how much money has been released for various schemes for this area. They are not able to take up the works given by the MLAs.

SMT. DAMAYANTHI BOREGOWDA.—Our constitutencies are not getting funds like this. Atleast for 33 constituencies, you are getting Rs. 2 crores each.

SRI QUMARUL ISLAM.—We want our constituencies should come to the level of your constituencies That is what we are demanding Whatever you are giving is only to bring backward constituencies on far with forward constitutencies. What you are giving is not extra amount It is only to make up the injustice done during the last so maney years. we wanted justice should be given by giving this extra amount to Hyderabad Karnataka area so as to bring to these constituencies on par with other constitutencies. We also come up on par with State average in all subjects whether it is road, irrigation Etc.

ಶ್ರೀಮತಿ ಮೋಟಮ್ಮ.—ಶ್ರೀಮತಿ ದಮಯಂತಿಯವರು ಹೇಳಿದ್ದೇನೆಂದರೆ, ನಾವು ಬಯಲು ಸೀಮೆಯ ಶಾಸಕರಾಗಿದ್ದೇವೆ. ನಮಗೆ ಈರೀತಿಯ ಸ್ಪೆಷಲ್ ಗ್ರ್ಯಾಂಟ್ಸ್ ಒಂದು ಪೈಸೆಕೂಡ ಸಿಕ್ಕುತ್ತಿಲ್ಲ ಎಂದು ಆದರೆ ಮಲೆನಾಡು ಮತ್ತು ಹೈದರಾಬಾದ್ ಭಾಗದವರಿಗೆ ಇಷ್ಟೊಂದು ಸ್ಪೆಷಲ್ ಗ್ರ್ಯಾಂಟ್ಸ್ ಸಿಕ್ಕಿದರೂ ಅದು ಏನೇನೂ ಸಾಲದೆಂದು ಹೇಳುತ್ತಿದ್ದಾರಲ್ಲಾ ಎಂದು ಹೇಳುತ್ತಿದ್ದಾರೆ. ಹೈದರಾಬಾದ್ ಕರ್ನಾಟಕದ ಶಾಸಕರಿಗೆ ೪ ಜಿಲ್ಲೆಗಳು ಬರುತ್ತವೆ ಅಂದರೆ ೩೩ ತಾಲ್ಲೂಕುಗಳಿಗೆ ೬೫ ಕೋಟಿ ರೂ, ಕೊಟ್ಟರೂ ಅದು ಏನೇನೂ ಸಾಲುತ್ತಿಲ್ಲವೆಂದು ಹೇಳುತ್ತಿದ್ದಾರಲ್ಲಾ ಎಂದು ವ್ಯಥೆ ಪಡುತ್ತಿದ್ದಾರೆ.

SRI QUMARUL ISLAM.—Madam, again you have been confused. I am telling that your constituencies are forward constituency in all respect compared to our constituencies. Why our area has become backward ? you are aware that injustice had been done from so many years to our area This was realised by the Government in this House and that is why Malnad Area Development Board and Hydrabad Karnataka Area Development Boards have been formed. This special grant has to be sanctioned to see that this backwardness should go anc they should come on par with the State average, in order to bring these backward constituencies on par with the State average, money which was given ie., Rs. 65 corses which is not sufficient because it was calculated Rs. 1200 crores is needed for these thirty three taluks to come on par with you We are also representing the people, we are shouting, we are fighting for this area atleast in this House, The injustice has to go first and for that we are fighting. This amount which has been given ie. Rs. 65 crores is really insufficient. I want that in this budget, a provision of at least another Rs. 45 crores should be made in the public meeting, the MInisters and the Chief Ministers have assured the people of the Hyderbad-Karnataka area that this time sufficient money will be given. Last year. Rs. 65 crorses, was given and this year also it is Rs. 65 crores, and there is no addition. What we wanted is that a provision has to be made in this budget for another Rs. 45 crores for Hyderabad-Karnataka area.

'Now coming to the Urban Development; my constituency *ie*'. Gulbarga. has get acute drinking water problem from the last 20 years. Last year, the first phase of Bhima Scheme was completed: Still some work is pending. The laying of pipeline work was completed by spending about Rs 18 crores. Our Hon'ble Revenue Minister also knows that the First Phase of Bhima scheme was completed from his consituency ie. Jewargi where Krishna is flowing-Water has come to my constituency from there. but still barrage work has not yet been completed. The first phase is nearing completion from Gulbarga but we are not getting water. Gulbarga Constitutency consist of 4 lakh people hear again in Bhogsa, Bennithore there is no water, Even under Bhima scheme, the barrage work has to be comleted by March, In fact they have promised that it will be completed in that month but we are not able to get water due to non-completion of the scheme and the scarcity is going on. The second phase is announced when the first phase inaugural took place in the month of May last year, and the Hon'ble Chief Minister has announced that Rs. 21 crores for the change of the pipeline throughout the city of Gulbarga. The scheme of Rs. 21 crores is announced, From that day onwards, three times the Hon'ble Chief Minister has come to Gulbarga and

he has announced in the public meetings but not a single. paise has been provided in this budget Is it not hypocracy ? you have promised on the Floor of the House to give drinking water to hhe City not a signle paise has been provided in the budget, For Gulbarga it has been mentioned three schemes ie., Aland, Shorapur and another scheme. use if you are spending Rs. 21 crores ? Today the first phase of drinking water from Jewargi to filter bed and from filter bed it is not going to the people. The Hon'ble Minister is there in Gulbarga. There are extension areas and there are no pipelines. I will tell you some of the areas.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ ಅವರು ಹೇಳುತ್ತಿರುವುದನ್ನು ನಾನು ಕೂಡ ಕೇಳುತ್ತಿದ್ದೇನೆ. ಅವರಿಗೆ ಗುಲ್ಬರ್ಗಾದಲ್ಲಿ ಏನು ಪರಿಸ್ಥಿತಿ ಇದೆ ಎಂದು ಗೊತ್ತಿದೆ. ಭೀಮ ವಾಟರ್‌ಸಪ್ಲೈ ಸ್ಕೀಮ್‌ಗೆ ೧೯೮೨-೮೩ರಲ್ಲಿ ಒಂದು ವರ್ಷದಲ್ಲಿ ಕರ್ನಾಟಕ ಸರ್ಕಾರ ೨೨ ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದೆ. ಅಲ್ಲಿ ವಾಟರ್ ಸ್ಕೇರ್‌ಸಿಟಿ ಬಂದಾಗ ಮಾನ್ಯ ಜಾಫರ್ ಶರೀಫ್‌ರವರನ್ನು ನೆನಸಬೇಕಾಗುತ್ತದೆ. ೭೨ ಲಕ್ಷ ರೂಪಾಯಿಗಳ ವೆಚ್ಚದಮೇಲೆ ಅವರು ರಾಯಚೂರಿನಿಂದ ನೀರನ್ನು ಗುಲ್ಬರ್ಗಾಕ್ಕೆ ರೈಲು ಮೂಲಕ ಟ್ಯಾಂಕ್‌ರಗಳಿಂದ ಸರಬರಾಜು ಮಾಡಿಕೊಟ್ಟಿದ್ದಾರೆ. ಸ್ಕೇರ್‌ಸಿಟಿ ಬಂದಾಗಲೂ ಕೂಡ ಕೆಲವುಸಾರಿ ಕೇಂದ್ರಸರ್ಕಾರ ಕೂಡ ನೆರವಿಗೆ ಬಂದಿದೆ. ಈಗ ಅವರು ಹೇಳತಕ್ಕಂಥದ್ದು ಏನೆಂದರೆ, ಪೈಪ್‌ಲೈನ್ ಕೆಲಸ ಸ್ವಲ್ಪ ಮಾಡಬೇಕಾಗಿದೆ. ಅದಕ್ಕೆ ಬೇಕಾಗಿರುವ ಹಣವೆಂದರೆ ೨೨ ಕೋಟಿ ರೂಪಾಯಿಗಳು ಮಾನ್ಯ ಮುಖ್ಯಮಂತ್ರಿಗಳು ವಾಟರ್ ಸಪ್ಲೈ ಸ್ಕೀಮ್‌ನವರು ಬಂದಿದ್ದಾಗ ಈ ಬಗ್ಗೆ ಹೇಳಿದ್ದರು. ಆಗ ಅವರು ಇದಕ್ಕೂ ಕೂಡ ದುಡ್ಡು ಕೊಡುತ್ತೇವೆಂದು ಒಪ್ಪಿರುತ್ತಾರೆ. ಕಾರ್ಪೊರೇಷನ್‌ನಲ್ಲಿ ನಿರ್ಣಯ ಪಾಸ್ ಮಾಡಿಯಾಗಿದೆ. ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ಯಾವುದಾದರೂ ಸ್ಕೀಮ್‌ಗೆ ಸರ್ಕಾರ ಮನ್ನಣೆ ಕೊಡಬೇಕಾದರೆ ಈಗಿರತಕ್ಕಂಥ ಕಾರ್ಪೊರೇಷನ್‌ನವರು ಒಪ್ಪಬೇಕಾಗುತ್ತದೆ. ಅದರಂತೆ ಅವರೂ ಕೂಡ ನಿರ್ಣಯ ಪಾಸ್‌ಮಾಡಿ ಕಳುಹಿಸಿದ್ದಾರೆ, ನಾವು ಡಿಸಿಷನ್ ತೆಗೆದುಕೊಳ್ಳುತ್ತೇವೆ, ಅದಕ್ಕೆ ತಾವು ಏನು ವರಿ ಪಡಬೇಕಾಗಿಲ್ಲ.

SRI QUMARUL ISLAM.—I am happy I know that the Hon'ble Minister has taken lot of pain and I must be thankful to Sri C. K. Jaffar Shariff, the Hon'ble Minister for Railways for providing water temporarily for a period of one month, by railway bogies. All these are temporary arrangements but for making the scheme successful, the first phase should be completed. I must congratulate the Government for making a provision of Rs. 18 crores in the last three years and Rs. 21 crores for pipeline and all that. Still the second phase is yet to be completed, so, we cannot that say the scheme is completed, people are not getting water. Today thepw osition is again we have to spend some lakh for the scheme. Nothe Corporation is in the hands of Congresss party so also GDA. I must thank the Hon'ble Ministers Sri Dharm Singh and Sri Kharge for having called a meeting on the 16th. They have called the Chairman GDA, the Mayor of the Corporation Comms s ner and all the Secretaries. In this budget there should be a provi i n because of the funding pattern which has been fixed by the Board ... in this funding it is said 50% has to be borne by the Corporation 3.% by the GDA and 20% is to be given by the Government. The Corporation has agreed to pay 30%. Now I want the Government to pay 20% out of the funding pattern which

was agreed to atleast 5 crores or 2 crores or 3 crores would have been allotted and the second phase would have been started. The action plan has already been submitted by the Deputy Commissioner as well as Executive Engineer for the temporary arrangement by digging borewells and also for the purchase of pipelines and also for purchase of pumpsets so that where borewells can be dug it should be taken by up spreading pipeline to all those areas. Therefore provision should be made for Rs. one crore or Rs. 2 crore under, the scheme. This is my request. Till second phase is completed, the water problem will continue and I wanted that this water problem has to be solved and priority has to be given and in this budget some provision has to be made. I want that some money has to be given for those areas where they are not getting water.

Sir, the third problem is about PWD roads. Sir, I am coming from a constituency where only one road belongs to PWD and that road commences from Station, Itgoes to Hyderabad. It is the only road which belongs to PWD. Here, a provision has been made and the amount ear marked is Rs. 20 lakhs for each constituency. But. where I have to spend this money ? It should be spent only on one road. I have already given certain roads which are coming under the Corporation limits. I know that the Corporation is not in a position to spend Rs. 30-40 lakhs per year, all on roads of the City of Gulbarga. I have given atleast 12 roads which are more important roads and the same should be taken over by the PWD. These roads are to be taken up with the PWD funds.

In this Budget, reconstruction and improvement of 2 roads have been taken up. They are, Bangalore-Honnavar and Bangalore Mysore. These are 2 state highways. I want to know why Hiriyur and Bidar highway has not been taken up in this Budget. This is a very important road and by improving this road, you could have Improved the Hyderabad-Karnataka area to a great extent. This road covers 5 districts.

MR. DEPUTY SPEAKER.—Bangalore-Honnavar road is not a State High way. it is a national highway.

SRI QUMARUL ISLAM.—Sir, they are spending for its improvement from out of State funds. I stress upon the Government to take up Hiriyur-Bidar road for improvement since it is a very important road and this will touch national Highway No. 9 and 4. still appropriation Bill has not been passed and as such I request the Government if possible to bring an amendment and include this road in the Budget. I am still surprised as to why this has not caught the eye of the Hon'ble Minister of Revenue who is coming from Gulbarga District. I am astonished why the Hon'ble Revenue Minister has failed to prevail upon the Chief Minister to include

this road in the Budget. I still request him to use his good offices with the Hon'ble Chief Minister and to see that Hiriyur-Bidar Road is included,

Now, I will come to the problems confronting minorities in the State. For the first time I have seen this type of Budget. This Budget is full of assurances. I would like to quote a few sentences from Page 14 :—

> "The Government will provide a budgetary support of Rs. 10 crores in 1994-1995 as compared to Rs. 2.5 crores in 1993-1994 to the Karnataka Minorities Development corporation. The total outlay of the Corporation inclusive of resources mobilised from Banks will be Rs. 26 crores in 1994-95 as compared to Rs. 10 crores in 1993-1994."

Now the money is there in the bank and the Government depending upon the money available in the Bank assuring the minorities stating that a budgetary provision has been made to the extent of Rs. 10 crores. Sir, I want that the Government should have provided Rs. 10 crores in the Budget. The Government is only giving assurances because this is an election year and we are expecting the elections even in the month of May this year, When such assurances are given and when no Budget Provision is made. how can we convince the people. Sometime back an economic survey was conducted by spending about Rs. 30-40 lakhs. This is about minorities and their economic conditions. The report has been there. Still it is not completed, I want to know to what extent it has been completed. I feel it is not a complete survey. As for as minorities are concerned, this Budget is only full of assurances.

I have got a book here. In this book they have mentioned about the achievements made during the year 1993. Here, they have mentioned lot of schemes for minorities. What are those schemes? The schemes are relating to Housing, Borewell, lift irrigation, training ccme production centre Etc,, But Sir, as per my knowledge not a single scheme has been taken up in the Budget for the year 1993-1994, It is there only on paper. If my statement is not correct, i will resign from my membership. I will stick on to my statement, If you show even a single beneficiary from the minority community, I will tender resignation to my membership. They have not given any benefit to minorities and how can they say that they have achieved all these things? I feel this Budget is a continuation of the previous Budget as far as certain schemes are concerned. Not a single paise has been provided in this Budget for those schemes. I want to know for how many years the

minorities will be fooled by the Government? For how many years we have to depend upon the assurances of the Government? The Government should be sincere and the Government should come out without any doubt and it should be in black and white. Everything should be available in the Budget. But, in this Budget there are only assurances. Everything is in paper. If I am wrong I will resign. For all my querries I Want a catetorical reply from the Government in this House. I request the Government that whatever they have committed in this Budget they should implement it. It should not remain as an assurance on paper. We are thankful that atleast they have given certain proposals for minorities. We are thankful that atleast they have made up their mind for the upliftment of minorities in all respects. Our worry is it is not being implemented. That is why we are angry. We are happy that you have brought out certain proposals. compared to other states, the proposals are beautiful in our State. But, in reality, when we think that if

4-10 p. m.

these things are not implemented, by your Executives, by your Officers, what acion you have taken against them? Have you suspended anyone because of the reason that the proposals of the Minorities have not been implemented? That has not been done. If the Officers who have not implemented these schemes properly, are suspended and if they have taught a lesson, then your Government will get a good name. we will appreciate if the Hon'ble Minister, or this Government under the present Chief minister, implement whatever they have promised. Sir, the Prime Minister's Rojgar Yojana is there. It is a very good Yojana. One should appreciate it, because it is a Yojana which was there for the Urban people and now it has been extended to the Rural people for the first time in Gulbarga, District, 41 beneficiaries have already been declared by the Committee which has been formed. But, Sir, not a single Factory or the Unit will come up successfully. Who will be responsible for making this unit to die before they take its birth? The scheme of Prime Minister's Rojgar Yojana is for Rs. I lakh and it has been clearly stated that there is no need of the Surety. But in Gulbarga, all these 41 beneficiaries have formed a Union now. Not even one beneficiary has got the benefit. Everybody has produced a Project Report from Rs. 90,000/- to Rs. 1 lakh. But the Managers at the Bank, they say it has got 17% subsidy also. They say you have to bring the Surety. Sir, under the rule, we need not. They say we want Surety. They say, for this Scheme of Rs. 90,000/-, we can give only Rs. 25,000/- or, we can give Rs. 50,000/- Now these beneficiaries who are selected after spending lot of money, they say OK Sir, you give us. Sir, I have told that in the Gulbarga District that for all these beneficiaries of the Prime Minister's

Rojgar Yojana the proposals for Rs. 90·000/-, Rs. 95,000/- and Rs, 1 lakh and have been reduced by the bankers on their own. They have given us Rs. 40000/-,- Rs. 50000/- So, if the unit becomes sick we are not responsible. It is the bankers who are responsible. This report should go to the Government and the Prime Minister. I want to know in this House from the Hon'ble Minister for Small Scale Industries whether he will be kind enough to come to Gulbarga and go to other Districts and meet all the beneficiaries who have been declared as beneficiaries under the Prime Minister's Rojgar Yojana and get the report whether they have got the money as per the Project Report submitted by them or has been reduced just by the Bankers ? I, being an Engineer, I know for any project which has to be successfully completed, whatever money that is needed it has to be spent. It is not a Kirana Dukhan, to take financial assistance less than what is actually required. ಇಲ್ಲ. ಇಷ್ಟು, ೫೦ ಸಾವಿರ ತೆಗೆದುಕೋ ಎಂದು ಹೇಳುವುದು It is not like that.

ಉಪಾಧ್ಯಕ್ಷರು.—ನೀವು ಕನ್ನಡದಲ್ಲಿ ಚೆನ್ನಾಗಿ ಮಾತನಾಡುತ್ತೀರಿ, ನೀವು ಕನ್ನಡದಲ್ಲಿಯೇ ಮಾತನಾಡಿ.

ಶ್ರೀ ಕಮರುಲ್ ಇಸ್ಲಾಂ.—ಮಾನ್ಯ ಉಪಾಧ್ಯಕ್ಷರೇ ನನಗೆ ಕನ್ನಡದಲ್ಲಿ ಮಾತನಾಡಲಿಕ್ಕೆ ಬರುತ್ತದೆ. ತಾವು ನನ್ನ ಜೊತೆಯಲ್ಲಿ ಕನ್ನಡದಲ್ಲಿ ಮಾತನಾಡಿ, ನಾನು ನಿಮ್ಮ ಜೊತೆಯಲ್ಲಿ ಕನ್ನಡದಲ್ಲಿ ಮಾತನಾಡುತ್ತೇನೆ. ಆದರೆ ಭಾಷಣ ಮಾಡಲಿಕ್ಕೆ ಬಹಳ ಕಷ್ಟ. ಸ್ವಲ್ಪ ಪ್ರಾಕ್ಟೀಸ್‌ಬೇಕು. In the next Budget Session, if I am elected ನಾನು ಕನ್ನಡದಲ್ಲಿ ಮಾತನಾಡುತ್ತೇನೆ. I am congratulated by my brother. I am also Kannadiga. I have taken birth here. I wanted, to speak in Kannada. But it will take sometime. Sir, I don't want to take much time of the House. I have brought to your kind notice certain real facts regarding minorities, injustices done to the minorities. Sir, another thing about the Minorities. A Directorate for Urdu and Minorities has been formed in the year 1987. what is the use of such a Directorate ? what is the use of Minorities and other languages Directorate ? The Director has no administiative power, no financial power and no disciplinary power. Then. what is the duty of the Director and the officials there ? Their duty is only to go and inspect the Schools and if any letter comes, to send it to CPI or if any letter comes from the Government and the CPI to send it to the JDPI and the DDPI. This is the work they have been doing. Sir, is it not a political gimmick ? Plese tell me If you are really sincere, when there is a Urdu and other linguistic minority Directorate it should get the administrative power, and it should get the financial Power Sir, you know how many Schools are there ? Sir. there are more then 6000 Urdu Primary and Higher Primary School, and there are 22000 Teachers. For these Teachers and the Schools, there are only two Offlicers who know Urdu. This is the fact. we do make speeches

and we get a beautiful coverage in the news papers. You take the vote of our Community. But, do something good and then take the vote. Don't try to fool the community by giving false promises for any further. This has been discussed with the Hon'ble Chief Minister. He has also assured for all Minority MLAs when we met in the house of our Hon'ble Member Sri Sadath Ali Khan, that some administrative power, some financial power will be given to the Urdu and Minority Languages Directorate. Not an extra single rupee has been provided for this. one more point I want to mention. It is regarding WAKF. About Rs. 2 Crores have been given. But, it is a fact that the Hon'ble Chief Minister has promised openly and it has appeared in the Press also that a minimum of Rs:3·55 Crores will be given. He has said Rs. 1 Crore will be provided in many places specifically for Idgal and grave yards and another Rs. 1·55 Crores towards other WAKF institutions the salary of the employees of the WAKF Board itself comes to Rs- I Crore three lakhs. so, they reqhire Rs.3·55 Crores. is But here in the Budget, only Rs·2 Crores is provided as far as WAKF is concerned. we have got the Haj Committee Sir, K hadimul Hujjatheyhave they to go to do some service to the Haji. Here, Kha dimul Hujjs has been nominated by the Hon'ble Minister. with his own choice- These people are being nominnated by the WAKF Minister sinea so many years. Now for the first time the Association of Khadimul Hujja has written to the Central Government that the Minister is having his ownchoice and they are not fulfilling the conditions. That's why there should be a Sub Committee which should select the name and we must call for the Khadimul Hujja who can fulfil the conditions. That tradition should be stopped. The money which is being spent on the Khadimul Hujjas is not Government's money. It is the money collected from each Haji, a share will be given by each Haji and that money is collectep and that is being spent on the Khadimul Hujjas. Because the Haji's money is there, they are not getting any services. They must know Arabic, they must have completed. Haji once and then only it has to be done. This procedure has to be stopped from next time by the WAKF Minister. Sir, anoth r thing is, in my constituency this Ashraya scheme is going very well. I have taken up one land of 2 acres i hich 800 sites were formed and abou 600 houses have ne up. ut of that, 200 houses from the House-ing Board and 400 from the Corporation. Another 200 houses, we will be completing within six months. To take up the work money is required and money has already been given by the Deputy Commissioner but that has not been released. So, I want an assurance from the Hon'ble Minister in this regard because 200 houses we have to take up under the Ashraya scheme. We are pur-chasing the land and we will definitely complete another 500 houses. Atleast that public programme is very successful in my constitu-

ency and I must be thankful to the Government for this. I request that the money is released in time as this is really a very good scheme for the poorer people to give them the shelter. With these words, I thank the Chair for giving me sufficient time to express my views. With these words, I conclude my speech. Thank you Sir.

† ಶ್ರೀ ಕೆ. ಕುಶಾಲ (ಸುಳ್ಯ). — ಸನ್ಮಾನ್ಯ ಅಧ್ಯಕ್ಷರೇ, ೧೯೯೪-೯೫ನೇ ಸಾಲಿನ ಆಯವ್ಯಯವನ್ನು ಮಾನ್ಯ ಮುಖ್ಯಮಂತ್ರಿಗಳು ಏನು ಮಂಡಿಸಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತಾ ಕೆಲವು ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಮುಖ್ಯವಾಗಿ ಸರ್ಕಾರ ಹಮ್ಮಿಕೊಂಡಿರುವಂಥ ಭಾಗ್ಯಜ್ಯೋತಿ ಯೋಜನೆಯನ್ನು ಮುಂದುವರೆಸಿರುವುದು ಸಂತೋಷದ ವಿಷಯ. ಆದರೆ ಇಲಾಖೆಯ ಕಾನೂನಿನಂತೆ, ಈ ಭಾಗ್ಯಜ್ಯೋತಿಯನ್ನು ಅಳವಡಿಸುವಾಗ ಕೇವಲ ನೂರು ಅಡಿ ದೂರಕ್ಕೆ ಮಾತ್ರ ಇದನ್ನು ಅಳವಡಿಸುವಂಥ ಕಾರ್ಯಕ್ರಮ ಇರುವುದರಿಂದ, ಪ್ರತ್ಯೇಕ ಕಂಬಗಳನ್ನು ಹಾಕುವಂಥ ವ್ಯವಸ್ಥೆ ಆಗದೇ ಇದ್ದರೆ ಬಹುಶಃ ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವುದಕ್ಕೆ ಅಥವಾ ಬಡವರಿಗೆ ಸಂಪೂರ್ಣವಾಗಿ ಇದರ ಪ್ರಯೋಜನ ಸಿಗುವುದಕ್ಕೆ ಕಷ್ಟ ಇದೆ. ಆದ್ದರಿಂದ ಈ ಕಾರ್ಯಕ್ರಮದ ಜೊತೆಯಲ್ಲಿ ಬಡಜನರ ಒಂದು ಅನುಕೂಲಕ್ಕಾಗಿ ಹೆಚ್ಚಿನ ವಿದ್ಯುತ್ ಕಂಬಗಳನ್ನು ಪೂರೈಸಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಹಮ್ಮಿಕೊಳ್ಳುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಯಲ್ಲಿ ಹಸಿರು ಕಾರ್ಡು ಹೊಂದಿರುವಂಥ ಜನರಿಗೆ ಅಕ್ಕಿಗೆ ಕಿಲೋಗೆ ಒಂದು ರೂಪಾಯಿ ಕಡಿಮೆ ಮಾಡಿದ್ದು ಮತ್ತು ಗೋದಿ ಕಿಲೋಗೆ ೫೦ ಪೈಸೆ ಕಡಿಮೆ ಮಾಡಿದ್ದು ಸಂತೋಷದ ಸಂಗತಿ. ಆದರೆ ಎಲ್ಲಾ ಬಗೆಯ ಕಾರ್ಡುಗಳನ್ನು ಹೊಂದಿದಂಥ ಬಡಜನರಿಗೆ ಇದರ ಸವಲತ್ತು ಸಿಗುವ ಹಾಗೆ ಮಾಡಬೇಕು. ಕೇಸರಿ ಕಾರ್ಡಿಗೂ ಈ ಸವಲತ್ತು ಸಿಗುವಂಥ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರ ಜೊತೆಯಲ್ಲಿ ಆಶ್ರಯ, ಆರಾಧನಾ, ನೆರಳುಭಾಗ್ಯ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಬಡಜನರಿಗೆ ಸಂತೋಷವನ್ನು ಉಂಟು ಮಾಡುವಂಥ ಮತ್ತು ಬಡಜನರಿಗೆ ಹೆಚ್ಚಿನ ರೀತಿಯ ಪ್ರಯೋಜನ ತರುವಂಥ ಕೆಲಸ ಆಗಿದೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಉಚಿತ ಉಡುಪುಗಳನ್ನು ಕೊಡುವ ಕಾರ್ಯಕ್ರಮ ಏನಿದೆ, ಬಹುಶಃ ಇದರಿಂದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಮತ್ತು ಜನರಿಗೂ ಒಂದು ಬೇಸರವನ್ನು ತರತಕ್ಕಂಥ ವ್ಯವಸ್ಥೆಯಾಗಿದೆ. ಇದನ್ನು ಸ್ವಲ್ಪ ಬದಲಾವಣೆ ಮಾಡಿದರೆ ಈ ಕಾರ್ಯಕ್ರಮದಿಂದ ಹೆಚ್ಚಿನ ಪ್ರಯೋಜನ ಆಗುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ, ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಕೊಡುವಂಥ ಬಟ್ಟೆಯನ್ನು ಇತರ ಯಾವುದೇ ಮಹಿಳಾ ಸಮಾಜ ಅಥವಾ ಇನ್ನಿತರ ಸಂಘ ಸಂಸ್ಥೆಗಳಿಂದ ಒದಗಿಸಿಕೊಡುವಂಥ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆ. ಆದರೆ ಬಟ್ಟೆ ಕೊಡುವುದಕ್ಕೆ ಮೊದಲೇ ಅದರ ಬಣ್ಣ ಬದಲಾಗಿ ಹೋಗಿರುವುದನ್ನು ನಾವು ಕಾಣುತ್ತಾ ಇದ್ದೇವೆ. ಮತ್ತು ಅ ಬಟ್ಟೆ ಒಳ್ಳೆಯ ದರ್ಜೆಯ ಬಟ್ಟೆ ಕೂಡ ಅಲ್ಲ, ಬಟ್ಟೆಗಿಂತ ಹೊಲಿಗೆ ದರ ಜಾಸ್ತಿಯಾಗಿದೆ. ಹಾಗೆ ಹೊಲಿದು ಕೊಟ್ಟಿರುವ ಬಟ್ಟೆ ಆ ಒಂದು ಮಗುವಿಗೆ ನಿಜವಾಗಿಯೂ ಆ ಉಡುಪನ್ನು ಹಾಕಲಿಕ್ಕೆ ಅಸಾಧ್ಯವಾದಂತಹ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಮುಖ್ಯವಾಗಿ ಈ ಒಂದು ಸಿದ್ಧ ಉಡುಪುಗಳನ್ನು ಕೊಡುವಂತಹ ಕಾರ್ಯಕ್ರಮದಲ್ಲಿ ಬದಲಾವಣೆಯನ್ನು ಮಾಡಿ ಹೊಲಿದ ಬಟ್ಟೆಯನ್ನು ಕೊಡುವುದರ ಬದಲು ಆ ಒಂದು ಮಗುವಿಗೆ ಬೇಕಾಗುವಷ್ಟು ಬಟ್ಟೆಯನ್ನು ಕೊಟ್ಟಲ್ಲಿ ಈ ಒಂದು ಕಾರ್ಯಕ್ರಮ ಇನ್ನಷ್ಟು ಯಶಸ್ವಿಯಾಗಲಿಕ್ಕೆ ಸಾಧ್ಯತೆ ಇದೆ. ಅದೇ ರೀತಿಯಲ್ಲಿ ಕ್ಷೀರ ಯೋಜನೆ ಕಾರ್ಯಕ್ರಮದ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಕೂಡ ಉಲ್ಲೇಖಿಸಿದ್ದಾರೆ. ಈ ಒಂದು ಕ್ಷೀರ ಯೋಜನೆ ಕಾರ್ಯಕ್ರಮ ಕೇವಲ ಒಂದನೇ ತರಗತಿಯ ಮಕ್ಕಳಿಗೆ ಕೊಡುವಂತಹ ಕಾರ್ಯಕ್ರಮ ಏನಿದೆ, ಇದರಿಂದ ಎರಡನೆಯ ತರಗತಿಯ ಮಕ್ಕಳಲ್ಲಿ ಬಹುಶಃ ಒಂದು ರೀತಿಯ ವ್ಯತ್ಯಾಸವನ್ನು ಕಾಣಲಿಕ್ಕೆ ಸಾಧ್ಯ ಇದೆ. ಉನ್ನತ ತರಗತಿಯ ವಿದ್ಯಾರ್ಥಿಗಳಿಗೂ ಹಾಲನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಸಂಪೂರ್ಣವಾಗಿ ಒಂದರಿಂದ ಏಳನೇ ತರಗತಿಯಲ್ಲಿರುವಂತಹ ಎಲ್ಲಾ ಮಕ್ಕಳಿಗೂ ಕೂಡ ಹಾಲನ್ನು ಕೊಡುವಂತಹ ಕಾರ್ಯಕ್ರಮವನ್ನು ಹಾಕಿದರೆ ಹೆಚ್ಚು ಪ್ರಯೋಜನಕಾರಿಯಾಗುವುದಕ್ಕೆ ಸಾಧ್ಯ ಇದೆ. ಅದೇ ರೀತಿಯಲ್ಲಿ ಅಕ್ಷಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಹಾಜರಾತಿ ಸಂಖ್ಯೆಗೆ ಅನುಗುಣವಾಗಿ ಹಾಜರಿಗೆ ಒಂದು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರೂಪಾಯಿ ದಿನಕ್ಕೆ ಕೊಡುವಂತಹ ಒಂದು ಕಾರ್ಯಕ್ರಮ ಇತ್ತು. ಬಹುಶಃ ಇದೆಲ್ಲವನ್ನು ಸೇರಿಸಿ ಆ ಮಗುವಿಗೆ ಆ ಒಂದು ರೂಪಾಯಿಗೆ ಬದಲಿಗೆ ಹೆಚ್ಚಿನ ಹಣವನ್ನು ಕೊಟ್ಟಾದರೂ ಈ ಕಾರ್ಯಕ್ರಮವನ್ನು ಮುಂದುವರೆಸಿದರೆ ಇನ್ನಷ್ಟು ಪ್ರಯೋಜನವಾಗಲಿಕ್ಕೆ ಸಾಧ್ಯ ಇದೆ. ಈ ಕಾರ್ಯಕ್ರಮವನ್ನು ಮುಂದುವರೆಸುವುದರ ಜೊತೆಗೆ ಕೆಲವು ಆಗಿರುವಂತಹ ತೊಂದರೆಗಳನ್ನು ಸರಿಪಡಿಸಿಕೊಂಡು ಮುಂದೆ ಹೋಗಬೇಕು ಎನ್ನುವಂತಹ ಮಾತನ್ನು ಹೇಳುತ್ತೇನೆ. ಇವತ್ತು ಸಹಕಾರಿ ಸಂಘಗಳ ಬಗ್ಗೆ ಹೇಳುವುದಾದರೆ ಹಸಿರು ಕಾರ್ಡ್‌ದಾರರಿಗೆ ಮಾತ್ರ ಅಕ್ಕಿಗೆ ಒಂದು ರೂಪಾಯಿ ದರ ಕಡಿಮೆ ಮಾಡಿ ಮತ್ತು ಕೆ.ಜಿ.ಗೆ ೫೦ ಪೈಸೆ ಕಡಿಮೆ ದರದಲ್ಲಿ ಗೋಧಿಯನ್ನು ಕೊಡುವುದರ ಜೊತೆಗೆ ಉಳಿದ ಎಲ್ಲಾ ಕೇಸರಿ ಕಾರ್ಡ್‌ದಾರರಿಗೂ ಕೂಡ ಕೊಡುವಂತಹ ವ್ಯವಸ್ಥೆ ಆಗಬೇಕು. ಇವತ್ತು ಸಹಕಾರಿ ಸಂಘದಲ್ಲಿ ಬಡ್ಡಿ ಸುಸ್ತಿ ಬಡ್ಡಿ ಮನ್ನಾ ಕಾರ್ಯಕ್ರಮದಂತೆ ಹೆಚ್ಚಿನ ಬಡ್ಡಿ ದರದ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿ ಕೊಡುವಂತಹ ಒಂದು ಕಾರ್ಯಕ್ರಮದಲ್ಲಿ ಬಹುಶಃ ಈ ಹಿಂದೆ ಕೂಡ ಸರ್ಕಾರ ಈ ಸಹಕಾರಿ ಸಂಘದಿಂದ ಸಾಲ ಪಡೆದಂತಹ ಪ್ರತಿ ಫಲಾನುಭವಿಗಳಿಗೂ ಕೂಡ ಎಲ್ಲಾ ಸಾಲದ ಬಡ್ಡಿಯನ್ನು ಮಾಫಿ ಮಾಡಿದ್ದನ್ನು ನಾವು ಕಾಣುತ್ತಿದ್ದೇವೆ. ಇವತ್ತು ಖಂಡಿತವಾಗಿ ಸಹಕಾರಿ ಸಂಘದಲ್ಲಿ ಸಾಲ ಪಡೆದಂತಹ ಎಲ್ಲಾ ರೈತ ಫಲಾನುಭವಿಗಳು ತುಂಬಾ ಕಷ್ಟದಲ್ಲಿರುವುದನ್ನು ನಾವು ಕಾಣುವಂತಹ ಈ ಸಂದರ್ಭದಲ್ಲಿ ಸಂಪೂರ್ಣವಾಗಿ ಸಾಲದ ಬಡ್ಡಿ ಮನ್ನಾ ಮಾಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡು ರೈತರಿಗೆ ಹೆಚ್ಚಿನ ಒಂದು ಪ್ರಯೋಜನ ಕಲ್ಪಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಅದೇ ರೀತಿಯಲ್ಲಿ ಇವತ್ತು ಲೋಕೋಪಯೋಗಿ ಇಲಾಖೆ ಬಹುಶಃ ನಮ್ಮ ಸರ್ಕಾರ ಬಂದ ನಂತರ ಅದರಲ್ಲೂ ಕೂಡ ಹೆಚ್ಚಿನ ರೀತಿಯಿಂದ ನಮ್ಮ ಒಂದು ಮಲೆನಾಡು ಪ್ರದೇಶಕ್ಕೆ ಇವತ್ತು ಗಡಿ ಅಭಿವೃದ್ಧಿ ಯೋಜನೆ ಕಾರ್ಯಕ್ರಮ ಮತ್ತು ಮಲೆನಾಡು ಅಭಿವೃದ್ಧಿ ಯೋಜನೆಯ ಕಾರ್ಯಕ್ರಮ ಬಂದ ನಂತರ ಆ ಕ್ಷೇತ್ರದ ಆ ಭಾಗದ ಜನರಿಗೆ ಹೆಚ್ಚಿನ ಪ್ರಗತಿಯ ಕೆಲಸವನ್ನು ಒದಗಿಸಲಿಕ್ಕೆ ನಮಗೆ ಸಾಧ್ಯವಾಗಿದೆ. ಆದರೂ ಕೂಡ ಆ ಇಲಾಖೆಯಲ್ಲಿ ಹಲವಾರು ತೊಂದರೆಗಳು ಅಥವಾ ಕೆಲವು ತಪ್ಪು ಬದಲಾವಣೆಗಳಿಂದಾಗಿ ಹೆಚ್ಚಿನ ಒಂದು ತೊಂದರೆಯನ್ನು ನಾವು ಇವತ್ತು ಕಾಣುತ್ತಿದ್ದೇವೆ. ಈಗಾಗಲೇ ಮಲೆನಾಡು ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳನ್ನು ಅಲ್ಲಿ ಕೈಗೊಂಡಾಗ ಮೂರನೇ ಹಂತದ ಯೋಜನೆಗಳು ಸಿದ್ಧವಾಗಿ ಸುಮಾರು ಒಂದು ಕ್ಷೇತ್ರಕ್ಕೆ ಒಂದು ಕೋಟಿ ಇಪ್ಪತ್ತು ಲಕ್ಷದ ಕಾಮಗಾರಿಗಳಿಗಾಗಿ ಹಣವನ್ನು ಕೊಡುವಂತಹ ಕಾರ್ಯಕ್ರಮ ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ಇವತ್ತು ನಡೆದಿದೆ. ಆದರೂ ಕೂಡ ಮಲೆನಾಡು ಅಭಿವೃದ್ಧಿ ಪ್ರದೇಶದಲ್ಲಿರತಕ್ಕಂಥ ನನ್ನ ಕ್ಷೇತ್ರವನ್ನು ತೆಗೆದುಕೊಂಡರೆ ಇವತ್ತು ಅಲ್ಲಿ ಬರುವಂತಹ ರಸ್ತೆ ಅಥವಾ ಸೇತುವೆಗಳಿಗೆ ತಲಾ ೫೦ ಲಕ್ಷದ ಕಾಮಗಾರಿ ಆಗುವಂತಹ ಸಂದರ್ಭದಲ್ಲಿ ಇವತ್ತು ಆ ಕಾಮಗಾರಿಗಳಿಗೆ ಹಣವನ್ನು ಒಮ್ಮೆಲೇ ಒದಗಿಸಿಕೊಳ್ಳುವುದಕ್ಕೆ ಕಷ್ಟವಾಗಿದೆ. ಅದರ ಜೊತೆಗೆ ಟೆಂಡರ್ ಹಾಕಬೇಕು ಎನ್ನುವಂತಹ ಒಂದು ಉದ್ದೇಶವನ್ನು ಸರ್ಕಾರ ಕಡ್ಡಾಯವಾಗಿ ತೆಗೆದುಕೊಂಡಿದ್ದರಿಂದ ಆ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ಗುತ್ತಿಗೆದಾರರು ಬಾರದೇ ಇರುವುದನ್ನು ನಾವು ಇವತ್ತು ಕಾಣುತ್ತಿದ್ದೇವೆ. ಇವತ್ತು ಬಹಳ ಮುಖ್ಯವಾಗಿ ಆ ಕೆಲಸಗಳು ಪ್ರಾರಂಭವಾಗುವುದರಲ್ಲಿ ನನ್ನ ಕ್ಷೇತ್ರದಲ್ಲಂತೂ ಬಹಳ ವಿಳಂಬವಾಗಿವೆ. ನಾವು ಇವತ್ತು ಎರಡು ಲಕ್ಷದ ಒಳಗಿನ ಕಾಮಗಾರಿಗಳನ್ನು ತೆಗೆದುಕೊಂಡರೆ ಅದು ಕಾರ್ಯಕಾರಿ ಅಭಿಯಂತರ ಮಟ್ಟದಲ್ಲಿ ಆ ಯೋಜನೆಯ ಅಂದಾಜು ಪಟ್ಟಿ ಮಂಜೂರಾಗಿ ಅಲ್ಲಿ ಕಾಮಗಾರಿ ಕೆಲಸ ಆಗುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಎರಡು ಲಕ್ಷಕ್ಕಿಂತ ಮೇಲ್ಪಟ್ಟಂತಹ ಕಾಮಗಾರಿಯನ್ನು ಇವತ್ತು ಗುತ್ತಿಗೆ ಕಾಮಗಾರಿಯಲ್ಲಿ ಮಾಡುವಾಗ ಬಹುಶಃ ಈಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾವು ತೆಗೆದುಕೊಂಡರೆ ನನ್ನ ಸುಳ್ಯ ತಾಲ್ಲೂಕಿನಲ್ಲಿ ಒಟ್ಟು ೭–೮ ಸೇತುವೆಗಳಿಗೆ ಸುಮಾರು ೧೦ ಲಕ್ಷಕ್ಕಿಂತ ಮೇಲ್ಪಟ್ಟಂತಹ ಕಾಮಗಾರಿಯಾದುದರಿಂದ ಇವತ್ತು ಗುತ್ತಿಗೆದಾರರು ಬಾರದೇ ಆ ಕಾಮಗಾರಿ ಪ್ರಾರಂಭವಾಗದೇ ಇರುವುದನ್ನು ನಾವು ಕಾಣುತ್ತಿದ್ದೇವೆ. ಒಂದು ವೇಳೆ ಗುತ್ತಿಗೆದಾರರು ಬಾರದೇ ಇದ್ದಲ್ಲಿ ಇಲಾಖೆ ಮುಖಾಂತರ ಮಾಡಿಸುವಂತಹ ವ್ಯವಸ್ಥೆಯನ್ನಾದರೂ ಮಾಡಲು ಒಂದು ಕಾನೂನು ಮಾಡಬೇಕು ಎಂಬ ವಿಷಯವನ್ನು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಇವತ್ತು ಗಡಿ ಅಭಿವೃದ್ಧಿ ಯೋಜನೆಯ ಕಾಮಗಾರಿಗಳಿಗೂ ಕೂಡ ಕಳೆದ ವರ್ಷ ಹಣ ಬಿಡುಗಡೆಯಾಗಿಲ್ಲ. ಈ ಒಂದು ಗಡಿ ಅಭಿವೃದ್ಧಿ ಕಾಮಗಾರಿಗಳಿಗೂ ಕೂಡ ಟೆಂಡರ್ ಕರೆಯಲೇಬೇಕು. ಈ ಬಗ್ಗೆ ಕೆಲವು ವಿನಾಯಿತಿಗಳನ್ನು ಮಾಡಬೇಕೆಂಬ ಒತ್ತಡ ಇದೆ. ಇದರ ಬದಲಾವಣೆಯನ್ನು ಮಾಡಬೇಕು

ಎಂದು ಕೇಳಿಕೊಳ್ಳುತ್ತೇನೆ. ಇವತ್ತು ಸಮಾಜ ಕಲ್ಯಾಣ ಇಲಾಖೆ ಬಗ್ಗೆ, ಮಾನ್ಯ ಕಾಗೋಡು ತಿಮ್ಮಪ್ಪ ನವರು ಭಾಷಣ ಮಾಡುತ್ತಾ ಹೇಳಿದರು, ಸಮಾಜ ಕಲ್ಯಾಣ ಇಲಾಖೆಯ ಹಣವನ್ನು ನಾವು ಕ್ರೋಢೀಕರಿಸಿ ಹೆಚ್ಚಿನ ದೊಡ್ಡ ಮೊತ್ತದ ಹಣವನ್ನು ಒದಗಿಸಿ ಕಾಮಗಾರಿಗಳನ್ನು ಪ್ರಾರಂಭ ಮಾಡುತ್ತೇವೆ ಅಥವಾ ಇದರಿಂದ ಹೆಚ್ಚಿನ ಅಭಿವೃದ್ಧಿಯನ್ನು ಮಾಡಲಿಕ್ಕೆ ಸಹಕಾರಿಯಾಗುತ್ತದೆಂದು ಹೇಳುವಂತಹ ವಿಷಯವನ್ನು ಈ ಒಂದು ಆಯವ್ಯಯದಲ್ಲಿ ಹೇಳಿರುವುದು ನಿಜವಾಗಿಯೂ ಸ್ವಾಗತಾರ್ಹ ಆದರೆ ಬಹುಶಃ ೧೯೭೭ನೇ ಇಸವಿಯಿಂದ ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗೆ ಹಣ ಖರ್ಚಾಗದೇ ಇರುವುದನ್ನು ನಾವು ಕಾಣುತ್ತಿದ್ದೇವೆ. ೧೯೭೭ನೇ ಇಸವಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಇವತ್ತು ಹರಿಜನ ಮತ್ತು ಗಿರಿಜನ ಹಾಸ್ಟಲ್‌ಗಳಿಗೆ ಏನು ಸಿಬ್ಬಂದಿಗಳನ್ನು ನೇಮಕ ಮಾಡಬೇಕೆಂದು ಹೇಳಿ ಸರ್ಕಾರ ಒಂದು ನಿಯಮವನ್ನು ಹೊರಡಿಸಿತ್ತು ಆ ನಿಯಮ ಇದುವರೆಗೂ ಕೂಡ ಹಿಂದೆ ಬಿದ್ದಿರುವುದನ್ನು ಕಾಣುತ್ತೇವೆ. ಇದಕ್ಕೆ ಸರ್ಕಾರದ ಮಂಜುರಾತಿ ಸಿಗದೆ ಈ ಒಂದು ಸಿಬ್ಬಂದಿ ವರ್ಗದವರನ್ನು ನೇಮಕಾತಿ ಮಾಡಿಲ್ಲ. ಇವತ್ತು ಸಮಾಜ ಕಲ್ಯಾಣ ಇಲಾಖೆಯಲ್ಲಿ ಮುಖ್ಯವಾಗಿ ಹರಿಜನ ಮತ್ತು ಗಿರಿಜನರ ಕಲ್ಯಾಣಕ್ಕೆಂದು ಇಟ್ಟಿದ್ದ ಕೋಟಿಗಟ್ಟಲೆ ಹಣ ಲ್ಯಾಪ್ಸ್ ಆಗಿರುವುದನ್ನು ನಾವು ಕಾಣುತ್ತಿದ್ದೇವೆ. ಈಗ ಇದನ್ನೆಲ್ಲಾ ಕ್ರೋಢಿಕರಿಸುವಂತಹ ಮಾತು ನಿಜವಾಗಿಯೂ ನನಗನಿಸುತ್ತದೆ, ದುಂದುವೆಚ್ಚ ಮಾಡುವ ಹಣಕ್ಕೆ ನಾವು ಕ್ರೋಢಿಕರಣ ಎನ್ನುವ ಮಾತನ್ನು ಹೇಳುತ್ತೇವೆ. ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ಬಹುಶಃ ಇದುವರೆಗೂ ಅಂದರೆ ೧೯೭೫ ರಿಂದ ಆ ಒಂದು ಹಾಸ್ಟಲ್ ಸಿಬ್ಬಂದಿ ಮೇಲ್ವಿಚಾರಕರು ಅಡುಗೆಯವರು ಅಥವಾ ಅಡುಗೆ ಸಹಾಯಕರು ಅಥವಾ ಕಾವಲುಗಾರರು ನೇಮಕಾತಿ ಈ ಒಂದು ಇಲಾಖೆಯಲ್ಲಿ ಆಗದೇ ಇರುವುದನ್ನು ನಾವು ಕಾಣುತ್ತಿದ್ದೇವೆ. ಇವತ್ತು ವಿದ್ಯಾರ್ಥಿನಿಲಯಗಳಲ್ಲಿ ಆ ಒಂದು ವಿದ್ಯಾರ್ಥಿ ವಿದ್ಯಾರ್ಥಿನಿಯರು ಅವರವರೇ ಅಡುಗೆಯನ್ನು ಬೇಯಿಸಿ ಅವರೇ ತಿನ್ನುವಂತಹ ಒಂದು ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಬಹುಶಃ ಈ ರೀತಿ ಇರುವಾಗ ಈ ಒಂದು ಇಲಾಖೆಯ ಬಗ್ಗೆ ಬಹಳಷ್ಟು ನಿರ್ಲಕ್ಷ್ಯ ಸರ್ಕಾರದಿಂದ ಹಾಗು ಇಲಾಖೆಯಿಂದ ಏನು ಆಗಿದೆ, ಇದನ್ನು ನಿಜವಾಗಿಯೂ ಸರಿಪಡಿಸಿ ಇದರ ಬಗ್ಗೆ ಒಂದು ಹೆಚ್ಚಿನ ಮುತುವರ್ಜಿವಹಿಸಬೇಕೆಂದು ನಾನು ಸರ್ಕಾರವನ್ನು ಮತ್ತು ಇಲಾಖೆಯನ್ನು ಒತ್ತಾಯಪಡಿಸುತ್ತೇನೆ. ಇವತ್ತು ಕಂದಾಯ ಇಲಾಖೆಯ ಬಗ್ಗೆ ಹೇಳುವುದಾದರೆ ಕಂದಾಯ ಇಲಾಖೆಯಲ್ಲಿ ಈಗಾಗಲೇ ಬಗರ್‌ಹುಕುಂ ಅನ್ನು ಸಕ್ರಮಗೊಳಿಸುವ ಕಾರ್ಯಕ್ರಮವನ್ನು ಏನು ಹಮ್ಮಿಕೊಂಡಿದ್ದಾರೆ. ಇದರಿಂದ ಹೆಚ್ಚಿನ ಕಾರ್ಯಕ್ರಮಗಳನ್ನು ನಮ್ಮ ಕ್ಷೇತ್ರದಲ್ಲಿ ಹಾಕಲಿಕ್ಕೆ ಸಾಧ್ಯವಾಗಿದೆ. ನಮ್ಮ ಸರ್ಕಾರ ಈ ಒಂದು ಕಾನೂನು ತಂದು ಇವತ್ತು ಸುಮಾರು ೪೦–೪೫ ವರ್ಷಗಳಿಂದ ಸರ್ಕಾರಿ ಭೂಮಿಯಲ್ಲಿ ಬಗರ್‌ಹುಕುಂ ಮಾಡಿಕೊಂಡಿರುವಂತಹ ಬಡ ರೈತರಿಗೆ ಅದೇ ಭೂಮಿಯನ್ನು ಕೊಡುವಂತಹ ಕಾರ್ಯಕ್ರಮ ಏನಿದೆ, ಇದು ನಿಜವಾಗಿಯೂ ಸಂತೋಷದ ವಿಷಯ. ಆದರೆ ಕಾನೂನಿನ ಅಡೆತಡೆಗಳಿಂದ ಈ ಕಾನೂನನ್ನು ಸಂಪೂರ್ಣವಾಗಿ ಜಾರಿಗೊಳಿಸಲಿಕ್ಕೆ ಇನ್ನೂ ಆಗಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂತೆ ಕುಂಕಿ ಭೂಮಿಯನ್ನು ಮತ್ತು ಅರಣ್ಯ ಭೂಮಿಯನ್ನು ಹಾಗೂ ಇತರೇ ಜಿಲ್ಲೆಗಳಲ್ಲಿ ಬರುವಂತಹ ಸೊಪ್ಪಿನ ಬೆಟ್ಟ ಮಾವಿನ ತೋಪು ಇಂತಹ ಭೂಮಿಗಳಲ್ಲೂ ಕೂಡ ಇವತ್ತು ಬಗರ್‌ಹುಕುಂ ಮಾಡಿದಂತಹ ಜನಗಳಿಗೆ ಸಕ್ರಮಗೊಳಿಸಬೇಕು. ಅದಕ್ಕಾಗಿ ಆ ಕಾನೂನನ್ನು ಇವತ್ತು ತಿದ್ದುಪಡಿ ಮಾಡಿ ಕೆಲವೊಮ್ಮೆ ಸದನದ ಸಮಿತಿ ಮತ್ತು ಜಿಲ್ಲಾ ಮಟ್ಟದ ಕಂದಾಯ ಅಧಿಕಾರಿಗಳ ಹಾಗೂ ಶಾಸಕರ ಸಭೆಯನ್ನು ಕರೆದು ಈ ಕಾರ್ಯಕ್ರಮವನ್ನು ನಾವು ಕೂಡಲೇ ಜಾರಿ ಮಾಡುತ್ತೇವೆಂದು ಹೇಳುವಂತಹ ಮಾತು ಆಗಿದ್ದರೂ ಕೂಡ ಕಳೆದ ಒಂದೂವರೆ ತಿಂಗಳಿಂದ ಬಹುಶಃ ಇದು ಬಹಳಷ್ಟು ಹಿಂದೆ ಬಿದ್ದಿದ್ದನ್ನು ನಾವು ಕಾಣುತ್ತಿದ್ದೇವೆ. ಇದೇ ಕಾರಣದಿಂದ ಇವತ್ತು ನಾವು ಬಡ ಜನರಿಗೆ ಮಂಜೂರಾತಿ ಮಾಡಲು ಸಾಧ್ಯವಾಗಿಲ್ಲ, ಅಷ್ಟು ಮಾತ್ರ ಅಲ್ಲ, ಸರ್ಕಾರದ ಇನ್ನಿತರೆ ಕಾರ್ಯಕ್ರಮಗಳನ್ನು ಜಾರಿಗೆ ಕೊಡುವುದರಲ್ಲಿಯೂ ಕೂಡ ನಾವು ಹಿಂದೆ ಬಿದ್ದಿದ್ದೇವೆ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಗೋಮಾಳ ಭೂಮಿ ಮತ್ತು ಸಿ ಅಂಡ್ ಡಿ ಲ್ಯಾಂಡ್‌ನಲ್ಲಿರತಕ್ಕಂಥ ಭೂಮಿಯನ್ನು ಬಡವರಿಗೆ ಕೊಡಲಿಕ್ಕೆ ಸರ್ಕಾರ ಕಾನೂನು ಮಾಡಬೇಕು. ಆದರೆ ಒಮ್ಮೊಮ್ಮೆ ಇಲಾಖೆಯ ಅಧಿಕಾರಿಗಳು ಇದಕ್ಕೆ ಅಡೆತಡೆಯನ್ನುಂಟು ಮಾಡುತ್ತಿದ್ದಾರೆ. ಇವತ್ತು ನಮ್ಮ ಜಿಲ್ಲೆಯಲ್ಲಿ ಬಹುಶಃ ತಾಲ್ಲೂಕು ತಹಶೀಲ್ದಾರರ ಮೂಲಕ ಭೂಮಿಯನ್ನು ಮಂಜೂರು ಮಾಡಿದರೆ ಅದಕ್ಕಿಂತ ಮೇಲ್ಪಟ್ಟ ಅಧಿಕಾರಿಗಳು ಇವತ್ತು ಅದನ್ನು ಕೊಡಲಿಕ್ಕೆ ಸಾಧ್ಯ ಇಲ್ಲ ಅಂತ ಹೇಳಿ ಅಡೆತಡೆಯನ್ನುಂಟು ಮಾಡುವುದನ್ನು ನಾವು ಕಾಣುತ್ತಿದ್ದೇವೆ. ಶಿಕ್ಷಣದ ಅರಿವಿಲ್ಲದ ಜನರು ಈ ಅಕ್ರಮ ಸಾಗುವಳಿ ಜಮೀನಿಗೆ ಅರ್ಜಿ ಕೊಡಲಿಕ್ಕೆ ತೊಂದರೆಯಾಗಿದೆ. ಹಾಗೆ ಅರ್ಜಿ ಕೊಡಲು ಬಾಕಿ ಇದ್ದ ಜನರಿಗೆ ಸಮಯದ ಮಿತಿಯನ್ನು ಮುಂದುವರಿಸಿದರೆ ಹೆಚ್ಚಿನ ಜನರಿಗೆ ಪ್ರಯೋಜನವಾಗಲಿಕ್ಕೆ ಸಾಧ್ಯವಿದೆ. ಇದೇ ಕಾರಣದಿಂದ ಎಷ್ಟೋ ಜನರಿಗೆ ಸರ್ಕಾರದ ಕೆಲವು

ಸವಲತ್ತುಗಳನ್ನು ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ನಮ್ಮ ತಾಲ್ಲೂಕು ಪಂಚಾಯಿತಿ ಸಮಿತಿಯಲ್ಲಿ ಅಥವಾ ಸರ್ಕಾರದಿಂದ ಬರುವಂತಹ ನೂರು ಬಾವಿ ಕಾರ್ಯಕ್ರಮ ಇರಬಹುದು ಅಥವಾ ರೈತರಿಗೆ ಕೃಷಿ ಇಲಾಖೆ ಯಿಂದ ಕೊಡುವಂತಹ ಕಾರ್ಯಕ್ರಮವಿರಬಹುದು, ಹೀಗೆ ಯಾವುದೇ ಕಾರ್ಯಕ್ರಮವನ್ನು ಇವತ್ತು ಹಮ್ಮಿಕೊಳ್ಳಬೇಕಾದರೆ ಆ ಬಡ ರೈತರಲ್ಲಿ ಹೆಚ್ಚಿನ ರೀತಿಯ ಸಾಗುವಳಿ ಚೀಟಿಯನ್ನು ಹೊಂದಿರದ ಅವರಿಗೆ ಭೂಮಿ ಮಂಜೂರು ಮಾಡಲಿಕ್ಕೆ ಸಾಧ್ಯವಿಲ್ಲದಂತಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಅದೇರೀತಿಯಲ್ಲಿ ಅರಣ್ಯ ಇಲಾಖೆ ಬಗ್ಗೆ ಈಗಾಗಲೇ ಸದಸ್ಯರು ಮಾತನಾಡಿದರು. ಇವತ್ತು ಅರಣ್ಯ ಇಲಾಖೆಯಲ್ಲಿ ಸಮಿತಿಯನ್ನು ಮಾಡುವಂತಹ ಅಧಿಕಾರವನ್ನು ಸದಸ್ಯರಿಗೆ ಕೊಡಬೇಕೆಂದು ಕಳೆದ ಎರಡು ವರ್ಷಗಳಿಂದ ಇಲಾಖೆ ಮೂಲಕ ಹೇಳುತ್ತಿದ್ದರೂ ಇವತ್ತಿಗೂ ಸಮಿತಿಯನ್ನು ರಚನೆ ಮಾಡಿಲ್ಲ. ಇದರಿಂದಾಗಿ ಬಗರ್‌ಹುಕುಂ ಸಾಗುವಳಿ ಭೂಮಿಯನ್ನು ಮಂಜೂರು ಮಾಡಲಿಕ್ಕೆ ಸಾಧ್ಯವಾಗಿಲ್ಲ. ಈ ತೊಂದರೆಯನ್ನು ಹೋಗಲಾಡಿಸಲು ಸರ್ಕಾರ ಈಗಲಾದರೂ ತ್ವರಿತವಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಬಗರ್‌ಹುಕುಂ ಸಾಗುವಳಿಗೆ ಸಂಬಂಧಪಟ್ಟ ಸಮಿತಿಗಳ ಸದಸ್ಯರಿಗೆ ಬೈಠಕ್ ಫೀಸನ್ನು ಕೊಡದೇ ಇರುವುದರಿಂದ ತೊಂದರೆಯಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಆ ಸಿಟಿಂಗನ್ನು ಇಟ್ಟಾಗ ಅವರಿಗೆ ಪ್ರಯಾಣ ಭತ್ಯ ಮತ್ತು ಸಿಟಿಂಗ್ ಫೀಸನ್ನು ಕೊಡದೆ ಇರುವುದರಿಂದ ಹೆಚ್ಚಿನ ಸಿಟಿಂಗ್‌ನಲ್ಲಿ ಕೆಲವರು ಭಾಗವಹಿಸದೆ ಇವತ್ತು ಮಂಜೂರಾತಿಯಲ್ಲಿ ತೊಂದರೆ ಯಾಗುತ್ತಿದೆ. ಏಕೆಂದರೆ ಹಿಂದುಳಿದ ವರ್ಗದವರು ಅಥವಾ ಹರಿಜನ ಗಿರಿಜನರನ್ನು ಆ ಸಮಿತಿಗೆ ನೇಮಕಾತಿ ಮಾಡಿಕೊಂಡಾಗ ಅವರಿಗೆ ದಿನಕ್ಕೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬ ಕಾರ್ಮಿಕನಿಗೆ ೫೦ ರಿಂದ ೭೫ರೂ ಸಂಬಳ ಇರುವಂತಹ ಸಂದರ್ಭದಲ್ಲಿ ಆ ಸಮಿತಿಯ ಸದಸ್ಯ ಬೆಳಗಿನಿಂದ ಸಂಜೆನರೆಗೆ ಸಮಿತಿಗೆ ಹಾಜರಾದರೆ ಮನೆಗೆ ಹೋಗಿ ಉಪವಾಸ ಬೀಳುವಂತಹ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ.

ಉಪಾಧ್ಯಕ್ಷರು.—ಒಂದು ನಿಮಿಷ, ತಾವು ಬಗರ್‌ಹುಕುಂ ಸಾಗುವಳಿ ಕಮಿಟಿ ಬಗ್ಗೆ ಒಂದು ಮಾತು ಹೇಳುತ್ತಿದ್ದೀರಿ. ಬಗರ್‌ಹುಕುಂ ಸಾಗುವಳಿ ಸದಸ್ಯರಿಗೆ ಸಿಟಿಂಗ್ ಫೀಸನ್ನು ಕೊಡುತ್ತಿಲ್ಲವೆಂದು ಏನು ಹೇಳಿದ್ದೀರಿ ಅದು ವಾಸ್ತವ ಅಂತ ಕಾಣುತ್ತದೆ.

ಶ್ರೀ ಕೆ. ಕುಶಾಲ.—ಅದು ಡಿಪಿಎಆರ್‌ಗೆ ಹೋಗಿದೆ ಎಂದು ಕಳೆದ ಒಂದು ವರ್ಷದಿಂದ ಹೇಳುತ್ತಿದ್ದಾರೆ. ಇನ್ನೂ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ.—ಅಕ್ರಮ ಸಾಗುವಳಿಯನ್ನು ಸಕ್ರಮೀಕರಿಸುವ ಸಮಿತಿಯ ಸದಸ್ಯರಿಗೆ ಸಿಟಿಂಗ್ ಫೀಸನ್ನು ಕೊಡುತ್ತೇನೆಂದು ಹೇಳಿದ್ದರು. ಆದರೆ ಈತನಕ ಆ ಬಗ್ಗೆ ಏನೂ ಹುಕುಂ ಬರಲಿಲ್ಲ. ಈಗ ಮಂತ್ರಿಗಳು ಇಲ್ಲೇ ಇದ್ದಾರೆ. ಕುಶಾಲ ಅವರು ಆ ಪ್ರಶ್ನೆ ಎತ್ತಿದ್ದಾರೆ. ಅದರ ಬಗ್ಗೆ ಮಂತ್ರಿಗಳು ಒಂದು ಮಾತನ್ನು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಕೆ. ಕುಶಾಲ.—ಅದೇ ರೀತಿಯಲ್ಲಿ ಆರೋಗ್ಯ ಇಲಾಖೆ ಬಗ್ಗೆ ಹೇಳುವುದಾದರೆ, ಇವತ್ತು ನಾವು ಶುಶ್ರೂಷ ಕಾರ್ಯಕ್ರಮದ ಮೂಲಕ ಹೆಚ್ಚಿನ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಹೇಳುತ್ತಿದ್ದೇವೆ. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಮತ್ತು ಅದರ ಮೊದಲು ಎರಡು ಅವಧಿಯಲ್ಲಿ ಕೂಡ ಈ ಆರೋಗ್ಯ ಇಲಾಖೆಗೆ ಸಿಬ್ಬಂದಿಯನ್ನು ನೇಮಕಾತಿ ಮಾಡದೇ ಇರುವುದನ್ನು ನಾವು ಕಾಣುತ್ತಿದ್ದೇವೆ. ಪ್ರತಿ ಸಲ ಸಿಬ್ಬಂದಿ ಹಾಗೂ ವೈದ್ಯಾಧಿಕಾರಿಗಳನ್ನು ಕೊಡುತ್ತೇವೆ ಎಂದು ಹೇಳಿದರೂ ಕೂಡ, ನಮ್ಮ ಸುಳ್ಯ ತಾಲ್ಲೂಕಿನಲ್ಲಿ ಇವತ್ತು ಸುಮಾರು ೭ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ೧ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಕೇವಲ ೩ ಜನ ವೈದ್ಯಾಧಿಕಾರಿಗಳಿದ್ದು ಅದಕ್ಕೆ ಬೇಕಾದ ಸಿಬ್ಬಂದಿ ಕೊಡದೆ ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ತೊಂದರೆ ಆಗುತ್ತದೆ. ನಾವು ಎಷ್ಟೇ ಹೊಸ ಹೊಸ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡರೂ ಸಹ ಹಿಂದಿನ ಪದ್ಧತಿಗೆ ಬೇಕಾದ ಸಿಬ್ಬಂದಿ ಮತ್ತು ವೈದ್ಯರನ್ನು ನೇಮಕಾತಿ ಮಾಡದೆ ಇದ್ದ ಪ್ರಯುಕ್ತ ಗ್ರಾಮೀಣ ಪ್ರದೇಶದಲ್ಲಿ ಕೆಲವು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮನುಷ್ಯರೇ ಹೋಗದೇ ಇರುವುದನ್ನು ಕಾಣುತ್ತಿದ್ದೇವೆ. ಅಷ್ಟು ಮಾತ್ರವಲ್ಲ, ಜಿಲ್ಲಾಪರಿಷತ್ತಿನಿಂದ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕೇವಲ ವರ್ಷಕ್ಕೆ ೩೫ ಸಾವಿರ ರೂಪಾಯಿಗಳ ಔಷಧಿ ಒದಗಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದರೂ ಹಾಗೆ ಕಳೆದ ಎರಡು ವರ್ಷದಿಂದ ನಮ್ಮ ಜಿಲ್ಲೆಯಲ್ಲಿ ಯಶಸ್ವಿಯಾಗಿ ನಡೆದಿಲ್ಲ. ೩೫ ಸಾವಿರದ ಬದಲು ಕೇವಲ ೧೫ ಸಾವಿರ ರೂ.ಗಳ ಔಷಧಿ ಕೊಟ್ಟು ಕಳೆದೆರಡು ವರ್ಷದಿಂದ ಈ ರೀತಿ ತೊಂದರೆಯಾಗಿರುವುದನ್ನು ಕಾಣುತ್ತಿದ್ದೇವೆ. ಮುಖ್ಯವಾಗಿ ಆರೋಗ್ಯ ಇಲಾಖೆಯಲ್ಲಿ ವೈದ್ಯಕೀಯ ಸಿಬ್ಬಂದಿ ಮತ್ತು ಔಷಧಿಗಳನ್ನು ಪೂರೈಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ನಮ್ಮ ಸರ್ಕಾರ ಹಾಕಿಕೊಂಡಿರುವ ಹೆಚ್ಚಿನ

ಕಾರ್ಯಕ್ರಮಗಳು ಯಶಸ್ವಿಯಾಗಲಿ ಆದರ ಜೊತೆಗೆ ಈಗಿರುವ ಇನ್ನೂ ಕೆಲವು ತೊಂದರೆಗಳನ್ನು ಸರಿಪಡಿಸಿಕೊಂಡು ಉತ್ತಮ ಕಾರ್ಯಕ್ರಮಗಳು ಅನುಷ್ಠಾನಕ್ಕೆ ಬರುವಂತಾಗಲಿ ಎಂದು ಕೇಳಿಕೊಳ್ಳುತ್ತ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಆರ್. ಪಾಟೀಲ್ (ಕಿತ್ತೂರು).—ಸನ್ಮಾನ್ಯ ಉಪಾಧ್ಯಕ್ಷರೆ, ೧೯೯೪-೯೫ರ ಈ ಬಜೆಟ್‌ನಲ್ಲಿ ರೈತರ ಬಗ್ಗೆಯಾಗಲೀ ಅಥವಾ ಗ್ರಾಮೀಣ ಪ್ರದೇಶದ ಜನರ ಬಗ್ಗೆಯಾಗಲೀ ಒಂದೂ ಕಳಕಳಿಯ ವಾಕ್ಯ ಇಲ್ಲ. ಆದ ಕಾರಣ ನಾವು ಇದನ್ನು ಅನಿವಾರ್ಯವಾಗಿ ವಿರೋಧ ಮಾಡಬೇಕಾಗುತ್ತದೆ. ನಮ್ಮ ಅರ್ಥಮಂತ್ರಿಗಳು ಸಂರಕ್ಷಣ ಅರ್ಥವ್ಯವಸ್ಥೆಯನ್ನು ಮುಕ್ತವ್ಯವಸ್ಥೆಯನ್ನಾಗಿ ಪರಿವರ್ತಿಸಿ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ದೀರ್ಘಕಾಲೀನ ಕ್ರಮಗಳು ನಿಧಾನವಾಗಿ ಫಲ ನೀಡತೊಡಗಿವೆ. ಎಂದಿದ್ದಾರೆ. ಅಂದರೆ ನಮ್ಮನ್ನೆಲ್ಲಾ ಪಾತಾಳಕ್ಕೆ ತುಳಿಯಬೇಕೆಂಬ ತಂತ್ರ ಏನು ನಡೆದಿದೆ ಅದನ್ನು ನೀವು ಪ್ರಶಂಸೆ ಮಾಡುತ್ತಿದ್ದೀರಲ್ಲ ? ಈಗ ಮುಕ್ತ ಮಾರುಕಟ್ಟೆ ಎನ್ನುವ ವಿಚಾರ ರೈತರಿಗೆ ನಾಳೆ ಎಷ್ಟು ಎಷ್ಟು ಮಾರಕ ಅನ್ನುವ ಬಗ್ಗೆ ಬಹಳಷ್ಟು ಚರ್ಚೆ ಈ ಸದನದಲ್ಲಿ ನಡೆಯಬೇಕಾಗಿತ್ತು. ಆದರೆ ದುರ್ದೈವಕ್ಕೆ ನಮ್ಮ ಅರ್ಥಮಂತ್ರಿಗಳು ಇದನ್ನು ಪ್ರಶಂಸೆ ಮಾಡುವುದಕ್ಕೆ ಹತ್ತಿದ್ದಾರೆ. ಏನು ಫಲ ನೀಡಿದೆ ಇದು ? ಗ್ಯಾಟ್ ಒಪ್ಪಂದ ಗ್ಲೋಬಲ್ ಟ್ರೇಡ್ ಆರ್ಗನೈಜೇಶನ್ ಬಗ್ಗೆ ಹೇಳುತ್ತಿದ್ದೀರಿ, ಇದರಿಂದ ಏನು ಫಲ ನಾವು ನೋಡಿದ್ದೇವೆ ಎಂದರೆ ಗೊಬ್ಬರ ಧಾರಣೆ ಹೆಚ್ಚಾಯಿತು. ೧೨೦ ರೂ.ಗೆ ಸಿಗುವಂತಹ ಡಿ.ಎ.ಪಿ. ೩೫೦-೪೦೦ ರೂ. ಆಯಿತು. ಆಮೇಲೆ ಡೊಮೆಸ್ಟಿಕ್ ಸಬ್ಸಿಡಿ ಪೂರ್ತಿ ತೆಗೆದು ಹಾಕಬೇಕೆಂಬ ವಿಚಾರವನ್ನು ಪ್ರಶಂಸೆ ಮಾಡುತ್ತಿದ್ದೀರಿ. ಇದರಿಂದೇನಾಗುತ್ತಿದೆ ಎಂದರೆ ಬಂಡವಾಳ ಹೂಡಬೇಕೆನ್ನುವ ರೈತನಿಗೆ ಬಂಡವಾಳ ಹೂಡಲು ಸಾಧ್ಯವಿಲ್ಲ. ರೈತ, ಏಕೆ ಬೇಕಪ್ಪ, ನಮಗೆ ಗೊಬ್ಬರವೂ ಬೇಡ, ಬಂದಷ್ಟು ಬರಲಿ ಎಂದು ಚಿತ್ತಿದರೆ ನಾಳೆ ಈ ಉತ್ಪಾದನೆಗೆ ಹೊಡೆತ ಬಿತ್ತು ಎಂದರೆ ನಾವು ಭಿಕ್ಷಾಪಾತ್ರೆ ಹಿಡಿದುಕೊಂಡು ಅಮೆರಿಕಾಕ್ಕೆ ಬೇರೆ ದೇಶಕ್ಕೆ ಹೋಗಬೇಕು ಅನ್ನ ತರಲಿಕ್ಕೆ. ಅಂತಹ ಅರ್ಥವ್ಯವಸ್ಥೆಯನ್ನು ನೀವು ಪ್ರಶಂಸೆ ಮಾಡುತ್ತಿದ್ದೀರಿ. ಇವತ್ತು ನಾಳೆ ಪಾರ್ಲಿಮೆಂಟಿನಲ್ಲಿ ಇದೇ ವಿಚಾರದಲ್ಲಿ ಸಾಕಷ್ಟು ಚರ್ಚೆಯಾಗುತ್ತಿದೆ. ನಿಜವಾಗಿಯೂ ಈ ಒಕ್ಕಲುತನದ ವಿಚಾರ ರಾಜ್ಯಸರ್ಕಾರಕ್ಕೆ ಸಂಬಂಧಿಸಿದ್ದು. ಈ ಸದನದಲ್ಲಿ ನಾವು ಅವಿರೋಧವಾಗಿ ಎಲ್ಲರೂ ಕೂಡ ಒಂದು ನಿರ್ಣಯವನ್ನು ಮಂಡಿಸಿ ಕೇಂದ್ರ ಸರ್ಕಾರಕ್ಕೆ ತಿಳಿಸಬೇಕಾಗಿತ್ತು. ಇದು ಒಕ್ಕಲುತನ ಪ್ರಧಾನವಾದ ದೇಶ. ಒಕ್ಕಲುತನಕ್ಕೆ ಪೂರಕವಾಗುವಂತಹ ಈ ಒಪ್ಪಂದದಲ್ಲಿ ಸಾಕಷ್ಟು ತಿದ್ದುಪಡಿಯಾಗಬೇಕು. ಇಲ್ಲದಿದರೆ ಇದನ್ನು ನಾವು ಒಪ್ಪುವುದಿಲ್ಲ ಎಂಬ ಮಾತು ಹೇಳಬೇಕು. ಅದನ್ನು ಬಿಟ್ಟುಕೊಟ್ಟು ಇದೊಂದು built in co-erceive mechanism of cross mechanisation. ಅಂದರೆ ಒಮ್ಮೆ ಒಳ ಹೊಕ್ಕಿದರೆ ಹೊರಗೆ ಬರುವುದಕ್ಕೆ ಸಾಧ್ಯವಿಲ್ಲ. ಈ ಒಪ್ಪಂದದಿಂದ ನಮಗೆ ಅನುಕೂಲ ಆಗಲಿಲ್ಲ ಎಂದರೆ ನಾಳೆ ಈ ಒಪ್ಪಂದದಿಂದ ಹೊರಗೆ ಬರಬಹುದು ಎಂದು. ಇವರು ತಿಳಿದಿರಬಹುದು, ಆದರೆ ಒಮ್ಮೆ ನಾವು ಈ ಒಪ್ಪಂದಕ್ಕೆ ಸಹಿ ಹಕಿದೆವು ಅಂದರೆ ಇದರಿಂದ ಹೊರಗೆ ಬರಲು ಸಾಧ್ಯವಿಲ್ಲ. ಆ ಕಾರಣ ಈ ಸದನ ಒಂದು ನಿರ್ಣಯ ಮಾಡಿ ಕೇಂದ್ರಸರ್ಕಾರಕ್ಕೆ ಇದನ್ನು ಸ್ವಲ್ಪ ತಡೆಯಿರಿ, ಇದನ್ನು ಸ್ವಲ್ಪ ಚರ್ಚೆ ಮಾಡೋಣ, ಇದು ರಾಜ್ಯದ ವಿಷಯ, ಆ ಕಾರಣ ಈ ಸದನಕ್ಕೂ ಅಷ್ಟೇ ಹಕ್ಕಿದೆ ಎಂಬ ವಿಚಾರವನ್ನು ತಿಳಿಸಬೇಕಾಗಿತ್ತು. ದುರ್ದೈವಕ್ಕೆ ಅದನ್ನು ಮಾಡಲಿಲ್ಲ. ತದ್ವಿರುದ್ಧವಾಗಿ ಅದನ್ನು ವರ್ಣನೆ ಮಾಡುತ್ತಿದ್ದೀರಿ. ಅದರ ಪರಿಣಾಮಗಳು ಈಗಾಗಲೇ ಪ್ರಾರಂಭವಾಗಿವೆ. ಗೊಬ್ಬರದ ಮತ್ತು ಔಷಧ ಧಾರಣೆ ಹೆಚ್ಚಾಗುವಂಥದು ಮತ್ತೆ ಪ್ರೈವೇಟ್ ಸರ್ವೀಸಸ್ ಬರುವಂಥದ್ದೆಲ್ಲ ನಡೀತಿದೆ. ಅಂತೂ ನಾವು ಇದರಿಂದ ದೊಡ್ಡ ಪ್ರಪಾತಕ್ಕೆ ಹೋಗಬಹುದೆಂದು ನನಗನ್ನಿಸುತ್ತದೆ. ಸಾರ್ವತ್ರಿಕ ವಿತರಣಾ ವ್ಯವಸ್ಥೆ ಹೆಚ್ಚು ಕಡಿಮೆ ಈಗ ಸತ್ತಂತಾಗಿದೆ. ಮುಕ್ತಮಾರುಕಟ್ಟೆ ಧಾರಣೆ ಮತ್ತು ಪಿಡಿಎಸ್‌ನಲ್ಲಿ ಕೊಡುವಂತಹ ಕಾಳುಕಡಿ ಧಾರಣೆ ಹೆಚ್ಚುಕಡಿಮೆ ಒಂದೇ ಆಗಿದೆ. ಬಹುತೇಕ ಪಿಡಿಎಸ್ ಇಲ್ಲ, ಕಾಗದದ ಮೇಲೆ ಮಾತ್ರ ಉಳಿದಿದೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಾನು ಇಲ್ಲಿ ಹೆಚ್ಚು ಚರ್ಚೆ ಮಾಡುವುದಿಲ್ಲ. ಕಾರಣ ಸಬ್ಜೆಕ್ಟ್ ಕಮಿಟೀಸ್ ಮಾಡಿದ್ದೀರಿ. ದೀರ್ಘವಾಗಿ ಅಲ್ಲಿ ಚರ್ಚೆ ಮಾಡೋಣ. ಗ್ರಾಮೀಣ ಪ್ರದೇಶಕ್ಕೆ ಸಮಸ್ಯೆ ಅಂದುಕೊಂಡಿರುವ ಎರಡು ಮೂರ ವಿಚಾರಗಳ ಬಗ್ಗೆ ಮಾತ್ರ ನಾನು ಮಾತನಾಡುತ್ತಿದ್ದೇನೆ. ಪ್ರಕೃತಿ ವಿಕೋಪಕ್ಕೆ ತಾವು ಅಷ್ಟು ಹಣ ಕೊಟ್ಟಿದ್ದೇವೆ ಇಷ್ಟು ಹಣ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದೀರಿ. ನಿಮಗೆ ತಾಖತ್ ಇದ್ದರೆ ಕೊಡ್ರಿ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬೇಡ ಅನ್ನುವುದಿಲ್ಲ. ಆದರೆ ಎಷ್ಟು ಅವಧಿಯೊಳಗೆ ಅದನ್ನು ಕೊಡಬೇಕೆಂಬ ಬಗ್ಗೆ ತಾವೇನಾದರೂ ವಿಚಾರ ಮಾಡಿದ್ದೀರಾ ? ಭೂಕಂಪವಾದಂತಹ ಪ್ರದೇಶಕ್ಕೆ ನಾನು ಹೋಗಿ ನೋಡಿದ್ದೇನೆ. ಅಲ್ಲಿ ಒಂದು ತಿಂಗಳಾದರೂ ಸಹ ಷೆಡ್ ಹಾಕಿಕೊಳ್ಳುವುದಕ್ಕೆ ೫ ತಗಡಿನ ಜಿಂಕ್ ಷೀಟ್‌ನ್ನು ಕೊಡು ವಂತಹ ಕಳಕಳಿ ಸರಕಾರಕ್ಕೆ ಇಲ್ಲ, ೨-೩ ತಿಂಗಳಾದ ಮೇಲೆ ಬದುಕಿದ್ದಾರೋ ಸತ್ತಿದ್ದಾರೋ ಎಂದು ನೋಡುವುದಕ್ಕೆ ಹೋಗುತ್ತೀರಿ. ಪ್ರಕೃತಿ ವಿಕೋಪಕ್ಕೆ ಒಳಗಾದವರಿಗೆ ಏನು ಹಣ ಕೊಡುತ್ತೀರಿ, ಅದನ್ನು ಕೂಡಲೇ ಕೊಡಬೇಕು. ಒಂದು ವಾರದೊಳಗೆ ಅವತ್ತಿನದ್ದು ಅವತ್ತೇ ಕೊಡಬೇಕು, ಅದನ್ನು ಬಿಟ್ಟು ಅವರು ಸತ್ತ ಮೇಲೆ ಇಲ್ಲವೇ ಅವರು ಯಾವುದೋ ಊರಿಗೆ ಗುಳೆ ಹೋದಮೇಲೆ ಅವರನ್ನು ಹುಡುಕಿಕೊಂಡು ಹೋಗಿ ಅಲ್ಲಿ ಧನ ಸಹಾಯ ಮಾಡುತ್ತೇವೆ, ಅನುಕೂಲ ಮಾಡುತ್ತೇ ವೆಂದು ಹೇಳುವುದು ಬಹಳ ತಪ್ಪು ಪ್ರಕೃತಿ ವಿಕೋಪಕ್ಕೆ ಗುರಿಯಾದಂತಹವರು ಹೆಚ್ಚಾಗಿ ಗ್ರಾಮಾಂತರ ಪ್ರದೇಶದವರು. ಅಲ್ಲಿ ಹೆಚ್ಚು ಮಳೆಯಾಯಿತು, ಮನೆ ಬಿದ್ದು ಹೋಯಿತು, ನೆರೆ ಹಾವಳಿ, ಭೂಕಂಪವಾಯಿತು ಇಂತಹ ಪ್ರಕೃತಿ ವಿಕೋಪದ ಕಾರ್ಯಕ್ರಮಕ್ಕೆ ಧನ ಸಹಾಯದ ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ, ಆದರೆ ಇಂತಿಷ್ಟು ದಿವಸದೊಳಗೆ ಅದು ಮುಟ್ಟಬೇಕೆಂದು ನಿಯಮ ಮಾಡಿಕೊಳ್ಳದ ಹೊರತಾಗಿ ನಾವು ಕಳಿಸಿಕೊಡುತ್ತೇವೆ ಎಂದು ಅದನ್ನು ಬಡ್ಜೆಟ್ಟಿನಲ್ಲಿ ವರ್ಣನೆ ಮಾಡಿಕೊಂಡು ಬರೆಯುತ್ತೇವೆಂದು ಹೇಳಿದರೆ ಇದು ಯಾರಿಗೂ ಒಪ್ಪಿಗೆಯಾಗುವಂತಹ ಮಾತಲ್ಲ. ಇನ್ನು ಪಂಚಾಯಿತಿ ಬಗ್ಗೆ ಅನೇಕ ಮಾನ್ಯ ಸದಸ್ಯರು ಬಹಳ ದೊಡ್ಡ ಕ್ರಾಂತಿಕಾರಕ ಪ್ರಗತಿಯೆಂದು ವರ್ಣನೆ ಮಾಡಿದರು. ನನಗೂ ಒಪ್ಪಿಗೆ ಇದೆ. ಅಲ್ಲಿ ಪ್ರತ್ಯಕ್ಷ ಹೋಗಿ ನೋಡಿಕೊಂಡು ಬನ್ನಿ. ಅಲ್ಲಿ ಪಾರ್ಟಿಗಳು ಇಲ್ಲ ಅಂದರೂ ಸಹ ಅಲ್ಲಿ ಪಾರ್ಟಿಗಳು ಇವೆ. ಅಲ್ಲಿ ಡೆಮಾಕ್ರೆಟಿಕ್ ಸ್ಪಿರಿಟ್ ಏನು ಇದೆ ಅಂದರೆ ಬಹುಮತಕ್ಕೆ ಅಧಿಕಾರವಿರಬೇಕು. ಆದರೆ ಇದಕ್ಕೆ ಕೊಡಲಿ ಪೆಟ್ಟು ಬಿದ್ದು ನೀವು ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆಯನ್ನು ನೇರವಾಗಿ ಮಾಡಿದ್ದೀರಿ, ಹರಿಜನ ಗಿರಿಜನರಿಗೆ, ಮಹಿಳೆಯ ರಿಗೆ ಪ್ರಾತಿನಿಧ್ಯ ಕೊಡಬೇಕು, ಒಪ್ಪುತ್ತೇನೆ. ೫೦ ಪರ್ಸೆಂಟ್ ಕೊಡುತ್ತೀರಾ ಕೊಡಿ, ಆದರೆ ನೇರವಾಗಿ ಚುನಾವಣೆ ಮಾಡಿ ಕಳಿಸಿದ್ದರೆ ಆ ಜನರು ನಾನು ಆಯ್ಕೆ ಮಾಡಿದಂತಹ ಅಧ್ಯಕ್ಷ ಎಂದು ತಲೆ ಮೇಲೆ ಹೊತ್ತುಕೊಂಡು ಓಡಾಡುತ್ತಾರೆ. ಆದರೆ ೨೦ ಜನ ಸದಸ್ಯರು ಇರುವಂತಹ ಪಂಚಾಯತಿ ಯಲ್ಲಿ ಕೇವಲ ೩ ಜನ ಒಂದು ಪಾರ್ಟಿಗೆ ಸೇರಿದವರಿದ್ದರೆ ಅವರಿಗೇ ಅಧಿಕಾರ. ಹೀಗಾದರೆ ಹೇಗೆ ಅಧಿಕಾರ ನಡೆಸುತ್ತಾರೆ ಅವರು. ನೋಡೋಣ ಯಾವ ರೀತಿ ಪಂಚಾಯತಿ ನಡೆಯುತ್ತದೆ ಎನ್ನುವು ದನ್ನು ಮನಗಂಡ ಮೇಲೆ ಬೇಕಾದರೆ ಇದನ್ನು ತಿದ್ದುಪಡಿ ಮಾಡುತ್ತೀರೋ ಅಥವಾ ಗ್ರಾಮೀಣ ಪ್ರದೇಶವನ್ನು ಅಲ್ಲಿನ ಆಡಳಿತವನ್ನು ಪೂರ್ತಿ ಹಾಳು ಮಾಡುತ್ತೀರೋ ನೋಡೋಣ, ಅದು ಅನು ಭವಕ್ಕೆ ಬರಲಿ. ನಾವು ಬೇಡವೆಂದು ಹೇಳಿದಾಗ ಪ್ರಯೋಗ ಮಾಡುತ್ತಿದ್ದೇವೆಂದು ಹೇಳಿದಿರಿ. ನಾನು ಆಗಲೇ ಹೇಳಿದಂತೆ ಯಾವ್ಯಾವ ಪ್ರಯೋಗ ಮಾಡಬೇಕು ಯಾವ್ಯಾವ ಪ್ರಯೋಗ ಮಾಡಬಾರದು ಎನ್ನು ವುದಕ್ಕೆ ಸಾಮಾನ್ಯ ಜ್ಞಾನಬೇಕು. ಹಾವು ಕಚ್ಚಿಸಿ ಅದನ್ನು ನೋಡುತ್ತೇವೆ ಏನಾಗುತ್ತದೆಂದು ಹೇಳಿ ದರೆ ಹೇಗೆ ? ಅಂತಹ ಪ್ರಯೋಗ ಮಾಡಲಿಕ್ಕೆ ಹೋಗಬಾರದು. ಅವತ್ತು ಈ ಬಿಲ್ ಮೇಲೆ ಚರ್ಚೆ ನಡೆಯುವಾಗ ಈ ವಿಷಯದ ಬಗ್ಗೆ ಸಾಕಷ್ಟು ಹೇಳಿದ್ದೇವೆ. ಆಗ ಮಂತ್ರಿಗಳು ಸರಿ ಅಂದರು ಆಮೇಲೆ ಪಕ್ಷದ ಒತ್ತಡಕ್ಕೆ ಸಿಕ್ಕ ಆ ರೀತಿ ಕಾನೂನು ಮಾಡಿದರು. ಈಗ ಪಂಚಾಯತ್ ವ್ಯವಸ್ಥೆ ಪೂರ್ತಿ ಹಾಳಾಗಿದೆ. ಅದು ಸರಿಯಾಗಿ ನಡೆಯುವಂಥಾದ್ದು ಅಲ್ಲ. ಬಹುತೇಕ ಗೊಂದಲ ಏನು ಇದೆ ಈ ಗೊಂದಲದ ಲಾಭವನ್ನು ಸೆಕ್ರೆಟರಿಗಳು ಲಾಭ ಮಾಡಿಕೊಳ್ಳುತ್ತಾರೆ. ಗ್ರಾಮ ಪಂಚಾಯತಿಗಳ ಸೆಕ್ರೆಟರಿಗಳೇನೂ ಸಾಮಾನ್ಯರಲ್ಲ. ಅವರು ಇದರ ಪೂರ್ತಿ ಲಾಭವನ್ನು ಮಾಡಿಕೊಂಡು ಯಾವ್ಯಾವ ರೀತಿ ಸುಲಿಗೆ ಮಾಡಬೇಕೆಂ ಎನ್ನುವುದನ್ನು ಈಗ ತಾವು ಯಾವ ರೀತಿ ಬಜೆಟ್ ತಯಾರು ಮಾಡಿದ್ದೀರಿ, ಅದೇ ರೀತಿ ಬಜೆಟ್ ಮಾಡಿಕೊಂಡು ತಯಾರಿದ್ದಾರೆ. ನೀವು ಹಣ ಕೊಡಿ, ಕಾರ್ಯದರ್ಶಿಗಳ ಜೇಬಿಗೆ ಅದೆಲ್ಲಾ ಹೋಗುತ್ತದೆ. ಈ ವ್ಯವಸ್ಥೆ ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಾಗು ವಂಥಾದ್ದು ಅಲ್ಲ. ಇದನ್ನು ಕೈಬಿಟ್ಟು ಏನಾದರೂ ತಿದ್ದುಪಡಿ ತಂದು ಬಹುಮತ ಇರುವವರಿಗೆ ಅಧಿಕಾರ ಕೊಡಿ. ಮಹಿಳೆಯರಿಗೇ ಕೊಡಿ, ಹರಿಜನರಿಗೆ ಕೊಡಿ, ಆದರೆ ಬಹುಮತಕ್ಕೆ ಅಧಿಕಾರ ವಿರಬೇಕು ಎನ್ನುವುದನ್ನು ನೆನಪಿನಲ್ಲಿಡಬೇಕು. ಈ ಕೈಗಾರಿಕೆ ಬೆಳವಣಿಗೆ ಬಗ್ಗೆ ಸಾಕಷ್ಟು ಹೇಳಿದ್ದೀರಿ. ಈಗ ವಿದೇಶೀ ಕಂಪನಿಗಳು ಬಂದವು. ಆ ಕಾರಣದಿಂದಾಗಿ ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಎಲ್ಲರಿಗೂ ಜಮೀನು ಇಲ್ಲದಂತಾಗಿದೆ. ನಾವೇನೋ ವ್ಯಾಪಾರ ಉದ್ಯೋಗ ಮಾಡಿಕೊಂಡು ಬದುಕ ಬೇಕೆಂಬ ಜನ ಇದಕ್ಕೆ ಅನುಕೂಲವಾಗುವಂತಹ ತಂತ್ರಜ್ಞಾನ ವಿಕೇಂದ್ರೀಕರಣವಾಗಬೇಕು. ಯಾರೋ ಎಂ.ಎನ್.ಸಿ.ಟಿ.ಎಂ.ಸಿ.ಗಳು ಮಾತ್ರ ಈ ದೇಶದಲ್ಲಿ ಕೈಗಾರಿಕಾ ವಸ್ತುಗಳನ್ನು ಉತ್ಪಾದನೆ ಮಾಡ ಬೇಕು ಅಂದರೆ ಅದು ಸರಿಯಾಗುವುದಿಲ್ಲ. ಜನಸಾಮಾನ್ಯರಿಗೂ ಈ ಕೈಗಾರಿಕಾ ಕ್ಷೇತ್ರಕ್ಕೆ ಏನೂ ಸಂಬಂಧ ಇಲ್ಲವೆಂದು ಮಾಡುವುದು ಸರಿಯಲ್ಲ. ಸಣ್ಣ ಜನರು ಸಹ ಕಡಿಮೆ ಬಂಡವಾಳದ ಮೇಲೆ

ಈ ಉದ್ಯೋಗಗಳನ್ನು ನಡೆಸಬೇಕು ಅಂದರೆ ಈ ತಂತ್ರಜ್ಞಾನದ ವಿಕೇಂದ್ರೀಕರಣವಾಗಬೇಕು. ಟೆಕ್ನಲಾಜಿಕಲ್ ಡೀ-ಸೆಂಟ್ರಲೈಸೇಷನ್ ಆಗಬೇಕು. ದೊಡ್ಡ ಮಿಲ್ಲಿನಲ್ಲಿ ತಯಾರಾಗುವಂತದ್ದು ಚಿಕ್ಕ ಮಿಲ್ಲಿನಲ್ಲಿ ಅಥವಾ ಸಣ್ಣ ಯಂತ್ರದಲ್ಲಿ ತಯಾರಾಗುವಂತಹ ಒಂದು ತಂತ್ರಜ್ಞಾನ ವಿಕೇಂದ್ರೀಕರಣ ಆದಾಗ ಮಾತ್ರ ಈ ಹಳ್ಳಿಯಲ್ಲಿ ಉದ್ಯೋಗ ಜನರಿಗೆ ಸಿಗುತ್ತದೆ ಆಗ ಈ ಒಂದು ಕೈಗಾರಿಕೆಗಳು ಬೆಳೆಯ ಬಹುದೇ ಹೊರತಾಗಿ ಎಂ.ಎನ್.ಸಿ.ಟೀ ಎಂ ಸಿಗಳಿಗೆ ರೆಡ್ ಕಾರ್ಪೆಟ್ ಹಾಸಿ ಅವರನ್ನು ಈ ದೇಶಕ್ಕೆ ಕರೆದುಕೊಂಡು ಬಂದು ಈ ದೇಶದ ಸಂಪನ್ಮೂಲವನ್ನೆಲ್ಲಾ ಅವರಿಗೆ ಧಾರೆ ಎರೆದುಕೊಡುವುದು ಸರಿಯಲ್ಲ ಈ ದೇಶವನ್ನು ಬಾಜರು ಭೂಮಿ ಮಾಡುತ್ತೀರಿ. ಅವರು ಈ ದೇಶದ ಜನರನ್ನು ಎಕ್ಸ್‌ಪ್ಲಾಯ ಟೇಷನ್ ಮಾಡಿಕೊಂಡು ಹೋಗುತ್ತಾರೆ. ಅಂದರೆ ಈ ಪ್ರಯೋಗ ಹೊಸದೇನಲ್ಲ. ಇಥಿಯೋಪಿಯ ಬ್ರೆಜಿಲ್‌ನಲ್ಲಿ ಮುಂತಾದಕಡೆ ಪ್ರಯೋಗ ಆಗಿದೆ. ಬ್ರೆಜಿಲ್‌ನೊಳಗೆ ಪ್ರಯೋಗವಾದ ನಂತರ ಹಳ್ಳಿಯ ಜನರು ಅಲ್ಲಿನ ರಾಜಧಾನಿಗೆ ಬಂದು ಫುಟಬಾತ್ ಮೇಲೆ ಮಲಗಿದರು, ಹಳ್ಳಿಯವರೆಲ್ಲ ಉದ್ಯೋಗ ಹುಡುಕಿಕೊಂಡು ಬಂದರು. ಬ್ರೆಜಿಲ್ ಸರ್ಕಾರದವರು ಅವರ ಮೇಲೆ ಗುಂಡು ಹಾರಿಸಬೇಕು ಎನ್ನುವ ಆದೇಶವನ್ನು ಕೊಟ್ಟರು. ಆ ಪರಿಸ್ಥಿತಿ ಕಂಡಿತಾ ಇಲ್ಲಿಯೂ ನಿರ್ಮಾಣವಾಗುತ್ತದೆ. ಇಲ್ಲಿ ಹಳ್ಳಿ ಯೊಳಗೆ ಜನರಿಗೆ ಉದ್ಯೋಗ ಇಲ್ಲ, ಒಕ್ಕಲುತನ ಮಾಡುವವರು ಖಂಡಿತಾ ಬದುಕುವುದಕ್ಕೆ ಸಾಧ್ಯ ವಿಲ್ಲ. ಏಕೆಂದರೆ ಡೊಮೆಸ್ಟಿಕ್ ಸಬ್‌ಸಿಡಿ ಪೂರ್ತಿ ತೆಗೆದುಕೊಳ್ಳಿ ಎಂದರೆ ಸಾಧ್ಯವಿಲ್ಲ. ಗ್ಲೋಬಲ್ ಟ್ರೇಡ್ ಆರ್ಗನೈಜೇಷನ್ ಎಂದರೆ ಏನು ? ಅಮೇರಿಕಾದವರು ಸರ್‌ಪ್ಲಸ್ ಒಕ್ಕಲುತನದ ಉತ್ಪಾದನೆ ಏನು ಇದೆ, ಜಪಾನ್‌ನವರ ಔದ್ಯಮಿಕ ಉತ್ಪಾದನೆ ಏನು ಇದೆ, ಅದನ್ನು ಮಾರಿಕೊಳ್ಳುವುದಕ್ಕೆ ಅವರಿಗೆ ಮಾರುಕಟ್ಟೆ ಬೇಕು. ಇದೇ ಗ್ಲೋಬಲ್ ಟ್ರೇಡ್ ಆರ್ಗನೈಜೇಷನ್, ಇದು ನಮಗೆ ಅಪಾಯ ಎಂದು ಆ ನಂತರ ಗೊತ್ತಾಗುತ್ತದೆ. ಈಗ ನಮ್ಮ ಉತ್ಪಾದನಾ ಶಕ್ತಿಯನ್ನು ಕಡಿಮೆ ಮಾಡಬೇಕು. ನಮ್ಮ ಉತ್ಪಾದನೆಯನ್ನು ಹಾಳು ಮಾಡಬೇಕು ಎಂದು ಹೇಳುವ ತಂತ್ರ ಇದು. ಆಗ ಬಹುತೇಕ ಇಂಥ ಒಂದು ಪ್ರಪಾತಕ್ಕೆ ಹೋದ ನಂತರ ನಾವು ಮತ್ತೆ ಬಹುತೇಕ ಇಂಥ ಒಂದು ಪರಿಸ್ಥಿತಿಗೆ ಅಂದರೆ ಪಟ್ಟಣದಲ್ಲಿ ಬಂದು ನೆಲಸಬೇಕಾದಂಥ ಪರಿಸ್ಥಿತಿ ಹಳ್ಳಿಯ ಜನರಿಗೆ ಬರಬಹುದು ಭಯೋತ್ಪಾದಕರು ಹೆಚ್ಚಾಗಬಹುದು. ಆ ಕಾರಣ ಇದನ್ನು ಮೊದಲೇ ಸ್ವಲ್ಪ ಊಹೆ ಮಾಡಿ ತರ್ಕ ಮಾಡಿ ಇದಕ್ಕೆ ಸರಿಯಾದ ಒಂದು ದಿಕ್ಕನ್ನು ತೋರಿಸಿ ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೆಗಳು ಬೆಳೆಯು ವಂಥ ಒಂದು ಪ್ರಯತ್ನವನ್ನು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅದಕ್ಕೆ ಒಂದು ಪೈಸೆ ಕೂಡ ತಗಲುವುದಿಲ್ಲ. ಕೇವಲ ನಗರದ ಜನರಿಗೆ ಅನುಕೂಲವಾಗುವಂಥ ದೊಡ್ಡ ದೊಡ್ಡ ಕಂಪನಿಗಳಿಗೆ ಎಂ ಎನ್ ಸಿ ಗಳಿಗೆ ಅನುಕೂಲವಾಗುವಂತಹ ಒಂದು ಬಜೆಟ್ ಇದು. ಇದರಿಂದ ಇದು ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಿಲ್ಲ. ಇನ್ನು ನೀರಾವರಿಗೆ ಬಹಳಷ್ಟು ಹಣ ಬೇಕು. ಈಗ ಸುಮ್ಮನೆ ನೀವು ಎರಡು ಸಾವಿರ ಇಸವಿಯೊಳಗಾಗಿ ಇದನ್ನೆಲ್ಲಾ ಪೂರ್ತಿ ಮಾಡುತ್ತೇವೆ. ಕೃಷ್ಣನದಿ ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆ ಎಂದು ಹೇಳು ತ್ತೀರಿ. ಬಹುತೇಕ ನಿಮ್ಮ ಕೈಯಲ್ಲಿ ಇದು ಆಗುವುದಿಲ್ಲ. ಪ್ರತಿ ವರ್ಷ ಎಷ್ಟು ಹಣ ಕೊಡುತ್ತಿ ದ್ದೀರಿ, ಎಷ್ಟು ಖರ್ಚು ಮಾಡುತ್ತಿದ್ದೀರಿ ಎಂದು ಇದರ ಮೇಲೆ ನಮಗೆ ಅಂದಾಜು ಆಗಿದೆ. ಇದಕ್ಕೆ ಹಣಬೇಕು. ಎಂದರೆ ನಿಮಗೆ ಮೆಗಾಸಿಟಿ ಕಲ್ಪನೆ ಇದೆ. ಮೆಗಾಸಿಟಿ ಎನ್ನುವುದಕ್ಕೆ ಖರ್ಚು ಎಷ್ಟು ಮಾಡಬೇಕು. ಎನ್ನುವುದನ್ನು ಇಲ್ಲಿ ಬರೆದಿದ್ದೀರಿ, ೮೦೫ ಕೋಟಿ ಎಂದು ಬರೆದಿದ್ದೀರಿ, ಜಯನಗರದಿಂದ ರಾಜಾಜಿನಗರಕ್ಕೆ ಒಂದು ರಸ್ತೆ ಮಾಡುವುದಕ್ಕೆ ೧೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳುತ್ತೀರಿ. ಇದು ಬಹಳ ಪ್ರೀತಿ ನಮಗೆ. ನಿಜವಾಗಿ ಈ ಬಜೆಟ್ ಯಾರು ತಯಾರು ಮಾಡಬೇಕಾಗಿತ್ತು ಎಂದರೆ ಹಳ್ಳಿಯಲ್ಲಿದಂಥ ವ್ಯಕ್ತಿ ತಯಾರು ಮಾಡಬೇಕಾಗಿತ್ತು. ಜಯನಗರದಿಂದ ರಾಜಾಜಿನಗರಕ್ಕೆ ರಸ್ತೆ ಮಾಡುವುದಕ್ಕೆ ೧೫೦೦ ಕೋಟಿ ರೂಪಾಯಿ. ಆದರೆ ಕೃಷ್ಣ ನಿರನ್ನು ಉಪಯೋಗ ಮಾಡುವುದಕ್ಕೆ ದುಡ್ಡಿಲ್ಲ. ಕೃಷ್ಣ ಇರಿಗೇಷನ್ ಆ್ಯಕ್ಟನ್ನು ಏತಕ್ಕೆ ಮಾಡುವುದಿಲ್ಲ ? ನಾವು ಮಾಡಿಯೇ ಮಾಡುತ್ತೇವೆ ಖಂಡಿತಾ ಎನ್ನುವ ವಿಚಾರ ಇದ್ದರೆ ನಿಮಗೆ ಆತ್ಮವಿಶ್ವಾಸ ಇದ್ದರೆ ಕೃಷ್ಣ ಇರಿಗೇಷನ್ ಆ್ಯಕ್ಟ್ ಎನ್ನುವ ಒಂದು ಕಾನೂನನ್ನು ಮಾಡಿ. ಪ್ರತಿವರ್ಷ ಇಷ್ಟು ಹಣ ಕೊಡುತ್ತೇವೆ, ಯೋಜನೆ ಪೂರ್ತಿ ಮಾಡುತ್ತೇವೆ ಎನ್ನುವುದನ್ನು ಹೇಳಿ. ಅದನ್ನು ಬಿಟ್ಟು ಶಹರದ ಶೋಕಿ ಯೋಜನೆಗಳಿಗೆ ಹೆಚ್ಚು ಹಣವನ್ನು ಕೊಟ್ಟು ನೀರಾವರಿ ಎನ್ನುವುದು ಬಹುತೇಕ ನಿಮ್ಮ ತಲೆಯೊಳಗೂ ಇಲ್ಲ. ನಿಮಗೆ ಆ ಬಗ್ಗೆ ಕಳಕಳಿಯೂ ಸಹ ಇಲ್ಲ ಎಂದು ಈ ಬಜೆಟ್ ಮುಖಾಂತರ ಸ್ಪಷ್ಟವಾಗುತ್ತಿದೆ. ನಾನೇನು ಹೆಚ್ಚು ಮಾತನಾಡುವುದಿಲ್ಲ. ಇನ್ನು ನಮ್ಮ ಗ್ರಾಮೀಣ ಪ್ರದೇಶದ ಜನರಿಗೆ ಕಾಡುವಂಥ ಕೆಲವು ಸಮಸ್ಯೆಗಳ ಬಗ್ಗೆ ಹೇಳಬೇಕಾಗಿದೆ. ಸ್ಟ್ಯಾಂಪ್ ಡ್ಯೂಟಿ ಬಗ್ಗೆ ಹೇಳ ಬೇಕೆಂದರೆ, ಸರ್ಕಾರಕ್ಕೆ ರೆವಿನ್ಯೂ ಬೇಕು. ಅದನ್ನು ನಾನು ಒಪ್ಪುತ್ತೇನೆ. ಭ್ರಷ್ಟಾಚಾರ ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ಯಾವ ರೀತಿ ನಡೆದಿದೆ ಎನ್ನುವುದು ನಿಮಗೆ ಗೊತ್ತಿಲ್ಲ. ಒಂದು ಸಾವಿ

ರೂಪಾಯಿ ಸ್ಟ್ಯಾಂಪ್ ಡ್ಯೂಟಿ ಇತ್ತೆಂದರೆ ಮೂರು ಸಾವಿರ ರೂಪಾಯಿ ಲಂಚವನ್ನು ಕೊಡಬೇಕು. ರೈತ ಕಡಿಮೆ ಧಾರಣೆ ಹಾಕಿ ಸ್ಟ್ಯಾಂಪ್ ಡ್ಯೂಟಿ ಕಡಿಮೆ ಮಾಡಿಕೊಳ್ಳಬೇಕು ಎನ್ನುವುದು ಸಹಜ ಸ್ವಭಾವ ಅವನದು. ಆ ಕಾರಣ ಈ ಪದ್ಧತಿಯನ್ನು ಬಿಟ್ಟು ನೀವೇನು ಜಮೀನನ್ನು ವರ್ಗೀಕರಣ ಮಾಡಿದ್ದೀರಿ, ಈ ಬಾಬಿನಿಂದ ಬರುವಂಥ ರೆವಿನ್ಯೂ ಹೋದವರ್ಷದ್ದು ಎಷ್ಟು, ಈ ವರ್ಷದ್ದು ಎಷ್ಟು, ಎಂದು ವರ್ಗೀಕರಣ ಮಾಡಿ ಅದೆಲ್ಲಕ್ಕೂ ನೀವು ತಾಳೆ ಹಾಕಿ ನೋಡಿ. ಫ್ಲ್ಯಾಟ್ ರೇಟ್ ಮಾಡಿ. 'ಎ' ಕ್ಲಾಸ್ ಜಮೀನಿಗೆ ಒಂದು ಎಕರೆ ಖರೀದಿಯಾದರೆ ಇಷ್ಟು, 'ಬಿ' ಕ್ಲಾಸ್ ಜಮೀನಿಗೆ ಒಂದು ಎಕರೆ ಖರೀದಿಗೆ ಇಷ್ಟು ಎಂದು ಫ್ಲ್ಯಾಟ್ ರೇಟು ಮಾಡಿದರೆ ಈ ಭ್ರಷ್ಟಾಚಾರ ತಪ್ಪಿಹೋಗುತ್ತದೆ. ಅದನ್ನು ಬಿಟ್ಟು ನೀವು ಅವರಿಗೆ ಭ್ರಷ್ಟಾಚಾರಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಬಹಳ ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆದಿದೆ. ರೆವಿನ್ಯೂ ಸಹಿತ ಮೋಸವಾಗುತ್ತಿದೆ ಎನ್ನುವುದನ್ನು ತಾವು ಒಪ್ಪಿಕೊಳ್ಳಬೇಕು. ಅದೇನು ಮಾಡುತ್ತೀರೋ ನೋಡಿ. ನಿಮಗೆ ಇಷ್ಟವಿದ್ದರೆ ಮಾಡಿ. ಇನ್ನು ಎರಡನೆಯ ಒಂದು ದೊಡ್ಡ ಸಮಸ್ಯೆ ಎಂದರೆ ಯಾವುದೋ ಕಾಲಕ್ಕೆ ಆ ಹಳ್ಳಿಯ ವಿಲೇಜ್ ಅಕೌಂಟೆಂಟ್ ಇರುತ್ತಾನಲ್ಲ, ಆತ ಆ ಪಹಣಿ ಪತ್ರದಲ್ಲಿ ಇತರೆ ಹಕ್ಕಿನೊಳಗೆ ಒಂದು ಹೆಸರನ್ನು ಬರೆದಿರುತ್ತಾನೆ. ಅದು ಯಾರದೋ ಹೆಸರು. ಆತನು ಈ ಭೂಮಿಯಲ್ಲಿ ಇಲ್ಲ. ಅದು ಕರ್ನಾಟಕ ಸರ್ಕಾರ ಎಂದು ಹೇಳಿ ಪಹಣಿ ಪತ್ರಿಕೆಯಲ್ಲಿ ಬರೆದುಬಿಟ್ಟಿದ್ದೀರಿ. ಅವರು ಯಾರೂ ಟ್ರಿಬ್ಯೂನಲ್‌ಗೆ ಹೋಗಿಲ್ಲ. ಆಯಾ ಜಮೀನಿನ ಮಾಲೀಕನೇ ಈಗ ಕಬ್ಜೆದಾರ ಅಥವಾ ಸ್ವಾಧೀನದಾರ, ಅವನೇ ಉಳುತ್ತಿದ್ದಾನೆ. ಆದರೆ ಕರ್ನಾಟಕ ಸರ್ಕಾರ ಎಂದು ಹೇಳಿ ಬರೆದುಬಿಟ್ಟಿರಿ. ಈಗ ಅದನ್ನು ಅಣ್ಣತಮ್ಮಂದಿರು ಪಾಲು ತೆಗೆದುಕೊಳ್ಳುವ ಹಾಗಿಲ್ಲ. ಬ್ಯಾಂಕಿಗೆ ಹೋಗಿ ಅದರ ಮೇಲೆ ಸಾಲ ಪಡೆದುಕೊಳ್ಳಬೇಕೆಂದರೂ ಸಾಧ್ಯವಿಲ್ಲ. ಹೋಗಲಿ ನಿಮ್ಮ ಸಾಲ ಬೇಡ. ನಾನೇ ಒಂದು ಕೊಳವೆ ಬಾವಿ ಹಾಕಿ ಅಲ್ಲಿ ಏನೂ ಬೋರ್‌ವೆಲ್ ಹಾಕಿ ಸಬ್‌ಮರ್‌ಸಿಬಲ್ ಪಂಪನ್ನು ಕೂಡಿಸಿಕೊಳ್ಳಬೇಕು ಎಂದರೆ ಕೆಇಬಿಯವರು ಲೈನನ್ನು ಕೊಡುವುದಿಲ್ಲ. ಏಕೆಂದರೆ ಆ ಪಹಣಿ ದಾಖಲೆಯೊಳಗೆ ಕರ್ನಾಟಕ ಸರ್ಕಾರ ಎಂದು ಇದೆ. ನಿನ್ನ ಹೆಸರು ಇಲ್ಲಿ ಇಲ್ಲ ಎಂದು ಹೇಳುತ್ತಾರೆ. ಇದಕ್ಕೆ ಯಾರು ಹೊಣೆಗಾರರು ? ಲಕ್ಷಾಂತರ ರೈತರಿಗೆ ಈಗ ತೊಂದರೆ ಇದೆ. ಆ ಕಾರಣ ಟ್ರಿಬ್ಯೂನಲ್‌ನಲ್ಲಿದ್ದಂಥ ಪೆಂಡಿಂಗ್ ಕೇಸುಗಳನ್ನು ಬಿಟ್ಟು ಉಳಿದ ಎಲ್ಲಾ ಇತರ ಹಕ್ಕಿನಲ್ಲಿರುವಂಥ ಹೆಸರುಗಳನ್ನು ಕಡಿಮೆ ಮಾಡಿ ಆ ಮೂಲ ಮಾಲೀಕರ ಹೆಸರು ಬರೆದು ಕರ್ನಾಟಕ ಸರ್ಕಾರ ಎಂದು ಇರುವುದನ್ನು ಅಳಿಸಿಬಿಡಿ. ಇಲ್ಲದಿದ್ದರೆ ನಿಮ್ಮ ಹೆಸರಿನಲ್ಲಿ ಪ್ರತಿ ದಿವಸ ರೈತರು ಗೋಳಿಡಬೇಕಾಗುತ್ತದೆ. ನಾವು ಬದುಕುತ್ತೇವೆ ಎಂದು ಹೇಳಿದರೂ ಇದಕ್ಕೆ ಅನುಕೂಲವಿಲ್ಲವಲ್ಲ. ಆ ಕಾರಣ ಇತರ ಹಕ್ಕಿನೊಳಗಿರುವಂಥ ಎಲ್ಲಾ ಹೆಸರುಗಳನ್ನು ಕಡಿಮೆ ಮಾಡಬೇಕು. ಇಲ್ಲದಿದ್ದರೆ ಅವರು ಟ್ರಿಬ್ಯೂನಲ್‌ಗೆ ಹೋಗಲಿ. ಬೇಡ ಎಂದು ಹೇಳುವುದಿಲ್ಲ. ಅವರು ಟ್ರಿಬ್ಯೂನಲ್‌ಗೂ ಹೋಗಿಲ್ಲ. ಅವರು ಭೂಮಿಯ ಮೇಲೆ ಸಹ ಇಲ್ಲ. ಸತ್ತುಹೋಗಿದ್ದಾರೆ. ಆಕಾರಣ ದಯಮಾಡಿ ಇದರ ಬಗ್ಗೆ ತಾವು ಸ್ವಲ್ಪ ಆಲೋಚನೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಿ. ಇದಕ್ಕೇನು ದುಡ್ಡು ಕಾಸು ಏನೂ ಬೇಕಾಗಿಲ್ಲ. ಏತಕ್ಕೆ ನಿಮ್ಮ ಹೆಸರನ್ನು ಇಟ್ಟುಕೊಂಡು ಕುಳಿತಿದ್ದೀರಿ ? ಮಾತ್ರೊಂದು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಮಾದಕ ವಸ್ತುಗಳ ವಿರುದ್ಧ ಒಂದು ಆಂದೋಲನ ಮಾಡುತ್ತೇವೆ ಎಂದು ಬರೆದಿದ್ದಾರೆ. ಇವರು ಆಂದೋಲನ ಮಾಡುವುದು ಬೇಕಾಗಿಲ್ಲ. ಗ್ರಾಮೀಣ ಪ್ರದೇಶದೊಳಗೆ ಈ ಸಾರಾಯಿ ಅಂಗಡಿಗಳನ್ನು ಬಂದ್ ಮಾಡಿಬಿಟ್ಟರೆ ಸಾಕು. ಶಹರದೊಳಗೆ ಇವರು ಇಟ್ಟುಕೊಳ್ಳಲಿ. ಅಲ್ಪಸ್ವಲ್ಪ ರೆವಿನ್ಯೂ ಕಡಿಮೆ ಬರಬಹುದು. ಏನೂ ಹಳ್ಳಿಯ ಸಂಸ್ಕೃತಿ ಸಂಪೂರ್ಣ ಹಾಳಾಗಿ ಹೋಗಿದೆ, ನಿಜವಾಗಿಯೂ ನಿಮಗೆ ಆ ಸಂಸ್ಕೃತಿಯ ಬಗ್ಗೆ ಹಳ್ಳಿಯ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸ್ವಲ್ಪ ಏನಾದರೂ ಕಳಕಳಿ ಇದ್ದರೆ ಈ ಸಾರಾಯಿ ಅಂಗಡಿಗಳನ್ನು ಸಂಪೂರ್ಣ ಬಂದ್ ಮಾಡಿಬಿಡಿ. ಆಂದೋಲನ ಮಾಡುವುದು ನಮಗೆ ಬೇಕಾಗಿಲ್ಲ. ನಿಮ್ಮ ಆಂದೋಲನ ಯಶಸ್ವಿಯೂ ಆಗುವುದಿಲ್ಲ. ಏಕೆಂದರೆ ಕುಡುಕರನ್ನು ನೀವು ಆಂದೋಲನದಲ್ಲಿ ಸೇರಿಸಬಹುದು. ಆದರೆ ಇದು ಯಶಸ್ವಿಯಾಗುವಂಥದ್ದಲ್ಲ. ಆ ಕಾರಣ ತಾವು ಗ್ರಾಮೀಣ ಪ್ರದೇಶದಲ್ಲಿ ಈ ಸಾರಾಯಿ ಅಂಗಡಿಗಳನ್ನು ಬಂದ್ ಮಾಡುವಂಥ ಒಂದು ಕ್ರಮ ಕೈಗೊಂಡರೆ ಬಹುತೇಕ ನಮ್ಮ ಜನರಿಗೆ ಬಹಳ ದೊಡ್ಡ ಉಪಕಾರವಾಗುತ್ತದೆ. ನಾವು ಬಹುತೇಕ ರೈತರು ಇದರಿಂದ ಎಂಟು ನೂರು ಕೋಟಿ ರೂಪಾಯಿ ಆದಾಯ ಬರುತ್ತಿದೆ ಎಂದು ಹೇಳುತ್ತಿದ್ದೀರಿ, ಅಂದರೆ ಸಾರಾಯಿ ಎಷ್ಟು ಕುಡಿಯುತ್ತಿರಬಹುದು ? ಎರಡು ಸಾವಿರ ಮೂರು ಸಾವಿರ ಕೋಟಿ ರೂಪಾಯಿಗಳಷ್ಟು ಸೆರೆ ಕುಡಿಯುತ್ತಿರಬಹುದಲ್ಲ. ಅದರೊಳಗೆ ಹಳ್ಳಿಯ ಜನರು ಹೆಚ್ಚು ಸಾರಾಯಿ ಕುಡಿಯುವಂಥವರು. ನಾವೇನು ಬ್ರಾಂದಿ ವಿಸ್ಕಿ ಕುಡಿಯುವಂಥವರಲ್ಲ. ಈ ಸಾರಾಯಿಂದ ಎರಡು – ಮೂರು ಸಾವಿರ ಕೋಟಿ ರೂಪಾಯಿ ಹಳ್ಳಿಯ ಪ್ರದೇಶಕ್ಕೆ ನಷ್ಟ ಆ ಆದಾಯವನ್ನು ಬಾಡವಾಳವನ್ನಾಗಿ ಹೂಡಿದರೆ ಬಹುತೇಕ ನಿಮ್ಮ ಸರ್ಕಾರದ ಧನ ಸಹಾಯ ನಮಗೆ ಬೇಕಾಗಿಲ್ಲ. ನಾವೇ ಪ್ರಗತಿಯನ್ನು ಮಾಡಿಕೊಳ್ಳುತ್ತಿದ್ದೇವೆ. ಅದನ್ನು ಮಾತ್ರ ಸಂಪೂರ್ಣ ಬಂದ್ ಮಾಡಬೇಕು ಎಂದು ಕೇಳುತ್ತಿದ್ದೇನೆ. ಮತ್ತೊಂದು

ವಿಚಾರವೆಂದರೆ, ಯಾವುದೋ ಬ್ರಿಟಿಷ್ ಕಾಲಕ್ಕೆ ಈ ನಮ್ಮ ಜಮೀನುಗಳನ್ನು ಸರ್ವೆ ಮಾಡಿಸಿದರು. ಅಳತೆ ಮಾಡಿಸಿ ಅಲ್ಲಿ ಹದಿಕಲ್ಲುಗಳನ್ನು ನೆಡಿಸಿದರು. ಈಗ ಅಲ್ಲಿ ಒಂದೂ ಇಲ್ಲ. ಅದು ಪ್ರತಿ ಹತ್ತು ವರ್ಷಕ್ಕೊಮ್ಮೆ ಮಾಡಿಸಬೇಕು ಎನ್ನುವ ಒಂದು ನಿಯಮ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಪ್ರತಿ ಮೂವತ್ತು ವರ್ಷಕ್ಕೊಮ್ಮೆ ಎಂದು ಇದೆ.

ಶ್ರೀ ಬಿ ಆರ್. ಪಾಟೀಲ್.—ಎಷ್ಟು ವರ್ಷ ಆಯಿತು ಎಂದು ಹೇಳಿ ನೋಡೋಣ. ಒಂದು ಕಲ್ಲು ಸಹ ಉಳಿದಿಲ್ಲ. ಇದರ ಬಗ್ಗೆ ಪ್ರತಿದಿನ ಜಗಳ. ಅದನ್ನು ಸರ್ವೆ ಮಾಡಿಸಿ ಹಾದಿಕಲ್ಲುಗಳನ್ನು ನೆಡಿಸಿರಿ, ನಿಮ್ಮ ಬೊಕ್ಕಸದಿಂದ ಹಣವನ್ನು ಕೊಡಬೇಡಿ. ಅದು ಎಷ್ಟು ಒಂದು ಎಕರೆಗೆ ಖರ್ಚು ಬರುತ್ತದೆಯೋ ಅದನ್ನು ನಾವು ಕೊಡುತ್ತೇವೆ. ಭೂಕಂದಾಯದ ಜೊತೆಗೆ ವಸೂಲು ಮಾಡಿ. ಆದರೆ ಅದರ ಒಂದು ಕರ್ಮಕಾಂಡವನ್ನು ಹೇಳಬಾರದು. ನಾನು ಹಳ್ಳಿಯಲ್ಲಿರುವಂಥ ಮನುಷ್ಯ. ಪ್ರತಿದಿನ ಇದರ ಬಗ್ಗೆ ಸಾಕಷ್ಟು ಜಗಳ ಆಗುತ್ತಿದೆ. ಸರ್ಕಾರಕ್ಕೆ ಕೇಳುವುದಕ್ಕೆ ಹೋದರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಕೊಡುತ್ತೇವೆ ಎಂದು ಹೇಳುತ್ತೀರಿ. ಆದರೆ ಅದನ್ನು ವಸೂಲು ಮಾಡುವುದಕ್ಕೆ ಬೆನ್ನು ಹತ್ತುತ್ತೀರಿ,

ಶ್ರೀ ಬಿ. ಆರ್. ಪಾಟೀಲ್.—ಕಂದಾಯವನ್ನು ಕೊಡುತ್ತಿಲ್ಲವೇ ನಾವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಂದಾಯವನ್ನು ಕೊಡುತ್ತೇವೆ ಎಂದು ಹೇಳುತ್ತಾರೆ. ಕಂದಾಯದ ಜೊತೆಯಲ್ಲಿ ಸರ್ವೆ ಫೀಜು ನಾವು ವಸೂಲು ಮಾಡಿದರೆ ಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ ನಾವು ಕೊಟ್ಟಿದ್ದನ್ನು ವಾಪಸ್ ಕೊಡಿ ಎಂದು ಕೇಳುವುದಕ್ಕೆ ಹೋದರೆ ನಮಗೆ ಬಡಗಿ ತೆಗೆದುಕೊಂಡು ಬೆನ್ನು ಹತ್ತುತ್ತೀರಿ.

ಶ್ರೀ ಬಿ. ಆರ್. ಪಾಟೀಲ್.—ಮಾನ್ಯ ಮಂತ್ರಿಗಳು ಸ್ವಲ್ಪ ರಿಕಾರ್ಡನ್ನು ತೆಗೆಸಿ ನೋಡಬೇಕು. ಬೆಳಗಾಂ ಜಿಲ್ಲೆಯಲ್ಲಿ ರೈತ ಸಂಘಟನೆ ಬಹಳ ಜೋರಾಗಿದೆ. ಅಲ್ಲಿ ವಸೂಲಾತಿ ಪರ್ಸೆಂಟೇಜ್ ಸ್ವಲ್ಪ ಹೇಳಿ. ಸಹಕಾರಿ ಸಂಘದ ವಸೂಲಾತಿ. ಕಂದಾಯದ ವಸೂಲಾತಿ, ಬೇರೆ ಎಲ್ಲಾ ಇಲಾಖೆಯಿಂದ ವಸೂಲಾತಿ ಆ ಜಿಲ್ಲೆಯಲ್ಲಿದ್ದಷ್ಟು ಬೇರೆ ಜಿಲ್ಲೆಯಲ್ಲಿದೆಯೇ ಎಂದು ಹೇಳಿ ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಹಾಗೆ ಮಂಡ್ಯ ಇದೆಯಲ್ಲ. ರಾಯಚೂರು ನಿಮ್ಮ ಹಾಗೆ ಇದೆಯಲ್ಲ, ಶಿವಮೊಗ್ಗ ನಿಮ್ಮ ಹಾಗೆ ಇದೆಯಲ್ಲ. ಏತಕ್ಕೆ ವಸೂಲಿ ಆಗುವುದಿಲ್ಲ?

ಶ್ರೀ ಬಿ. ಆರ್. ಪಾಟೀಲ್.—ಅಲ್ಲಿಯ ಪರಿಸ್ಥಿತಿ ಬೇರೆ ಇರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ರೈತ ಸಂಘದ ಮುಖಂಡರು. ಕರ್ನಾಟಕದ ಬಗ್ಗೆ ಮಾತನಾಡಬೇಕೇ ಹೊರತು ನಿಮ್ಮದೊಂದು ಜಿಲ್ಲೆಯ ಬಗ್ಗೆ ಮಾತನಾಡಿದರೆ ಹೇಗೆ?

ಶ್ರೀ ಬಿ. ಆರ್. ಪಾಟೀಲ್.—ನಾವು ಖಂಡಿತಾ ಕೊಡುತ್ತೇವೆ. ಇದನ್ನು ಘೋಷಣೆ ಮಾಡಿಸಿ. ರೈತರ ಖರ್ಚಿನಿಂದ ನಾವು ಸರ್ವೆ ಮಾಡಿಸುತ್ತೇವೆ ಎಂದು ಹೇಳಿ ಘೋಷಣೆ ಮಾಡಿಸಿ. ಅದರ ಬಗ್ಗೆ ಪ್ರತಿಕ್ರಿಯೆ ಯಾವ ರೀತಿ ಬರುತ್ತದೆ ಎನ್ನುವುದನ್ನು ನೋಡೋಣ. ಒಂದು ಎಕರೆಗೆ ನಾಲ್ಕು ರೂಪಾಯಿ, ಎಂಟು ರೂಪಾಯಿ, ಹತ್ತು ರೂಪಾಯಿ ಖರ್ಚು ಬೀಳಲಿ. ಬಹಳ ದೊಡ್ಡ ಜಮೀನುದಾರರು ನಮ್ಮಲ್ಲಿ ಇಲ್ಲ. ಹತ್ತು ಎಕರೆ, ಇಪ್ಪತ್ತು ಎಕರೆ ಅಂದರೆ ಹೆಚ್ಚಾಯಿತು. ಎಕರೆಗೆ ಐವತ್ತು ರೂಪಾಯಿ ಬಿದ್ದರೂ ಕೊಡುವುದಕ್ಕೂ ತಯಾರು ಇದ್ದಾರೆ ಎನ್ನುವ ರೈತರ ಒಂದು ಒಳಗಿನ ಮನಸ್ಸನ್ನು ಅರ್ಥ ಮಾಡಿಕೊಂಡು ನಾನು ಮಾತನಾಡುತ್ತಿದ್ದೇನೆಯೇ ಹೊರತಾಗಿ ನೀವು ಹೇಳುತ್ತೀರಲ್ಲ, ಆ ರೀತಿ ರೈತನ ಮನಸ್ಸಿನಲ್ಲಿ ಇಲ್ಲ. ನಿಜವಾಗಿಯೂ ರೈತ ಎಂದೂ ಅಂಥ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದವನಲ್ಲ. ಮೊದಲು ಬೇರೆಯವರಿಗೆ ಊಟ ಮಾಡಿಸಿ ನಂತರ ಊಟ ಮಾಡಬೇಕು ಎನ್ನುವ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದಂಥ ರೈತರಿಗೆ ತಾವು ಅಪಚಾರ ಮಾಡಬಾರದು. ಆದ್ದರಿಂದ ಇದೊಂದು ಭೂಮಾಪನ ಮಾಡಿಸುವಂಥ ಕೆಲಸವನ್ನು ಮಾಡಿಸಿ. ಇನ್ನು ಆಡಳಿತದ ಬಗ್ಗೆ ನಮಗಂತೂ ವಿಶ್ವಾಸ ಹೊರಟು ಹೋಗಿದೆ, ಭ್ರಷ್ಟಾಚಾರವಂತೂ ಬಹಳಷ್ಟು ಹೆಚ್ಚಾಗಿದೆ. ಆದರಲ್ಲೂ ಗ್ರಾಮೀಣ ಮಟ್ಟದಲ್ಲಿ ಇದರ ಹಾವಳಿ ಹೇಳತೀರದಾಗಿದೆ. ಭ್ರಷ್ಟಾಚಾರ ಎಲ್ಲಾ ಕಾಲಕ್ಕೂ ಇರುವುದನ್ನು ಒಪ್ಪುತ್ತೇನೆ. ಆದರೆ, ಅದನ್ನು ಕಡಿಮೆ ಮಾಡುವುದಕ್ಕೆ, ನಿಯಂತ್ರಿಸುವುದಕ್ಕೆ ಸರ್ಕಾರವೇನಾದರೂ ಕ್ರಮ ಕೈಗೊಂಡಿದೆಯೇ ಎನ್ನುವುದು ನನ್ನ ಪ್ರಶ್ನೆ, ಪ್ರತಿ ದಿವಸವೂ ನಾವು ದೂಳು ಜಾಡಿಸುತ್ತೇವೆ, ಅದು

ಬೀಳುತ್ತಿರುತ್ತದೆ. ಧೂಳು ಬಿದ್ದೇ ಬೀಳುತ್ತದೆಂದು ಜಾಡಿಸುವುದನ್ನು ಬಿಡಬೇಕೆ? ಕಸ ಹೊಡೆಯುವುದನ್ನು ಬಿಡಬೇಕೆ? ಭ್ರಷ್ಟಾಚಾರ ನಿಯಂತ್ರಿಸಲು ನಿಮ್ಮ ಕ್ರಮಗಳೇನು? ಏನು ಪ್ರಯತ್ನ ಮಾಡಿದ್ದೀರಿ? ಕಳೆದ ನಾಲ್ಕು ವರ್ಷಗಳಿಂದ ಏನೂ ಪ್ರಯತ್ನ ಮಾಡಿಲ್ಲ. ಇದು ನಿಮಗೇ ಬಿಟ್ಟಂಥ ವಿಷಯ. ಇನ್ನು ಲಾಟರಿ ಬಗ್ಗೆ ಹೇಳಬೇಕೆಂದರೆ, ಇದೊಂದು ಸರ್ಕಾರಿ ಜೂಜು. ಇದನ್ನು ರದ್ದುಗೊಳಿಸಿ ಎಂದು ಹೇಳುತ್ತಿದ್ದೇನೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ಆದಾಯವೆಷ್ಟು? 'ಲಾಟರಿ' ಎಂಬುದು ಹೋಗಿ ಸಿಂಗಲ್ ಡಿಜಿಟ್ ಲಾಟರಿ ಎಂದು ಬಂತು. ಸಿಂಗಲ್ ಡಿಜಿಟ್ ಲಾಟರಿ ಎಂದರೂ ಒಂದೇ, ಮಟಕಾ ಎಂದರೂ ಒಂದೇ. ಅಂತೂ ಸರ್ಕಾರದವರೇ ಮಟಕಾ ಆಡಿಸುವುದಕ್ಕೆ ವ್ಯವಸ್ಥೆ ಮಾಡಿಕೊಟ್ಟಿದ್ದಾರೆಂದರೆ ದೇಶವಾದರೂ ಹೇಗೆ ಉಳಿಯುತ್ತದೆ? ಆ ಕಾರಣ ಲಾಟರಿಯಾಗಿರಲಿ, ಸಿಂಗಲ್ ಡಿಜಿಟ್ ಲಾಟರಿಯಾಗಿರಲಿ, ಮಟಕಾ ಆಗಿರಲಿ, ಇವೆಲ್ಲವನ್ನೂ ಸರ್ಕಾರ ಸಂಪೂರ್ಣವಾಗಿ ಬಂದ್ ಮಾಡಿ ಗ್ರಾಮಾಂತರ ಪ್ರದೇಶದ ಜನರು ನೆಮ್ಮದಿಯಿಂದ, ಮರ್ಯಾದೆಯಿಂದ ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಉಪಾಧ್ಯಕ್ಷರೆ, ೧೯೯೪-೯೫ರ ಆಯವ್ಯಯ ಪತ್ರವನ್ನು ಈ ಸದನದಲ್ಲಿ ೨೧ನೇ ತಾರೀಖಿನಂದು ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದರು. ಆಗ ಮುಖ್ಯ ಮಂತ್ರಿಗಳ ಸುದೀರ್ಘ ಭಾಷಣವನ್ನು ವಿರೋಧ ಪಕ್ಷದ ಎಲ್ಲಾ ಸದಸ್ಯರುಗಳೂ ಕುಳಿತುಕೊಂಡು ಆಲಿಸಿದರು. ಇವೊತ್ತು ವಿರೋಧ ಪಕ್ಷದ ಬಹುತೇಕ ಸದಸ್ಯರು ಆಯವ್ಯಯ ಪತ್ರದ ಮೇಲಿನ ಚರ್ಚೆಯಲ್ಲಿ ಭಾಗವಹಿಸದೇ ವಂಚಿತರಾಗಿದ್ದಾರೆ. ಇದನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಯಾರು ಈ ಸದನದಲ್ಲಿ ವಿರೋಧ ಪಕ್ಷದ ನಾಯಕರೆಂದು ಅಧಿಕೃತವಾಗಿ ನೇಮಕವಾಗಿದ್ದಾರೋ ಅವರು ಸಾಮಾನ್ಯವಾಗಿ ಆಯವ್ಯಯ ಪತ್ರದ ಮೇಲಿನ ಚರ್ಚೆಯನ್ನು ಪ್ರಾರಂಭಿಸುವುದು ಸತ್ಸಂಪ್ರದಾಯ, ಆದರೆ ಯಾವುದೋ ಗೊಂದಲದಲ್ಲಿ ಆ ಸತ್ಸಂಪ್ರದಾಯಕ್ಕೆ ಇವೊತ್ತು ಕೊಡಲಿ ಪೆಟ್ಟು ಬಿದ್ದಿದೆ. ಇದು ಪ್ರಜಾಪ್ರಭುತ್ವದ ಬೆಳವಣಿಗೆಗೆ ಅಪಾರವಾದ ಅಡ್ಡಿ ಆತಂಕವನ್ನೊಡ್ಡಿದೆ. ಇದಕ್ಕೆ ಕಾರಣ ಏನೇ ಇರಬಹುದು, ಆಡಳಿತ ಪಕ್ಷದವರಿರಬಹುದು, ವಿರೋಧ ಪಕ್ಷದವರಿರಬಹುದು, ಈ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಬಗೆಹರಿಸುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಸರ್ಕಾರ ವಿಫಲವಾಗಿದೆಯೆನ್ನುವ ಮಾತನ್ನು ಹೇಳುವಾಗ ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ತಾವು (ಉಪಾಧ್ಯಕ್ಷರು) ಯಾವುದೇ ಒಂದು ಪಕ್ಷದ ಪರವಾಗಿ ಮಾತನಾಡತಕ್ಕಂಥವರಲ್ಲ, ತಾವು ಅಲಂಕರಿಸಿರುವ ಪೀಠ ಪರಮ ಪವಿತ್ರವಾದುದು. ಆಡಳಿತ ಪಕ್ಷದವರು ತಮ್ಮ ಕಾರ್ಯ ನಿರ್ವಹಣೆಯಲ್ಲಿ ಮುಗ್ಗರಿಸಿದಾಗ, ವಿರೋಧ ಪಕ್ಷದವರು ಹಠಮಾರಿತನ ಮಾಡಿದಾಗ ತಾವು ತಮ್ಮದೇ ಆದಂಥ ಸೂತ್ರಗಳನ್ನು ಅಳವಡಿಸುವುದರ ಮೂಲಕ ಎರಡು ಗುಂಪಿನ ಮುಖಂಡರುಗಳನ್ನು ಕರೆದು ಒಂದಲ್ಲ, ಎರಡಲ್ಲ, ಹತ್ತು ಬಾರಿ ಮಾತನಾಡಿ ಆಯವ್ಯಯ ಪತ್ರದ ಮೇಲಿನ ಚರ್ಚೆಯಲ್ಲಿ ವಿರೋಧ ಪಕ್ಷಗಳ ಎಲ್ಲಾ ಸದಸ್ಯರುಗಳು ಭಾಗವಹಿಸತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕಾಗಿತ್ತು. ಗ್ರಾಮ ಪಂಚಾಯಿತಿಯ ಚುನಾವಣೆಗಳಲ್ಲಿ ಆಗಿರತಕ್ಕ ಅನ್ಯಾಯದ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ನಿರಂತರವಾಗಿ ಒತ್ತಡವನ್ನು ಸರ್ಕಾರದ ಮೇಲೆ ತಂದು, ಧರಣಿಯನ್ನು ಮಾಡಿ ಸರ್ಕಾರದ ಮೇಲೆ ಪ್ರಭಾವವನ್ನು ಬೀರಿದ್ದರು ಆದರೆ ಅಂತಿಮವಾಗಿ ಧರಣಿಯನ್ನು ನಡೆಸಿದಂಥ ಸದಸ್ಯರ ಮೇಲೆ ಸರ್ಕಾರ ತೆಗೆದುಕೊಂಡಂಥ ಕ್ರಮವನ್ನು ನಾನು ಉಚಿತವೆಂದು ಅಂದುಕೊಂಡಿಲ್ಲ. ತಮ್ಮ ತೀರ್ಪಿಗೆ ನಾನು ವಿರೋಧವಾಗಿ ಮಾತನಾಡುತ್ತಿಲ್ಲ. ಈ ಒಂದು ಉಲ್ಬಣವಾದಂಥ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗಿತ್ತೇ ಎನ್ನತಕ್ಕ ಒಂದೇ ಒಂದು ಪ್ರಶ್ನೆ ನನ್ನದು. ಆ ಒಂದು ಉಲ್ಬಣವಾದಂಥ ಪರಿಸ್ಥಿತಿ ಉಂಟಾಗಿರಲಿಲ್ಲ ಎನ್ನತಕ್ಕ ಮಾತನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು.—ಮಾನ್ಯ ವಾಟಾಳ್‌ನಾಗರಾಜ್‌ರವರೆ, ದಯವಿಟ್ಟು ಬಜೆಟ್‌ನ ಬಗ್ಗೆ ಮಾತನಾಡಿ ತಾವು ಅದನ್ನು ಬಿಟ್ಟು ಬೇರೆಯದನ್ನು ಮಾತನಾಡುತ್ತಿದ್ದೀರಲ್ಲ ?

ಶ್ರೀ ವಾಟಾಳ್‌ನಾಗರಾಜ್.—ತಾವು ವಿರೋಧ ಪಕ್ಷದವರನ್ನು ಹೊರಗೆ ಇಟ್ಟು ಸಭೆ ಮಾಡಿದರೆ ಇನ್ನೇನು ಮಾಡಬೇಕು. ತಾವು ತಾಳ್ಮೆಯಿಂದ ನನ್ನ ಮಾತನ್ನು ಕೇಳುತ್ತೇನೆಂದರೆ ನಾನು ಮಾತನಾಡುತ್ತೇನೆ. ಇಲ್ಲದಿದ್ದರೆ ನಾನು ಕುಳಿತುಕೊಳ್ಳುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಉಪಾಧ್ಯಕ್ಷರು.—ತಾವು ಬಜೆಟ್ ಬಗ್ಗೆ ಮಾತನಾಡಿ. ಆಗಿಹೋಗಿರುವ ವಿಷಯದ ಬಗ್ಗೆ ಮಾತನಾಡಿದರೆ ಏನು ಪ್ರಯೋಜನ ?

ಶ್ರೀ ಪಾಟೀಲ್‌ನಾಗರಾಜ್.—ತಾವು ಬಹಳ ಬುದ್ಧಿವಂತರು, ತಿಳುವಳಿಕೆಯುಳ್ಳವರು, ನಿಮ್ಮ ಮೇಲೆ ನನಗೆ ಅಪಾರವಾದಂಥ ಅಭಿಮಾನ, ಗೌರವವಿದೆ. ಆದರೆ ತಮಗೆ ನನ್ನ ಮಾತನ್ನು ಕೇಳತಕ್ಕಂಥ ಸೌಜನ್ಯ ಇಲ್ಲವೆಂದರೆ ಹೇಗೆ ? ಇಲ್ಲದಿದ್ದರೆ ಯಾವ್ಯಾವುದನ್ನು ನಾನು ಮಾತನಾಡಬೇಕೆಂದು ಪಟ್ಟಿ ಮಾಡಿಬಿಡಿ. ನಾನು ಬಜೆಟ್ ಬಗ್ಗೆಯೇ ಮಾತನಾಡುತ್ತಿರುವುದು. ಈ ಪ್ರಜಾಪ್ರಭುತ್ವದ ಸತ್ಸಂಪ್ರದಾಯವೇನಿದೆ ಅದನ್ನು ಪಾಲನೆ ಮಾಡಬೇಕಾಗುತ್ತದೆ. ನಾನು ಈ ಸದನದಲ್ಲಿ ೧೯೫೨ರಲ್ಲಿ ಸಹ ಸದಸ್ಯನಾಗಿದ್ದೆ. ಅದು ಒಂದು ಸುವರ್ಣ ಯುಗ. ಈ ಸದನದ ತುಂಬ ಶಾಸಕರು ಕಾಣುತ್ತಿದ್ದರು. ಆದರೆ ಇವತ್ತು ಈ ಸದನದಲ್ಲಿ ಹೆಚ್ಚಾಗಿ ಖಾಲಿ ಕುರ್ಚಿಗಳೇ ಕಾಣುತ್ತಿವೆ. ೧೯೫೨ ರಿಂದ ೧೯೫೭ರ ಅವಧಿಯಲ್ಲಿ ಎಂತೆಂಥ ಮಹನಿಯರುಗಳು ಈ ಸದನದಲ್ಲಿ ಇದ್ದರೆಂದರೆ, ಅದು ತಮಗೂ ಗೊತ್ತಿದೆ, ಮುಂದಿನ ಸಾಲಿನಲ್ಲಿ ಈ ರಾಜ್ಯಕ್ಕೆ ಅಪಾರವಾದಂಥ ಸೇವೆಯನ್ನು ಮಾಡಿದಂಥ ಹಿರಿಯರೆಲ್ಲರೂ ಇದ್ದರು. ಅವರುಗಳು ನಮ್ಮ ಜೊತೆಯಲ್ಲಿ ಯಾವಾಗಲೂ ಇರುತ್ತಿದ್ದರು. ಮೂರನೇ ಪೀಠದಲ್ಲಿ ಶ್ರೀಮಾನ್ ಸಾಹುಕಾರ ಚೆನ್ನಯ್ಯನವರು ಪ್ರಪ್ರಥಮ ಬಾರಿಗೆ ಈ ಸದನಕ್ಕೆ ದಯಮಾಡಿಸಿದ್ದರು. ಅಂಥ ಸಂದರ್ಭದಲ್ಲಿ ವಿರೋಧಪಕ್ಷದಲ್ಲಿ ನಾನಾ ರೀತಿಯಾದ ಪಕ್ಷಗಳು ಸೇರಿ ಒಂದೇ ಪಕ್ಷದ ಅಡಿಯಲ್ಲಿ ಇಲ್ಲಿ ಕೆಲಸ ಮಾಡತಕ್ಕದ್ದು ಉಂಟು. ಶ್ರೀಮಾನ್ ಎಸ್. ಶಿವಪ್ಪನವರು ಅಂದು ವಿರೋಧ ಪಕ್ಷದ ನಾಯಕರಾಗಿದ್ದರು. ಅಂಥ ಸಂದರ್ಭದಲ್ಲೂ ಸಹ ತುಂಬಿದ ಸಭೆಯಲ್ಲೂ ಕೂಡ ಇಂಥ ಅನೇಕ ಚರ್ಚೆಗಳು, ಸಮಸ್ಯೆಗಳು ಉದ್ಭವಿಸಿದಾಗ ಅದನ್ನು ಎಲ್ಲರೂ ಸೇರಿ ನಿವಾರಣೆ ಮಾಡಿರತಕ್ಕದ್ದು ನಿಜ. ಅವತ್ತಿನ ಪರಿಸ್ಥಿತಿಯಲ್ಲಿ ಈ ಸದನ ಪರಮ ಪವಿತ್ರವಾದಂಥ ಮನೆಯಾಗಿತ್ತು. ಇದು ಪ್ರಜಾಪ್ರಭುತ್ವದ ದೇಗುಲ, ಅಂಥ ದೇಗುಲದ ಶಕ್ತಿಯೇ ಹೀನವಾದರೆ, ನಾಳೆ ಇನ್ನಾವ ಮನೆ ಪ್ರಜಾಪ್ರಭುತ್ವಕ್ಕೆ ಹೊಣೆಯಾಗುತ್ತದೆ ? ಯಾವುದೂ ಇಲ್ಲ. ಇದೊಂದೇ ಒಂದು ಪವಿತ್ರವಾದಂಥ ದೇಗುಲ, ತಾವು ನೋಡಿರಬಹುದು. ಹಿಂದೆ ಈ ಸದನದ ಮೇಲು ಭಾಗದ ಗ್ಯಾಲರಿಯಲ್ಲಿ ಒಂದು ಕುರ್ಚಿಯೂ ಸಹ ಖಾಲಿ ಇರುತ್ತಿರಲಿಲ್ಲ. ಜನರಿಂದ ತುಂಬಿರುತ್ತಿತ್ತು. ಜನರ ಜಾತ್ರೆಯೇ ಇರುತ್ತಿತ್ತು. ಈ ಸದನದಲ್ಲಿ ಯಾವಾಗಲೂ ಕನಿಷ್ಟ ಪಕ್ಷ ನೂರಾ ಐವತ್ತು ಜನರು ಸದಸ್ಯರುಗಳು ಇರುತ್ತಿದ್ದರು. ಆಗ ಈ ರಾಜ್ಯದ ಇತಿಹಾಸದಲ್ಲಿ ಎಂದೋ ಒಂದು ಸಲ ಕೋರಂನ ಘಂಟೆಯನ್ನು ಹಾಕಿದ್ದರು. ಮತ್ತು ಆ ಕಾಲದಲ್ಲಿ ವಿರೋಧ ಪಕ್ಷದ ಸದಸ್ಯರು ಯಾವಾಗಲೂ ತುಂಬಿರುತ್ತಿದ್ದರು. ಒಂದು ಕುರ್ಚಿಯೂ ಸಹ ಖಾಲಿ ಇರುತ್ತಿರಲಿಲ್ಲ, ಆಗ ಮಂತ್ರಿಗಳು ಹೇಗೆ ಇರುತ್ತಿದ್ದರೆಂದರೆ, ಸದಸ್ಯರು ಯಾರು ಏನು ಹೇಳುತ್ತಾರೋ, ಏನು ವಿಷಯ ಬರುತ್ತದೋ ಎಂದು ಇಲ್ಲಿಯೇ ಇದ್ದು ತುದಿಗಾಲಿನಲ್ಲಿ ಉತ್ತರವನ್ನು ಹೇಳತಕ್ಕ ಶಕ್ತಿಯುಳ್ಳವರಾಗಿ ಪಾಂಡಿತ್ಯವನ್ನು ಪಡೆದಿರತಕ್ಕವರಾಗಿದ್ದರು ಅದನ್ನು ನಾನು ಕಂಡಿದ್ದೇನೆ. ಆ ದೃಶ್ಯವನ್ನು ನಾನು ನೋಡಿದ್ದೇನೆ. ಇವತ್ತು ಆಯವ್ಯಯವನ್ನು ಇಲ್ಲಿ ಮಂಡನೆ ಮಾಡಿದ್ದಾರೆ. ಆಯವ್ಯಯವನ್ನು ಮಂಡನೆ ಮಾಡುವುದೆಂದರೆ ಈ ಶಾಸನ ಸಭೆಯಲ್ಲಿ ಪ್ರಪ್ರಥಮವಾಗಿ ಶಾಸನ ಸಭೆಯ ಪ್ರಾರಂಭದ ದಿನವಿದ್ದಂತೆ. ಅದು ಒಂದು ರೀತಿಯಲ್ಲಿ ಪ್ರಜಾಪ್ರಭುತ್ವದ ಹಬ್ಬದ ದಿನ. ಪ್ರಜಾ ಪ್ರತಿನಿಧಿಗಳು ಆಯವ್ಯಯವನ್ನು ಚರ್ಚೆ ಮಾಡತಕ್ಕಂಥ ಪ್ರಥಮ ದಿನ. ಅಂದರೆ ಈ ದಿನ ನಿಜವಾಗಿಯೂ ಪ್ರಾಮುಖ್ಯವಾದಂಥ ದಿನ. ಆದರೆ ಈಗ ಮೊದಲನೆಯ ದಿವಸ ಆಯವ್ಯಯವನ್ನು ಮಂಡಿಸಿದ ನಂತರ ಎರಡನೆಯ ದಿವಸವೇ ಸಂಪೂರ್ಣವಾಗಿ ಸದಸ್ಯರುಗಳ ಪೀಠಗಳು ಖಾಲಿಯಾಗಿವೆ. ಮೇಲೆ ಗ್ಯಾಲರಿ ಇರತಕ್ಕದ್ದು ನಾವು ನೀವೇ ಕುಳಿತುಕೊಂಡು ಯಾವುದೋ ಒಂದು ಮಿಲಿಟರಿ ಪ್ರಭುತ್ವದಲ್ಲಿ ಚರ್ಚೆ ಮಾಡುವುದಕ್ಕಲ್ಲ. ನಾವು ಈ ಒಂದು ಪವಿತ್ರವಾದ ಮನೆಯಲ್ಲಿ, ಮತದಾರರು, ನಾಗರೀಕರು, ಸಾರ್ವಜನಿಕರು ಹೀಗೆ ಯಾರು ಬೇಕಾದರೂ ಬಂದು ನೋಡಬಹುದೆಂದು ಮಾಡಿರುವಂತಹ ಗ್ಯಾಲರಿ ಇದು. ಇದು ಚುನಾಯಿತರಾದ ಪ್ರತಿನಿಧಿಗಳು ಕುಳಿತು ನಡೆಸುವಂತಹ ಸದನ. ನಾನು ಒಂದು ದಿವಸವೂ ಗೈರು ಹಾಜರಿಯಾಗಿಲ್ಲ. ತಾವು ಬೇಕಾದರೆ ಹಾಜರಿ ಪುಸ್ತಕವನ್ನು ನೋಡಿ. ತಾವು ನನ್ನನ್ನು ಹೊರಗಡೆ ಹೋಗಿ ಎನ್ನುವವರೆಗೂ ಕುಳಿತಿದ್ದೇನೆ. ಅದು ತಮಗೂ ಗೊತ್ತಿದೆ. ನಾನು ಯಾವತ್ತೂ ತಪ್ಪಿಸಿಕೊಂಡಿಲ್ಲ. ಎಂತಹ ಸಂದರ್ಭ ಬಂದರೂ ಈ ಪವಿತ್ರವಾದ ಮನೆಗೆ ಚುನಾಯಿತರಾಗಿ ಬಂದಿರತಕ್ಕವರಾದ ನಾವು ಇಲ್ಲಿ ಇರಬೇಕಾದುದು ನಮ್ಮ ಕರ್ತವ್ಯ ಹಾಗೂ ಚರ್ಚೆಯಲ್ಲಿ ಭಾಗವಹಿಸತಕ್ಕದ್ದು ನಮ್ಮ ಕರ್ತವ್ಯ ಎಂದು ನಾನು ತಿಳಿದಿದ್ದೇನೆ. ಹಿಂದೆ ಇಲ್ಲಿ ಅನೇಕ ಮಹನೀಯರು ಭಾಷಣ ಮಾಡಿದ್ದು ಇದೆ. ಈ ಸದನದಲ್ಲೇ ರಾಜಿನಾಮೆಯನ್ನು ನೀಡಿದಂತಹ ಪ್ರಸಂಗಗಳು ಇವೆ. ಈ ಸದನದಲ್ಲೇ ನೇರವಾಗಿ ರಾಜಿನಾಮೆಯನ್ನು ಕೊಟ್ಟ ಒಂದು ಉದಾಹರಣೆಯನ್ನು ಕೊಡುತ್ತೇನೆ.

ಇವತ್ತು ನಮ್ಮ ಪ್ರಜಾಪ್ರಭುತ್ವಕ್ಕೆ ಅತ್ಯಂತ ಹೆಚ್ಚಿನ ಮಹತ್ವವನ್ನು ನೀಡಿದಂತಹ ನಮ್ಮೆಲ್ಲರ ನೆಚ್ಚಿನ ನಾಯಕರಾಗಿದ್ದಂತಹ ಶ್ರೀಮಾನ್ ಶಾಂತವೇರಿ ಗೋಪಾಲ ಗೌಡರನ್ನು ನಾನು ಇಲ್ಲಿ ನೆನೆಸಿಕೊಳ್ಳುತ್ತೇನೆ. ಅವರು ಈ ಸದನಕ್ಕೆ ಬರಬೇಕೆಂದರೆ ಯಾವುದಾದರೂ ದೇವಸ್ಥಾನದ ಪೂಜೆಗೆ ಹೋಗಬೇಕಾದರೆ ಎಷ್ಟು ಭಯ ಭಕ್ತಿ ಪ್ರೀತಿಯಿಂದ ಹೋಗುತ್ತೇವೋ ಅದೇ ರೀತಿ ಬೆಳಿಗ್ಗೆ ಈ ಸದನವನ್ನು ಪ್ರವೇಶ ಮಾಡಬೇಕು ಮತ್ತು ಪರಿಪಕ್ವವಾಗಿ ಕಾಳಜಿ ಕೆಲಸ ಮಾಡಬೇಕೆಂದು ತಿಳಿದವರು. ಆಗ ಮಧುಗಿರಿಯಲ್ಲಿ ಒಂದು ಪ್ರಕರಣ ನಡೆಯಿತು. ಮಹಿಳೆಯರ ಮೇಲೆ ಅತ್ಯಾಚಾರ ಆಯಿತು. ದೊಡ್ಡ ಪ್ರಮಾಣದಲ್ಲಿ ಗೋಲಿಬಾರ್ ಆಯಿತು, ಈ ದುರಂತದ ಬಗ್ಗೆ ಗೋಪಾಲ ಗೌಡರು ಸಂಪೂರ್ಣ ಭಾಷಣವನ್ನು ಕೇಳಿದ ಮಾನ್ಯ ಎಂ ಪಿ. ರಾಮಯ್ಯನವರು ರಾಜೀನಾಮೆ ಕೊಟ್ಟರು. ಇಂತಹ ಪರಮ ಪವಿತ್ರವಾದಂತಹ ಚರ್ಚೆಗಳು ಸಹಿತ ಇಲ್ಲಿ ನಡೆದಿದೆ. ಇವತ್ತು ವಿಧಾನಸಭೆಗೆ, ವಿಧಾನ ಪರಿಷತ್ತಿಗೆ ಹಾಗೂ ಲೋಕಸಭೆಗೆ ರಾಜ್ಯಾಂಗದತ್ತವಾಗಿ ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ಒಂದು ಹೊಸ ಚೈತನ್ಯಪೂರ್ಣವಾದಂತಹ ಶಕ್ತಿ ಏನಿದೆ ಅದನ್ನು ನಾವು ಯಾರು ಕಳೆಯಬಾರದು. ನಾವು ಯಾವ ಪಕ್ಷದವರೇ ಆಗಿರಬಹುದು, ನಾನು ಬೇರೆ ಪಕ್ಷವಿರಬಹುದು, ತಾವು ಬೇರೆ ಪಕ್ಷವಿರಬಹುದು, ಆದರೆ ಈ ಮನೆಯಲ್ಲಿ ನಾವೆಲ್ಲರೂ ಒಂದೆ. ಈ ಮನೆಯ ಶಕ್ತಿಯನ್ನು ಕಾಪಾಡಿದರೆ ಈ ರಾಜ್ಯದ ಆಡಳಿತದ ದಿಕ್ಕು ಸರಿಹೋಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ನಾನು ಏಕೆ ಈ ಮಾತನ್ನು ಹೇಳಿದೆ ಎಂದರೆ ವಿರೋಧಪಕ್ಷದ ಸದಸ್ಯರು ಆಡಳಿತ ಪಕ್ಷದವರು ಎಂದು ನಾನೇನು ಅವರನ್ನು ದೂಷಣೆ ಮಾಡುತ್ತಿಲ್ಲ, ಮಾನ್ಯ ಮುಖ್ಯಮಂತ್ರಿಗಳನ್ನು ದೂಷಣೆ ಮಾಡುತ್ತಿಲ್ಲ, ಅಥವಾ ಕೆಟ್ಟದಾಗಿ ಯಾರ ಬಗ್ಗೆಯೂ ಮಾತನಾಡುತ್ತಿಲ್ಲ. ಆದರೆ ವಿರೋಧಪಕ್ಷದವರ ಗೈರುಹಾಜರಿಗೆ ಕಾರಣವೆಂದರೆ ಸರ್ಕಾರದವರು ಒಂದೆ ಹೆಜ್ಜೆ ತಮ್ಮ ನೀತಿಯಿಂದ ಕೆಳಗೆ ಇಳಿದಿದ್ದಾರೆ. ಒಂದು ಸಮಿತಿಯನ್ನು ರಚನೆ ಮಾಡೋಣ. ಆ ಸಮಿತಿ ಅಲ್ಲಿ ಹೋಗಿ ನೋಡಿ ಬಂದ ತಕ್ಷಣ ನ್ಯಾಯಾಂಗ ತನಿಖೆ ನಡೆಸೋಣವೆಂದು ಮೊದಲು ಹೇಳಿದರು. ಮತ್ತೊಮ್ಮೆ ಇದು ಜಟಿಲವಾದ ಪ್ರಶ್ನೆ ಎಂದು ಆಡಳಿತ ನಡೆಸತಕ್ಕವರೇ ಒಂದು ಹೆಜ್ಜೆ ಹಿಂದೆ ಹೋದರು. ನ್ಯಾಯಾಂಗ ತನಿಖೆ ನಡೆಸೋಣ ಎಂದು ಹೇಳಬೇಕಾಗಿತ್ತು. ಹಿಂದಿನ ಸರ್ಕಾರಗಳು ಎಷ್ಟು ನ್ಯಾಯಾಂಗ ತನಿಖೆಯನ್ನು ನಡೆಸಿಲ್ಲ ? ತಾವು ನ್ಯಾಯಾಂಗ ತನಿಖೆ ನಡೆಸಿದ ತಕ್ಷಣ ಆ ಒಂದು ಪ್ರತಿಷ್ಠೆಗೆ ಭಂಗ ಬರುತ್ತದೆ ಎನ್ನುವಂತಹ ಪ್ರಶ್ನೆ ಏನೂ ಇಲ್ಲ. ಆಯಿತು, ತಾವು ನ್ಯಾಯಾಂಗ ತನಿಖೆ ನಡೆಸುತ್ತೇವೆಂದು ನೀವು ಹೇಳಿ ದೊಡ್ಡಸ್ತಿಕೆ ಮನೋಭಾವವನ್ನು ತೋರಿಸಿದ್ದರೆ, ಆಗ ನಮ್ಮ ವಿರೋಧಪಕ್ಷದ ಸದಸ್ಯರ ಹಠಮಾರಿತನ ಏನಿತ್ತು. ಅದು ಕಡಿಮೆಯಾಗುತ್ತಿತ್ತು. ಅವರಿಗೆ ಔದಾರ್ಯವನ್ನು ತೋರಿಸಿದೆ ಎಂಬ ಮಾತನ್ನು ಹೇಳಬಹುದಾಗಿತ್ತು. ಆಗ ಅವರು ಸಿಕ್ಕಿ ಬೀಳುತ್ತಿದ್ದರು, ಆದರೆ ಅದು ಇವತ್ತು ದಾರಿ ತಪ್ಪಿದೆ. ವಿರೋಧಪಕ್ಷದವರು ಸಂಪೂರ್ಣವಾಗಿ ಎಲ್ಲರೂ ಸಭೆಯಲ್ಲಿ ಇದ್ದು ಆಯವ್ಯಯದ ಚರ್ಚೆ ಪ್ರಾರಂಭವಾಗಿದ್ದರೆ ಅದಕ್ಕೆ ನಿಜವಾಗಿಯೂ

೫-೧೫ ಪಿ. ಎಂ.

ಬಹಳ ಹೆಚ್ಚಿನ ಗೌರವ ಸಿಗುತ್ತಿತ್ತು ಎನ್ನುವ ಮಾತನ್ನು ತಮಗೆ ಹೇಳಿ, ತಮ್ಮ ತೀರ್ಪು ಏನಿದೆ ಆ ತೀರ್ಪನ್ನು ಈಗ ಪುನರ್ ಪರಿಶೀಲಿಸಿ ಎಂದು ಮೂರು ದಿನಗಳಿಂದ ಹೇಳಿದೆ. ಸಂಪೂರ್ಣವಾಗಿ ಇಡೀ ಸದನದ ಅವಧಿಗೆ ಹೊರಗೆ ಹಾಕಿರತಕ್ಕಂತಹ ಸದಸ್ಯರ ಅಮಾನತ್ತನ್ನು ರದ್ದುಗೊಳಿಸಿ ತಾವು ಮತ್ತೆ ಅವರನ್ನು ಕರೆಯತಕ್ಕಂತಹ ಒಂದು ನಿರ್ಣಯವನ್ನು ಮಂಡಿಸಿ ಎಂದು ಹೇಳಿದೆ. ನನ್ನ ಮಾತಿಗೆ ಬೆಲೆ ಸಿಗಲಿಲ್ಲ. ಅದಕ್ಕೆ ಸಂಸದೀಯ ವ್ಯವಹಾರಗಳ ಸಚಿವರು ಬೆಲೆ ಕೊಡಲಿಲ್ಲ. ಅವರು ಸಹ ಮಾತನಾಡಬಹುದಾಗಿತ್ತು. ಆದರೆ ಕಾರಣ ಬೇರೆ ಏನೋ ಇರಬಹುದು. ಏಕೆಂದರೆ ಅದು ಏನೇ ಆದರೂ ಚಿಂತೆ ಇಲ್ಲ, ನೋಡೇಬಿಡೋಣ, ನಾವು ಅವರನ್ನು ಹೊರಗಡೆ ಹಾಕಿರುವುದೇ ಸರಿ ಎನ್ನುವ ನಿರ್ಧಾರಕ್ಕೆ ಬರುವುದು ಇದೆಯಲ್ಲ, ಅದು ಒಳ್ಳೆಯ ನಿರ್ಧಾರವಲ್ಲ. ಸಂಸದೀಯ ವ್ಯವಹಾರಗಳ ಸಚಿವರು ಕರ್ತವ್ಯ ಲೋಪ ಮಾಡಿದ್ದಾರೆ ಎಂದು ನೇರವಾಗಿ ಅವರ ಮೇಲೆ ಆರೋಪ ಮಾಡುತ್ತಿದ್ದೇನೆ. ನನಗೆ ಅವರ ಬಗ್ಗೆ ಅಪಾರವಾದಂತಹ ಗೌರವ ಇದೆ. ನಾನು ಈ ಸದನದಲ್ಲಿ ಅವರನ್ನು ಭೀಷ್ಮಾಚಾರ್ಯರು ಎಂದು ಕರೆದದ್ದೂ ಉಂಟು. ಅವರು ಕರ್ನಾಟಕದ ಏಕೀಕರಣಕ್ಕೆ ಹೋರಾಟ ಮಾಡಿದಂತಹ ಜನ. ಇಂತಹ ಸದನದಲ್ಲಿ ಅನೇಕ ಚರ್ಚೆಗಳನ್ನು ನೋಡಿರುವವರು, ಅನೇಕ ಜನ ಮುಖ್ಯಮಂತ್ರಿಗಳನ್ನು ನೋಡಿರುವವರು ಅನೇಕ ಶಾಸನ ಸಭೆಗಳನ್ನು ನೋಡಿರುವವರಾದ ಕಾರಣ ಇದಕ್ಕೆ ಮಾರ್ಗೋಪಾಯವನ್ನು ಹುಡುಕತಕ್ಕಂತಹ ಶಕ್ತಿ ಅವರಿಗೆ ಇದೆಯೆಂದು ನಾನು ತಿಳಿದಿದ್ದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು, ನಾನು ಸಂಸದೀಯ ವ್ಯವಹಾರಗಳ ಸಚಿವನಾಗಿ ನನ್ನ ಕರ್ತವ್ಯ ನಿರ್ವಹಿಸಲಿಲ್ಲ ಎಂದು ಹೇಳಿದರು. ನಾವು ಎಲ್ಲಾ ತೀರ್ಮಾನ ಮಾಡಿ

ವಾಟಾಳ್ ನಾಗರಾಜ್ ಅವರನ್ನು ಸಂಧಾನ ನಡೆಸಿ ಎಂದು ಹೇಳಿದಾಗ ಒಂದೆರಡು ದಿವಸ ಆ ಕ್ರಮ ನಡೆಯಿತು. ಆದರೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರ ಸರ್ವ ಪ್ರಯತ್ನವೂ ಮತ್ತು ನಮ್ಮ ಪ್ರಯತ್ನವೂ ನಿಷ್ಫಲವಾಯಿತು. ಅವರು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಿದರು. ಆದರೆ ನಾವಾಗಲಿ, ನೀವಾಗಲಿ ಕುದುರೆಯನ್ನು ದನವನ್ನು ನೀರಿನವರೆಗೂ ಕರೆದುಕೊಂಡು ಹೋಗ ಬಹುದು. ಆದರೆ ಅದಕ್ಕೆ ನೀರು ಕುಡಿಸುವುದಕ್ಕೆ ಆಗುವುದಿಲ್ಲ. ನೀರು ಕುಡಿಯಬೇಕಾದರೆ ಅದಕ್ಕೆ ದಾಹವಾಗಬೇಕು. ಇಲ್ಲಿ ದುರಾದೃಷ್ಟ ಏನಾಗಿದೆಯೆಂದರೆ ಅವರು ಮೊದಲೇ ತೀರ್ಮಾನ ಮಾಡಿ ಕೊಂಡರು, ಏನಾದರೂ ಆಗಲಿ, ನಾವು ಹೊರಗೆ ಹಾಕಿಸಿಕೊಳ್ಳಬೇಕು ಎಂದು. ಈಗಲೂ ಕೂಡ ಈ ನಿಮಿಷದಲ್ಲಿ ನಾವು ಆಗಿರತಕ್ಕಂತಹ ತೀರ್ಮಾನಗಳನ್ನು ವಾಪಸ್ಸು ತೆಗೆದುಕೊಂಡು ಅವರ ಮೇಲೆ ಇರತಕ್ಕಂತಹ, ಹೊರಗೆ ಹಾಕರತಕ್ಕಂತಹ ತೀರ್ಮಾನವನ್ನು ಬದಲಾವಣೆ ಮಾಡುವುದಕ್ಕೆ ತಯಾರಿದ್ದೇವೆ. ಮಾನ್ಯ ಸದಸ್ಯರುಗಳು ಬಂದು ಚರ್ಚೆಯಲ್ಲಿ ಭಾಗವಹಿಸಿದರೆ ನಮಗೆ ಬಹಳ ಸಂತೋಷ. ಅವರು ಇಲ್ಲದೆ ಸಭೆಯನ್ನು ನಡೆಸುತ್ತಿರುವುದು ನಮಗೆ ಬಹಳ ಮುಜುಗರ. ಇದು ನಮ್ಮ ಮನಸ್ಸಿಗೆ ನೋವುಂಟುಮಾಡತಕ್ಕಂತಹ ಪರಿಸ್ಥಿತಿ ಆಗಿದೆ. ಅವರು ಯಾವಾಗಲೂ ನಮ್ಮ ಎದುರು ಕೂತಿದ್ದರೆ ಹಾಗೂ ಮಾತುಕತೆಗಳಲ್ಲಿ, ವಿಚಾರ ವಿನಿಮಯಗಳಲ್ಲಿ, ಭಾಗವಹಿಸಿದರೆ ಅದಕ್ಕೆ ಒಂದು ರೀತಿಯ ಪ್ರೌಢಿಮೆ ಇರುತ್ತದೆ. ಉಪಯೋಗ ಇರುತ್ತದೆ. ನಿಮ್ಮ ಅಭಿಪ್ರಾಯಕ್ಕೆ ನನ್ನ ಪೂರ್ತಿ ಒಪ್ಪಿಗೆ ಇದೆ. ಆದರೆ ಈ ನೀರು ಕುಡಿಯುವ ಹಾಗೆ ಮಾಡುವುದಕ್ಕೆ ನಮ್ಮ ನಿಮ್ಮ ಕೈಯಲ್ಲಿ ಆಗಿಲ್ಲ. ಆದರೆ ಇಲ್ಲಿ ನಮ್ಮ ಕರ್ತವ್ಯ ಚ್ಯುತಿ ಏನೂ ಆಗಿಲ್ಲ. ಯಾವತ್ತೂ ಕೂಡ ವಿರೋಧ ಪಕ್ಷಗಳ ಮಾನ್ಯ ಸದಸ್ಯರು ಇರಬೇಕು, ನಮಗೆ ಸಲಹೆಗಳನ್ನು ಕೊಡಬೇಕು, ಆದರೆ ಪ್ರಜಾಪ್ರಭುತ್ವದ ಒಂದು ಸಂಸದೀಯ ಸಂಪ್ರದಾಯದ ಬಗ್ಗೆ ಬಹಳ ದೊಡ್ಡ ದೊಡ್ಡ ಮಾತುಗಳನ್ನು ಆಡತಕ್ಕಂತಹ ಅನೇಕ ಸದಸ್ಯರುಗಳಿಗೆ ನನ್ನ ಸಲಹೆ ಏನೆಂದರೆ, ಪ್ರಜಾಪ್ರಭುತ್ವದ ಮೂಲಭೂತವಾದಂತಹ ಗುಣ ಏನೆಂದರೆ ಏನಿದ್ದರೂ ವಾದ, ಮಾತುಕತೆ ಪ್ರವೃತ್ತಿಯಿಂದ ಬಗೆಹರಿಸಬೇಕು. ಎಷ್ಟೇ ವಿರೋಧ ಮಾಡಿದರೂ, ಕೂಡ ಅದನ್ನು ಬಗೆಹರಿಸಬೇಕು. ಆದರೆ ಇದೇ ರೀತಿ ಮಾಡಬೇಕು ಇಲ್ಲದೇ ಹೋದರೆ ನಾನು ಭಾಗವಹಿಸುವುದಿಲ್ಲ ಎಂದು ಹೇಳಿದರೆ ಅದಕ್ಕೆ ನನ್ನ ಮನಸ್ಸು ಒಪ್ಪುವುದಿಲ್ಲ. ನಿಮಗೆ ಆಗಲಿ, ವಿರೋಧ ಪಕ್ಷದವರಿಗಾಗಲಿ, ನೀವು ಹೀಗೆ ಮಾಡಬೇಕು ಎಂದು ಹೇಳುವ ಅಧಿಕಾರ ನನಗೆ ಇಲ್ಲ. ನಿಮಗೆ ಈ ಕಾನೂನು ಇದೆ. ನಿಮಗೆ ಹೇಳುವುದಾದರೆ ಅದಕ್ಕೂ ಒಂದು ಮಿತಿ ಇದೆ. ಆ ಮಧ್ಯೆ ಮೇಲೆ ಹೇಳಿದ ಹಾಗೆ, ನಿಮ್ಮ ಸಭೆ ನಡೆಯುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಅವರು ಹೇಳಿದರೆ ಅದು ಯಾವ ಸಂಸದೀಯ ಸಭಾಂಗಣದಲ್ಲೂ ಸಂಸದೀಯ ವ್ಯವಹಾರಗಳ ವಿಷಯದಲ್ಲೂ ಒಪ್ಪಿಗೆ ಆಗುವ ವಿಷಯ ಅಲ್ಲ. ಸಂಸದೀಯ ವ್ಯವಹಾರಗಳಲ್ಲಿ ಮತ್ತು ಪಾರ್ಲಿಮೆಂಟರಿ ಪದ್ಧತಿಯ ಸರ್ಕಾರದಲ್ಲಿ ನಂಬಿಕೆ ಇರುವವರು ಯಾರೂ ಕೂಡ ಇದನ್ನು ಒಪ್ಪುವುದಿಲ್ಲ. ನಮಗೆ ಏನು ಅನಿಸಿದೆ ಅಂದರೆ, ನೀವು ಹೇಳಿದ ಅನಿಸಿಕೆ ತಪ್ಪು ಇರಬಹುದು. ನಾವು ಏನು ಮುಂಗಡ ಪತ್ರದಲ್ಲಿ ಮಂಡಿಸಿದ್ದೇವೋ ಅದನ್ನು ಈ ಸಭೆಯಲ್ಲಿ ಪ್ರತಿಭಟಿಸಿ ಅದರಲ್ಲಿರುವ ದೋಷಗಳನ್ನು ತೋರಿಸುವುದನ್ನು ಮಾಡದೆ ಸಭೆಯಿಂದ ಹೊರಗೆ ಪತ್ರಿಕೆಯಲ್ಲಿ ಹೇಳುವುದು ಎಷ್ಟರ ಮಟ್ಟಿಗೆ ಅದು ಉಪಯುಕ್ತ ಆಗುತ್ತದೋ, ಎಷ್ಟರ ಮಟ್ಟಿಗೆ ಒಪ್ಪುತ್ತೋ ಅದನ್ನು ಜನಕ್ಕೇ ಬಿಡೋಣ. ನಾವು ಮತ್ತು ನಮ್ಮ ಆಡಳಿತ ಪಕ್ಷ ಯಾವ ರೀತಿ ನಡೆದುಕೊಂಡಿದೆ. ವಿರೋಧ ಪಕ್ಷದವರು, ವಿಶೇಷವಾಗಿ ಜನತಾ ಪಕ್ಷದವರು ಬಿ.ಜೆ.ಪಿ. ಅವರು ಹಾಗೂ ಜನತಾ ದಳದವರೂ ನಡೆದುಕೊಂಡದ್ದು ಸರಿಯೆ ಎಂದು ಜನ ತೀರ್ಮಾನ ಮಾಡಲಿ. ಒಟ್ಟಿನಲ್ಲಿ ನಮ್ಮಿಂದ ಕರ್ತವ್ಯ ಲೋಪ ಆಗಿಲ್ಲವೆಂದು ಅತ್ಯಂತ ವಿನಯದಿಂದ ಅರಿಕೆ ಮಾಡಿಕೊಳ್ಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಾನು ಕರ್ತವ್ಯಲೋಪ ಅಂದರೆ ಈ ರೀತಿ ತಮ್ಮನ್ನು ವಿಶ್ಲೇಷಣೆ ಮಾಡುತ್ತೇನೆ. ಒಂದು ಹೆಜ್ಜೆ ತಾವು ಮುಂದೆ ಬಂದಿದ್ದೀರಿ. ಒಂದು ಸಮಿತಿ ರಚನೆಯಾಗಲಿ, ಆ ಸಮಿತಿ ನೋಡಿಕೊಂಡು ಬರಲಿ, ಆ ಸಮಿತಿ ಕೊಟ್ಟ ವರದಿಯ ಪ್ರಕಾರ ನಾವು ಕರ್ತವ್ಯ ನಿರ್ವಹಿಸುತ್ತೇವೆ ಎಂದು ವಿರೋಧ ಪಕ್ಷದಲ್ಲಿ ಸಾಮಾನ್ಯವಾಗಿ ಹಠಮಾರಿತನ ಇರಬಹುದು. ಪ್ರಜಾ ತಂತ್ರ ಆಡಳಿತ ಪಕ್ಷದ ಮೇಲೆ ಒತ್ತಡ, ಸರ್ಕಾರದ ಮೇಲೆ ಒತ್ತಡ ತರುವುದು ನಮ್ಮ ಜವಾಬ್ದಾರಿ ಒಂದಲ್ಲ ನಾನಾ ರೀತಿಯಾಗಿ ತರುತ್ತೀವಿ. ನೀವುಅದನ್ನು ಪ್ರತಿಷ್ಠೆ ಎಂದು ಇಟ್ಟುಕೊಳ್ಳಬಾರದು. ಆದುರಿಂದ ಆಯಿತು, ಹೇಳುತ್ತೀರಿ ಎಂದು ಹೇಳಿದರೆಮುಗಿದು ಹೋಯಿತು ಎಂದು ನನಗೆ ಅನಿಸುತ್ತದೆ. ಈಗ ಹೊರಗಡೆ ಪತ್ರಿಕೆಗಳಿಗೆ ಹೇಳಿದಿ ಅಂತ ನೀವು ಹೇಳುತ್ತೀರಿ. ಹಾಗಿದ್ದರೆ ಬೇರೆ ಯಾವ ವೇದಿಕೆ ಇದೆ? ಆಯವ್ಯಯದ ಬಗ್ಗೆ ಪತ್ರಿಕೆಗಳ ಮೂಲಕ ಅವರು ತಮ್ಮ ಪ್ರತಿಕ್ರಿಯೆ ಹೇಳಬೇಕು, ಹೇಳಿದ್ದಾರೆ. ಆ ಮೇಲೆ ಸದನ ಪೂರ್ತಿ ಹೊರಗಡೆ ಹಾಕಿದರಲ್ಲಾ. ಆ ನಿರ್ಣಯವನ್ನು ಮಂಡಿಸುತ್ತೀರಲ್ಲಾ ಅದು ಹೇಗೆ ಮಂಡಿಸಿದಿರಿ ? ಹೇಗೆ ಮನಸ್ಸು ಆಯಿತು ನಿಮಗೆ ? ಈ ನನ್ನ ಪ್ರಶ್ನೆ ನೇರವಾಗಿದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ.—ನ್ಯಾಯವಾಗಿ ನಮಗೆ ಇಷ್ಟ ಇರಲಿಲ್ಲ. ಆದರೆ ಎರಡು ದಿವಸ ಸತತವಾಗಿ ಹೊತ್ತುಕೊಂಡು ಹೋಗುವ ಪ್ರಮೇಯಗಳು ನಡೆದರೆ ದಿನದಲ್ಲಿ, ಅರ್ಧ ದಿನ ಅಥವಾ ಮುಕ್ಕಾಲು ದಿನ ಈ ಜಂಜಾಟ ನಡೆದು ಸಭೆಯ ಕಾಲ ಸಭೆಯ ಮೌಲ್ಯ ಪೂರ್ತಿ ಹಾಳಾಗುತ್ತಿದೆ ಎಂದು ನಮ್ಮ ಮನಸ್ಸಿಗೆ ಮನವರಿಕೆ ಆಗಿದ್ದರಿಂದ ನೀವು ಸಭೆಯಲ್ಲಿ ಭಾಗವಹಿಸುವುದಕ್ಕೆ ತಯಾರಿಲ್ಲದೆ ಹೋದರೆ ನೀವು ಹೊರಗಡೆ ಇರಿ ಎಂದು ಹೇಳಿದ್ದೇವೆ. ಆದರೆ ಅದು ಕೊನೆಯ ಮಾತಲ್ಲ. ಈ ನಿಮಿಷಕ್ಕೂ ಕೂಡ ಅವರು ಬರಲಿ ಆರನೇ ತಾರೀಖಿನ ವರೆಗೆ ಸಭೆ ನಡೆಸೋಣ, ಎಲ್ಲಾ ಚರ್ಚೆಗಳನ್ನು ಮಾಡೋಣ. ಆದರೆ ನೀವು ಬರುವುದಕ್ಕೆ ಸಿದ್ಧವಿಲ್ಲ, ಸಭೆಯಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದರೆ ಏನು ಮಾಡುವುದು ?

ಶ್ರೀ ವಾಟಾಳ್ ನಾಗರಾಜ್.—ನಾನು ಅದಕ್ಕೆ ನಮಗೆ ಹೇಳುತ್ತಿದ್ದೇನೆ, ಅವರ ಶರತ್ತು ಒಪ್ಪುವುದಿಲ್ಲ ಅಂತ ನೀವು ಹೇಳುತ್ತಿದ್ದೀರಲ್ಲಾ, ತಾವು ಸ್ವಲ್ಪ ಬದಲಾವಣೆ ಆಗ ಬೇಕು ಎಂದು ನಾನು ಹೇಳುತ್ತೇನೆ. ಒತ್ತಡ ಇದೆಯಲ್ಲಾ ಈ ಒತ್ತಡದಲ್ಲಿ ಯಾರೂ ಇದನ್ನು ಪ್ರತಿಷ್ಠೆ ಎಂದು ಭಾವಿಸಬಾರದು. ನೀವು ಇನ್ನೂ ಸ್ವಲ್ಪ ಹಿಂದೆ ಬಂದರೆ ಅನುಕೂಲವಾಗುತ್ತದೆ. ಅವರು ಸಹ ಬಂದು ಈ ಸಂಸದೀಯ ವ್ಯವಸ್ಥೆಯಲ್ಲಿ ಭಾಗವಹಿಸಿದರೆ, ಅದಕ್ಕೆ ಒಂದು ಅರ್ಥ ಬರುತ್ತೆ ಎಂದು ನಾನು ಹೇಳಿದ್ದೇನೆ. ತಾವು ಏನಾದರೂ ತೀರ್ಮಾನ ಮಾಡಬೇಕಿತ್ತು ಇದು ನಿಮಗೆ ಸೇರಿದ್ದು. ನಂತರ ಅಧ್ಯಕ್ಷರೇ, ಈ ಆಯವ್ಯಯದ ಬಗ್ಗೆ ಚರ್ಚೆ ಎಷ್ಟು ದಿವಸ ನಡೆಯುತ್ತದೆ ? ಈಗಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರಪ್ಪ ಮೊಯಿಲಿ ಅವರು ಹಿಂದೆ ಸಂಸದೀಯ ಸಚಿವರಾಗಿ ಎಡ ಬಿಡದೆ ಎಂದೂ ಈ ಸದನದಲ್ಲಿ ಗೈರು ಹಾಜರಾಗದೆ ಬೇರೆ ಎಲ್ಲಾ ಮಂತ್ರಿಗಳ ಪರವಾಗಿ ಇಲ್ಲಿ ಕುಳಿತು ಅವರೇ ಉತ್ತರವನ್ನು ಕೊಟ್ಟಿರತಕ್ಕಂಥದ್ದು ನಾವು ನೋಡಿದ್ದೇವೆ. ಮತ್ತು ಸಂಸದೀಯ ನಡವಳಿಕೆಯ ಬಗ್ಗೆ ಅವರಿಗೆ ಅಪಾರವಾದ ಗೌರವ ಇರುವುದನ್ನು ನಾನು ನೋಡಿದ್ದೇನೆ. ಆದರೆ ಇವತ್ತು ಅವರೇ ಹೇಳಿರುವ ಪ್ರಕಾರ ಶಾಸನಸಭೆ ಕನಿಷ್ಟ ೧೦೦ ದಿನಗಳಾದರೂ ವರ್ಷದಲ್ಲಿ ನಡೆಯಬೇಕು ಎಂದು ಅವರು ಭರವಸೆ ನೀಡಿರತಕ್ಕಂಥದ್ದು ಏನಿದೆ, ಇವತ್ತು ಅದು ಹುಸಿಯಾಗಿದೆ, ಮತ್ತೊಂದು ಕಡೆ ಆಯವ್ಯಯದ ಬಗ್ಗೆ ಚರ್ಚೆಯ ದಿನಗಳು ತೀವ್ರವಾಗಿ ಮೊಟಕು ಆಗಿವೆ. ಇನ್ನೊಂದು ಹೊಸಪದ್ಧತಿಯನ್ನು ನೀವು ಜಾರಿಗೆ ತರುತ್ತಿರುವುದು ಎಂದರೆ ಅದು ವಿಷಯ ಸಮಿತಿಗಳ ವ್ಯವಸ್ಥೆ. ನಾನು ಸಮಿತಿಯ ಸದಸ್ಯನಾಗಿರಲಿಲ್ಲ. ತಾವು ಈ ಸಮಿತಿಯ ವ್ಯವಸ್ಥೆಯನ್ನು ಏನು ತಂದಿದ್ದೀರಿ ಇದರಲ್ಲಿ ಎಂತಹ ವ್ಯವಸ್ಥೆ ಇದೆ ಎಂದರೆ, ಗೌಪ್ಯವಾಗಿ ಆಯಾಯ ಇಲಾಖೆಯ ಬಜೆಟ್‌ನ ಚರ್ಚೆಯನ್ನು ನಡೆಸಿ ವರದಿಯನ್ನು ಸಲ್ಲಿಸುವುದು. ಇದು ಒಟ್ಟಾರೆ ಅಭಿಪ್ರಾಯ. ಆದರೆ ಎಲ್ಲ ಇಲಾಖೆಯ ಬಗ್ಗೆ ಸಮಗ್ರ ಚರ್ಚೆಯನ್ನು ಮಂಡಿಸಿ ಇಲ್ಲಿ ಚರ್ಚೆಯನ್ನು ಮಾಡಿದಾಗ ಅದು ಪ್ರಕಾರ ದೃಷ್ಟಿಯಿಂದಲೂ, ಪ್ರಚಾರ ಮಾಧ್ಯಮಗಳ ದೃಷ್ಟಿಯಿಂದಲೂ ಆಯಾಯ ಇಲಾಖೆಯಲ್ಲಿ ಆಗಿರುವಂಥ ಅನ್ಯಾಯಗಳನ್ನು ನೇರವಾಗಿ ಹೇಳಿ ಬಹಿರಂಗ ಪಡಿಸುವಂಥ ವ್ಯವಸ್ಥೆ ಮೊದಲಿನಿಂದಲೂ ಇತ್ತು. ಆದರೆ ಈಗ ಈ ಸಮಿತಿಯ ವ್ಯವಸ್ಥೆ ಬಂದಮೇಲೆ ಆ ರೀತಿಯ ಚರ್ಚೆಗೆ ಮಹತ್ವ ಸಿಕ್ಕುತ್ತಿಲ್ಲ. ಆ ಒಂದು ಚರ್ಚೆ ಸಂಪೂರ್ಣವಾಗಿ ಮೊಟಕಾಗುತ್ತಿದೆ. ಶಾಸನ ಸಭೆಯ ಅಸ್ತಿತ್ವ ಏನಿದೆ ಅದಕ್ಕೆ ನಾವು ಕಂಟಕವನ್ನು ತರುತ್ತಿದ್ದೇವೇನೋ ಎನ್ನತಕ್ಕ ಭಯ ನನಗೆ ಬರುತ್ತಿದೆ. ಇದಾಗಬಾರದು. ಇದು ಪೋಲೀಸ್ ರಾಜ್ಯದಲ್ಲಿ ಮಾತ್ರ ಸಾಧ್ಯ. ನೂರು ದಿನಗಳ ಅಧಿವೇಶನ ನಡೆಸುವ ಭರವಸೆ ಇಲ್ಲ. ಎಲ್ಲ ಬೇಡಿಕೆಗಳ ಬಗ್ಗೆ ಸಾಕಷ್ಟು ಸಮಗ್ರ ಚರ್ಚೆಗೆ ಅವಕಾಶವಿಲ್ಲ. ಆಯವ್ಯಯದ ಬಗ್ಗೆ ಸಮಗ್ರ ಚರ್ಚೆಗೆ ಅವಕಾಶವಿಲ್ಲ ಶಾಸಕರ ಗೈರುಹಾಜರಿ, ಮೇಲೆ ಗ್ಯಾಲರಿಯಲ್ಲಿ ಪ್ರೇಕ್ಷಕರ ಸಂಖ್ಯೆ ಕಡಿಮೆ, ಹೊರಗಡೆ ವಿಧಾನಸೌಧದ ಸುತ್ತಲೂ ಪೋಲೀಸರ ಸರ್ಪ ಕಾವಲನ್ನು ಹಾಕಿ ಹೊರಗಿನಿಂದ ಬರುವವರು ಬಂದಂತೆ ಮಾಡಿದ್ದೀರಿ. ಯಾರೇ ಬರಬೇಕಾದರೂ ಅವರನ್ನು ಪೋಲೀಸರು ತಡೆಯುತ್ತಾರೆ. ಮಿಲಿಟರಿ ಕ್ಯಾಂಪ್‌ಗೆ ಹೋದವರನ್ನು ಯಾವರೀತಿ ನೋಡಲಾಗುತ್ತದೆ. ಆರೀತಿ ಹೊರಗಿನಿಂದ ಬರುವ ಜನರನ್ನು ಪೋಲೀಸರು ನೋಡುತ್ತಿದ್ದಾರೆ. ಅಷ್ಟೇ ಅಲ್ಲ, ಪತ್ರಕರ್ತರ ಬಗ್ಗೆ ನೀವು ಮಾಡಿರುವುದಾದರೂ ಏನು ? ಪತ್ರಕರ್ತರು ಈ ಸದನದೊಳಕ್ಕೆ ಬರುವುದಕ್ಕೆ ಮೊದಲೇ ಒಂದು ಪರವಾನಗಿಯನ್ನು ಕೊಟ್ಟಿದ್ದೀರಿ. ಪ್ರತಿವರ್ಷವೂ ಈ ಸದನದೊಳಕ್ಕೆ ಪತ್ರಕರ್ತರು ಬರುವುದಕ್ಕೆ ಅನುಮತಿಯನ್ನು ಪಡೆಯಬೇಕಾಗಿರಲಿಲ್ಲ. ಯಾವ ಪತ್ರಕರ್ತರು ಬೇಕಾದರೂ ಯಾವಾಗ ಬೇಕಾದರೂ ಇಲ್ಲಿಗೆ ಬಂದು ಹೋಗಬಹುದೆಂದು ಹಿಂದಿನ ಮಾನ್ಯ ಅಧ್ಯಕ್ಷರು ಪರವಾನಗಿಯನ್ನು ಕೊಟ್ಟಿರುವಾಗ ಇವತ್ತು ನಿಮ್ಮ ಈ ಶಾಸನಸಭೆಯ ಸಿಬ್ಬಂದಿವರ್ಗ ಆ ಪತ್ರಕರ್ತರನ್ನು ಒಳಗೆ ಬರದಂತೆ ತಡೆಯಿತು. ಯಾರಾದರೂ ಬಂದು ನಾನು ಹಿರಿಯ ಪತ್ರಕರ್ತ, ನಾನು ಈ ಸದನಕ್ಕೆ ಕಳೆದ ಹತ್ತಾರು ವರ್ಷಗಳಿಂದ ಬರುತ್ತಿದ್ದೇನೆ, ನನ್ನನ್ನು ತಡೆಯಬೇಡಿ ಎಂದು ಅವರ ಬಳಿ ಇದ್ದಂಥ ಭಾವ

ಚಿತ್ರವುಳ್ಳ ಗುರುತಿನ ಚೀಟಿಯನ್ನು ಅವರು ತೋರಿಸಿದರೂ ಕೂಡ, ಇಲ್ಲ ನಿಮ್ಮನ್ನು ಒಳಗೆ ಬಿಡುವುದಕ್ಕೆ ಸಾಧ್ಯವಿಲ್ಲ, ನೀವು ಪ್ರತಿಸಾರಿ ಒಳಗಡೆ ಬರುವಾಗಲೂ ಅನುಮತಿಯನ್ನು ತೆಗೆದುಕೊಳ್ಳಬೇಕೆಂದು ಹೇಳುವುದಾದರೆ ನಾವು ಪ್ರಜಾಪ್ರಭುತ್ವದಲ್ಲಿ ವ್ಯವಸ್ಥೆಯಲ್ಲಿದ್ದೇವೋ ಅಥವಾ ತುರ್ತು ಪರಿಸ್ಥಿತಿಯ ಗುಂಗಿನಲ್ಲಿದ್ದೇವೋ ಎಂಬ ಅನುಮಾನ ಬಂದಿದೆ. ಆದ್ದರಿಂದ ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ಸದನ ನಿಮ್ಮ ಆಡಳಿತ ವ್ಯಾಪ್ತಿಯಲ್ಲಿ ಬರತಕ್ಕದ್ದು. ಆದ್ದರಿಂದ ಈ ಕೂಡಲೇ ತಾವು ಇದರ ಬಗ್ಗೆ ಗಮನಹರಿಸಿ ಯಾರು ಯಾವ ಪತ್ರಕರ್ತರನ್ನು ತಡೆಹಿಡಿದಿದ್ದಾರೆ, ಆ ರೀತಿ ತಡೆಹಿಡಿಯಲು ಕಾರಣವೇನೆಂಬುದಕ್ಕೆ ತನಿಖೆಯನ್ನು ನಡೆಸಬೇಕೆಂದು ಕಳಕಳಿಯಿಂದ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ನನ್ನ ಪ್ರಾರ್ಥನೆಯನ್ನು ಒಪ್ಪಿದ್ದೀರೆಂಬುದಕ್ಕೆ ತಾವು ಮುಂದೆ ತೆಗೆದುಕೊಳ್ಳತಕ್ಕ ಕ್ರಮದಿಂದ ನನಗೆ ಮನವರಿಕೆ ಆಗುತ್ತದೆಂದು ಅಂದುಕೊಂಡಿದ್ದೇನೆ. ಇನ್ನು ಮುಂದಾದರೂ ಈ ರೀತಿಯ ಪರಿಸ್ಥಿತಿ ಒದಗದೇ ಇರಲೆಂದು ತಿಳಿಸಿ ಈ ಶಾಸನ ಸಭೆ ೧೦೦ ದಿನಗಳವರೆಗೆ ನಡೆಯುವ ವ್ಯವಸ್ಥೆ ಇದೆಯೇ ? ಒಂದು ವೇಳೆ ಆ ವ್ಯವಸ್ಥೆ ಇಲ್ಲದಿದ್ದರೆ ವರ್ಷದಲ್ಲಿ ೧೦೦ ದಿನಗಳಕಾಲ ನಡೆಸುವುದಕ್ಕೆ ನಮಗೆ ಸಾಧ್ಯವಿಲ್ಲ. ನಮಗೆ ಬೇಕಾದಾಗ ಸಭೆಯನ್ನು ಕರೆಯುತ್ತೇವೆ, ಬೇಡವಾದಾಗ ಸಭೆಯನ್ನು ಮುಂದೂಡುತ್ತೇವೆ. ನಮಗೆ ಬೇಕಾದಾಗ ನಿಮ್ಮನ್ನು ಕರೆಯುತ್ತೇವೆ ಎನ್ನುವ ಭಾವನೆ ಏನಾದರೂ ಇದ್ದರೆ ಅದನ್ನಾದರೂ ತಾವು ಹೇಳಿ. ಇತ್ತೀಚೆಗೆ ನೀವು ಈ ಸಭೆಯನ್ನು ಕರೆದಿರುವ ಲಕ್ಷಣ, ವ್ಯವಸ್ಥೆ, ಸಂಪ್ರದಾಯ ಏನಾಗಿದೆ ಎಂಬುದನ್ನು ಸಂಸದೀಯ ಸಚಿವರಾದ, ಹಿರಿಯರಾದ ತಾವು ಪ್ರಾಮಾಣಿಕವಾಗಿ ಹೇಳಿ. ಅಧಿಕಾರ ಇರುತ್ತದೆ, ಹೋಗುತ್ತದೆ. ನೀವು ಇವತ್ತು ಮಂತ್ರಿಗಳಾಗಿರಬಹುದು. ಆದರೆ ನೀವು ಮಂತ್ರಿಗಳಾಗಿಯೇ ಇಲ್ಲಿಗೆ ಬರಲಿಲ್ಲ. ನೀವು ಹಿಂದಿನಿಂದಲೂ ಹೋರಾಟವನ್ನೇ ಮಾಡಿಕೊಂಡು ಬಂದಿರುವಂಥವರು. ನಾನು ತಮಗೆ ಹೇಳುತ್ತೇನೆ, ಈ ಸಭೆಯ ನಡವಳಿಕೆಯ ಬಗ್ಗೆ ಹೇಳುವುದಾದರೆ ತಾವು ಒಂದು ಸಾರಿ ಸಭೆಯನ್ನು ಕರೆದಾಗ ಯಾರೋ ಧರಣಿ ಕೂತರು ಎಂದು ಅಧ್ಯಕ್ಷರು ಎದ್ದು ಸಭೆಯನ್ನು ಮುಂದಕ್ಕೆ ಹಾಕಿದರು, ಇನ್ನೊಂದು ಸಾರಿ ಸಭೆ ಕರೆದಿರಿ, ಆಗ ಯಾರೋ ಹೇಳಿಕಳಿಸಿದರು ಎಂದು ಸಭೆಯನ್ನು ಮುಂದಕ್ಕೆ ಹಾಕಿದಿರಿ. ಇನ್ನೇನು ಸ್ವಾಮಿ ? ನಾವು ಎಲ್ಲಿಗೆ ಹೋಗುತ್ತಿದ್ದೇವೆ. ಈ ಸಭೆಗೆ ಒಂದು ಚರಿತ್ರೆ ಇದೆ. ಈ ಸದನವನ್ನು ನಿರ್ಮಾಣ ಮಾಡಿದಂಥ ಮಾನ್ಯ ಕೆಂಗಲ್ ಹನುಮಂತಯ್ಯನವರು ಈ ಸಭೆಯ ಹೊರಗಡೆ ಸರ್ಕಾರದ ಕೆಲಸ ದೇವರ ಕೆಲಸ ಎಂದು ಕೆತ್ತನೆ ಮಾಡಿಸಿದ್ದಾರೆ, ನಮ್ಮ ತಲೆಯ ಮೇಲೆ ನ್ಯಾಯವನ್ನು ಘೋಷಣೆ ಮಾಡತಕ್ಕ ತಕ್ಕಡಿ ಇದೆ, ಪ್ರಜಾತಂತ್ರಕ್ಕೋಸ್ಕರ ಹೋರಾಟ ಮಾಡಿದಂಥ ಮಹಾತ್ಮ ಗಾಂಧೀಜಿಯವರ ಭಾವಚಿತ್ರವಿದೆ, ದಯವಿಟ್ಟು ಈ ಸದನದ ವ್ಯವಸ್ಥೆಯನ್ನು ಧೂಳಿಪಟ ಮಾಡುವುದು ಬೇಡ. ಈ ಸದನಕ್ಕೆ ಮಹತ್ತರ ಶಕ್ತಿ ಇದೆ. ಆ ಶಕ್ತಿಯನ್ನು ಕಳೆಯತಕ್ಕ ಗೋಜಿಗೆ ನಾವಾಗಲಿ, ನೀವಾಗಲೀ ಹೋಗುವುದು ಬೇಡ ಏಕೆಂದರೆ ಮುಂದಿನ ಪೀಳಿಗೆ ನಮಗೆ ಶಾಪವನ್ನು ಹಾಕುತ್ತಾರೆಂಬುದನ್ನು ತಮಗೆ ಅತ್ಯಂತ ವಿನಯದಿಂದ ಕೈಮುಗಿದು ಪ್ರಾರ್ಥಿಸುತ್ತೇನೆ. ಈ ಸದನದ ಶಕ್ತಿ ಹಾಗೇ ಇರಲಿ, ಇದನ್ನು ಕುಂದಿಸುವ ಪ್ರಯತ್ನಕ್ಕೆ ನಾವು ಯಾರೂ ಸಹ ಕೈ ಹಾಕಬಾರದೆಂದು ಮಾನ್ಯ ಅಧ್ಯಕ್ಷರಲ್ಲೂ, ಉಪಾಧ್ಯಕ್ಷರಲ್ಲೂ, ಸಂಸದೀಯ ಮಂತ್ರಿಗಳಲ್ಲೂ, ಮಾನ್ಯ ಮುಖ್ಯಮಂತ್ರಿಗಳಲ್ಲೂ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಈ ಸದನದ ಮೇಲಿನ ಅಧಿಕಾರ ತಮಗೆ ಸೇರಿದ್ದು, ಇದರ ಹಕ್ಕು ತಮ್ಮದು. ಸರ್ವ ಸ್ವಾತಂತ್ರ್ಯ ತಮ್ಮದು, ಯಾರು ಏನೇ ಹೇಳಲಿ, ಎರಡು ಕಡೆಯವರ ಮಾತುಗಳನ್ನು, ಅಭಿಪ್ರಾಯಗಳನ್ನು ತಾವು ತೆಗೆದುಕೊಂಡು ತಾವು ಸರಿಯಾದ ನಿರ್ಧಾರವನ್ನು ತೆಗೆದುಕೊಂಡು ಈ ಶಾಸನ ಸಭೆಯ ಪಾವಿತ್ರ್ಯತೆಯನ್ನು ಕಾಪಾಡುತ್ತೀರೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಈ ಸಭೆ ಮುಗಿದರೆ ಮತ್ತೆ ನೀವು ಸಭೆ ಸೇರುವುದು ಚುನಾವಣೆ ಮುಗಿದ ನಂತರ ೬ ತಿಂಗಳಿಗೊಮ್ಮೆ ಸಭೆ ಸೇರಬೇಕೆಂಬ ನಿಯಮದ ಪ್ರಕಾರ ತಾವು ನಾಮಕಾವಸ್ತೆಗಾಗಿ ಈ ಸಭೆಯನ್ನು ಮತ್ತೆ ಕರೆಯಬಹುದು. ಸಂವಿಧಾನ ಬದ್ಧವಾಗಿ ಹೇಳುವುದಾದರೆ ಒಂದು ಸಾರಿ ಸಭೆಯನ್ನು ಕರೆದಮೇಲೆ ಮತ್ತೆ ೬ ತಿಂಗಳೊಳಗೆ ಇನ್ನೊಂದು ಸಭೆಯನ್ನು ಕರೆಯಬೇಕು. ಆ ರೀತಿ ಸಭೆಯನ್ನು ನಾಟಕೀಯವಾಗಿ ಕರೆಯುವ ಬದಲು, ಅಥವಾ ಯಾವುದೋ ಒಂದು ಗೊಂದಲದಲ್ಲಿ ಸಿಕ್ಕಿಕೊಂಡು ಸಭೆಯನ್ನು ಕರೆಯುವ ಬದಲು ವ್ಯವಸ್ಥಿತ ರೀತಿಯಲ್ಲಿ ಸಭೆಯನ್ನು ಕರೆಯಿರಿ. ಈ ಸಭೆಯ ವ್ಯವಸ್ಥೆ ಎಂದೂ ಕೂಡ ಕುಂದಬಾರದು. ಹಿರಿಯ ಮಹನೀಯರ ಆತ್ಮಕ್ಕೆ ಶಾಂತಿ ದೊರಕಬೇಕಾದರೆ ಈ ಸಭೆಯನ್ನು ಅವರು ಯಾವ ಉದ್ದೇಶದಿಂದ ಪ್ರಾರಂಭ ಮಾಡಿದರೋ ಆ ಉದ್ದೇಶಕ್ಕೆ ಭಂಗಬರಬಾರದೆಂಬ ಮಾತನ್ನು ಹೇಳಬಯಸುತ್ತೇನೆ. ಇನ್ನು ಮುಂದೆ ನೂರು ದಿನಗಳ ಕಾಲ ಸಭೆ ನಡೆಯುತ್ತದೆಂದು ನಾನು ಅಂದುಕೊಂಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಾಳೆ ತಮ್ಮ ಉತ್ತರವನ್ನು ಕೊಡುತ್ತಾರೆ, ಅನಂತರ ನಾಡಿದ್ದು ತಮ್ಮ ೪-೫ ಮಸೂದೆಗಳನ್ನು ಪಾಸ್ ಮಾಡಿಕೊಳ್ಳುತ್ತೀರಿ. ಅನಂತರ ತಾವು ಈ ಸಭೆಯನ್ನು ಮತ್ತೆ ಕರೆಯುತ್ತೀರೆಂಬ ನಂಬಿಕೆ ನನಗಂತೂ ಇಲ್ಲ.

ನೀವು ಈ ಸಭೆಯನ್ನು ಕರೆಯುವುದಕ್ಕೆ ಕಷ್ಟವಿದೆ ಎಂಬುದು ನನಗೆ ಗೊತ್ತಿದೆ. ಕಾರಣ ತಾವು ೧೨ ಸೂತ್ರಗಳ ಸಂಕೋಲೆಯಲ್ಲಿ ಸಿಕ್ಕಿಕೊಂಡಿದ್ದೀರಿ. ನಿಮ್ಮ ಮುಖ್ಯಮಂತ್ರಿಗಳನ್ನು ೧೨ ಸೂತ್ರಗಳ ಹೊನ್ನಿನ ಪಂಜರದಲ್ಲಿಟ್ಟಿದ್ದೀರಿ. ಅದ್ದರಿಂದ ಅವರು ಹೊರಗೆ ಬರುವುದಕ್ಕೆ ಕಷ್ಟವಾಗುತ್ತದೆ ೧೨ ಸೂತ್ರಗಳ ಸಂಕೋಲೆಯನ್ನು ದಾಟಿ ಹೊರಗೆ ಬಂದು ಈ ಸಭೆಯನ್ನು ಕರೆಯುತ್ತಾರೆಂದು ನಾನಂತೂ ಅಂದುಕೊಂಡಿಲ್ಲ. ನೀವು ಬಹಳ ಬುದ್ಧಿವಂತರಾಗಿ ತಪ್ಪಿಸಿಕೊಂಡು ಬರುತ್ತಿದ್ದೀರಿ. ಎಲ್ಲ ಗೋಲುಗಳನ್ನೂ ಹೊಡೆದುಕೊಂಡು ಬರುತ್ತಿದ್ದೀರಿ. ಹೇಗೋ. ಏನೋ ಅಂತೂ ನೀವು ಅಂತಿಮಕ್ಕೆ ಬಂದು ತಲುಪುತ್ತಿದ್ದೀರಿ. ದೇಶಕ್ಕೆ, ಶಾಸಕರಿಗೆ, ಸ್ನೇಹಿತರಿಗೆ ವಿರೋಧಪಕ್ಷದ ಶಾಸಕರಿಗೆ ಸುಳ್ಳನ್ನು ಹೇಳಿ ಹೇಳಿ ಇಲ್ಲಿಗೆ ಬಂದು ತಲುಪಿದ್ದೀರಿ. ಇಲ್ಲಿ ೧೨ ಸೂತ್ರಗಳಿವೆ. ಇದರಲ್ಲಿ ೧೦ನ್ನು ಜಾರಿಮಾಡಿದ್ದೀರಂತೆ, ಅದು ಯಾವುದು ಅಂತ ಗೊತ್ತಿಲ್ಲ. ಇನ್ನು ಎರಡು ಸೂತ್ರಗಳು ಉಳಿದಿದೆಯಂತೆ. ಅದು ಮುಗಿದಮೇಲೆ ಮಾನ್ಯ ಸದಸ್ಯರಾದ ಮಹದೇವರಂಥವರಿಗೆ ತುಪ್ಪವನ್ನು ಹಚ್ಚುತ್ತೀರಿ. ಅದರ ಹಣೇಬರಹ ಏನಾಗುತ್ತದೋ ಗೊತ್ತಿಲ್ಲ. ಇನ್ನೇನು ನಾನು ರಾಜಭವನಕ್ಕೆ ಹೋಗುತ್ತೇನೆಂದು ಅವರು ಹೊಸಕೋಟುಗಳನ್ನು ಹೊಲಿಸಿಕೊಂಡು ತಯಾರಾಗಿದ್ದರು. ಆದರೆ ಈಗ ಆ ಕೋಟುಗಳು ಧೂಳು ಹಿಡಿದಿವೆ, ಅವರು ಮಂತ್ರಿಯಾಗುತ್ತಾರೆಂಬ ಭರವಸೆ ನನಗಿಲ್ಲ. ಏಕೆಂದರೆ ಅವರು ಪ್ರತಿದಿನ ಕೋಟು ಹಾಕಿಕೊಂಡು ಬರುತ್ತಿದ್ದುದನ್ನು ಕಂಡು ಏತಕ್ಕೆ ಎಂದು ಕೇಳಿದ್ದೆ, ಮುಖ್ಯಮಂತ್ರಿಗಳು ಯಾವ ಗಳಿಗೆಯಲ್ಲಿ ನನ್ನನ್ನು ರಾಜಭವನಕ್ಕೆ ಕರೆಯುತ್ತಾರೋ ಗೊತ್ತಿಲ್ಲ. ಆದ್ದರಿಂದ ತಾವು ಸಿದ್ಧವಾಗಿರಬೇಕೆಂದು ಹೇಳಿದರು.

ಶ್ರೀ ಎಂ. ಮಹದೇವ್.—ನಾನು ಚಳಿಗೋಸ್ಕರ ಕೋಟನ್ನು ಹಾಕಿಕೊಂಡು ಬಂದಿದ್ದೆ. ಈಗ ಸೆಖೆ ಆಗುತ್ತಿರುವುದರಿಂದ ತೆಳುವಾದ ಬಟ್ಟೆಯನ್ನು ಹಾಕಿಕೊಂಡು ಬರುತ್ತಿದ್ದೇನೆ. ರಾಜ್ಯದ ಮತ್ತು ಪಕ್ಷದ ಹಿತದೃಷ್ಟಿಯಿಂದ ೧೨ ಸೂತ್ರಗಳನ್ನು ನಾವು ಒಪ್ಪಿಕೊಂಡಿದ್ದೇವೆ. ಅವು ಹಂತಹಂತವಾಗಿ ಜಾರಿಯಾಗುತ್ತವೆ. ದಯವಿಟ್ಟು ತಾವು ಆತಂಕವನ್ನು ಪಟ್ಟುಕೊಳ್ಳಬೇಡಿ.

ಶ್ರೀ ವಾಟಾಳ್ ನಾಗರಾಜ್.—ಹಂತಹಂತವಾಗಿ ಜಾರುತ್ತಿದ್ದೀರಿ. ೧೨ ಸೂತ್ರಗಳನ್ನು ನಂಬಿ ಹಂತ ಹಂತವಾಗಿ ಜಾರಿಬೀಳುತ್ತಿದ್ದೀರಿ. ಇನ್ನು ಕೊನೆಯ ೨ ಹಂತಗಳಲ್ಲಿ ಜಾರಿಬೀಳುವುದು ಉಳಿದಿರತಕ್ಕದ್ದು. ಯಾವ ಗಳಿಗೆಯಲ್ಲಿ ೨ ಕೊನೆಯ ಹಂತಗಳಲ್ಲಿ ಜಾರುತ್ತೀರೋ ಗೊತ್ತಿಲ್ಲ. ಚುನಾವಣೆ ಬಹುಶಃ ಮೇ ತಿಂಗಳಲ್ಲಿ ಬರುತ್ತದೆಂದು ನನ್ನ ಭಾವನೆ. ಇದರಲ್ಲಿ ಬೇರೆ ಮಾತೇ ಇಲ್ಲ. ಇವತ್ತು ಈ ಆಯವ್ಯಯ ಮಂಡನೆ, ಮುಖ್ಯಮಂತ್ರಿಗಳಿಂದ ಉತ್ತರ, ನಂತರ ಲೇಖಾನುದಾನ ಪಡೆಯುತ್ತಾರೆ, ಮೇ ತಿಂಗಳಲ್ಲಿ ಚುನಾವಣೆಗೆ ಹೋಗುತ್ತಾರೆ, ಆಗ ನಿಮ್ಮ ಕೋಟುಗಳು ಕ್ಲೋಸೆಟ್‌ಯೊಳಗೆ ಹೋಗುತ್ತವೆ. ನೀವು ಯಾರೂ ಮಂತ್ರಿಗಳಾಗುವುದಿಲ್ಲ. ನಾನು ನೇರವಾಗಿ ಭವಿಷ್ಯವನ್ನು ಹೇಳುತ್ತಿದ್ದೇನೆ. ನಿಮ್ಮ ಸರ್ಕಾರ ಏನೇನು ಸಾಧನೆ ಮಾಡಿದೆಯೆಂಬುದನ್ನು ಹೇಳುವಾಗ......

ಶ್ರೀ ಎಂ ಮಹದೇವ್.—ಮಾನ್ಯ ನಾಗರಾಜ್‌ರವರೇ, ಚುನಾವಣೆಯು ಈ ರಾಜ್ಯದಲ್ಲಿ ನಡೆಯಬೇಕಾದರೆ ನವಂಬರ್‌ನಲ್ಲಿಯೇ. ಮಧ್ಯಂತರ ಚುನಾವಣೆಗಳಂತೂ ನಡೆಯುವುದೇ ಇಲ್ಲ. ಹಾಗೇನಾದರೂ ಮಾಡಿದರೆ ನಾವು ಚುನಾವಣೆಗೆ ಹೋಗುತ್ತೇವೆ.

ಶ್ರೀ ವಾಟಾಳ್‌ನಾಗರಾಜ್.—ನೀವು ಏನೇ ಹೇಳಿ. ಇನ್ನೂ ತಾವು ಆಶೆಯನ್ನು ಇಟ್ಟುಕೊಂಡಿದ್ದೀರಲ್ಲ ? ಅಧ್ಯಕ್ಷರೇ, ತಮಗೆ ಅರ್ಥವಾಯಿತು ಎಂದು ಕಾಣುತ್ತದೆ. ನಾನು ಹೇಳಿದ್ದು ಕರೆಕ್ಟ್, ಆದ್ದರಿಂದ ನನ್ನ ಪಕ್ಕದ ಕ್ಷೇತ್ರದವರು ನಾನೂ ಏನೋ ನೋಡೋಣ. ಇವರು ಕಾರು ಬಾವುಟ ಯಾವತ್ತಾದರೂ ನೋಡೋಣವೆಂದು ಇದ್ದೆ. ಅವರು ಇನ್ನೂ ಆ ಆಸೆಯನ್ನು ಇಟ್ಟುಕೊಂಡು ಕುಳಿತಿದ್ದಾರೆ. ಖಂಡಿತವಾಗಿಯೂ ಇಟ್ಟುಕೊಳ್ಳಬೇಡಿ.

ಶ್ರೀ ಎಂ. ಮಹದೇವ್.—ನಾನು ಮಂತ್ರಿಯಾಗುತ್ತೇನೆಂದು ಹೇಳುತ್ತಿಲ್ಲ. ನಾನು ಹೇಳಿದ್ದು ಮಂತ್ರಿಮಂಡಲ ವಿಸ್ತರಣೆ ಆದರೂ ಸಹ ಚುನಾವಣೆ ನವಂಬರ್‌ನಲ್ಲಿಯೇ ಆಗುವುದು. ಆದ್ದರಿಂದ ತಮಗೆ ಮಧ್ಯಂತರದ ಚುನಾವಣೆಯ ಕಳವಳ ಬೇಡವೇ ಬೇಡವೆಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಹದೇವ್‌ರವರು ತಪ್ಪುತಿಳಿದುಕೊಂಡಿದ್ದಾರೆ. ಇಲ್ಲಿ ಏನಾಗಿದೆ ಎಂದರೆ ಇವರು ಬಹಳ ಭದ್ರವಾಗಿದ್ದರು. ನಾನು ಇಲ್ಲವೆಂದು ಹೇಳಲಿಲ್ಲ. ನಿಮ್ಮ ಭದ್ರ ಈಗ ದಿಕ್ಕುತಪ್ಪಿ ಹೋಯಿತು. ಈಗ ಮೂರುಜನ ಒಂದಾಗಿಬಿಟ್ಟಿದ್ದಾರೆ. ಮಾನ್ಯ ಮೊಯಿಲಿಯವರು ಮಾನ್ಯ ಎಸ್. ಎಂ. ಕೃಷ್ಣರವರು, ಮತ್ತು ಮಾನ್ಯ ರಾಜಶೇಖರ ಮೂರ್ತಿಯವರು ಈ ಮೂರು ಜನರು ಒಂದಾಗಿ ಬಿಟ್ಟಿದ್ದಾರೆ. ನಿಮ್ಮಲ್ಲಿ ಯಾರೂ ಇಲ್ಲ. ಅವರು

ನಿಮ್ಮನ್ನೂ ಬಿಟ್ಟರು ಎಲ್ಲರನ್ನೂ ಬಿಟ್ಟರು. ಅವರು ಮೂರುಜನರು ಒಂದಾದರು. ಆದ್ದರಿಂದ ನಿಮಗೆ ಉಳಿದಿರುವುದು ೧-೨-೩. ಮೂರೇ ಮೂರು, ಇನ್ನು ಏನೂ ಇಲ್ಲ. ಮೂರು ನಾಮ ಮಾತ್ರ. ಆದ್ದರಿಂದ ತಾವು ಏನಾದರೂ ಆಸೆಯನ್ನು ಇಟ್ಟುಕೊಂಡಿದ್ದರೆ ಆ ಮೂರು ನಾಮವನ್ನಿಟ್ಟುಕೊಂಡು ನೀವು ಬೇಕಾದರೆ ಇನ್ನೂ ತೀರ ಹೋಗಬೇಕಾದರೆ ತಿರುಪತಿಯ ಕಡೆಗೆ ಹೋಗಬಹುದು.

ಶ್ರೀ ಎಂ. ಮಹದೇವ್.—ಈ ನಮ್ಮ ಮೂರು ಜನರು ಒಂದಾಗಿರುವುದರಿಂದ ನಮ್ಮ ಒಗಟ್ಟು ಎಷ್ಟಿದೆ ಎನ್ನುವುದನ್ನು ತೋರಿಸುತ್ತದೆ. ಈ ಮೂರು ಜನರ ಮೇಲೂ ನಮಗೆ ಬಹಳ ವಿಶ್ವಾಸವಿದೆ. ಮೂರು ನಾಮ ಹಾಕುವ ಪ್ರಶ್ನೆಯೇ ಇಲ್ಲ. ನೀವು ನಾಲ್ಕು ನಾಮವನ್ನು ಹಾಕಿಕೊಳ್ಳಬೇಕಾಗುತ್ತದೆ.

ಶ್ರೀ ವಾಟಾಳ್‌ನಾಗರಾಜ್.—ನಾನು ನಿಮ್ಮ ಹಾಗೆ ಮಂತ್ರಿಯಾಗಬೇಕೆಂದು ಹೊರಟಿರುವವನಲ್ಲ.

ಶ್ರೀ ಎನ್. ಜಯಣ್ಣ (ಮುಖ್ಯ ಸಚೇತಕರು).—ಅವರಿಗೆ ಆರೀತಿ ಆಸೆ ಏನೂ ಇಲ್ಲ.

ಶ್ರೀ ವಾಟಾಳ್‌ನಾಗರಾಜ್.—ಇಲ್ಲವೇ, ಛೇ ಛೇ ಜಯಣ್ಣನವರೇ ನೀವು ಇದನ್ನು ಹೇಳಬೇಡಿ. ತಾವು ಮುಖ್ಯ ಸಚೇತಕರಾಗಿದ್ದೀರಿ. ನಿಮ್ಮ ಆತ್ಮವನ್ನು ಮುಟ್ಟಿ ಬಲಗಡೆ ಕೈ ಇಟ್ಟುಕೊಳ್ಳಿ. ನೀವು ಈಗ ಕೇಳಿ, ಅವರಿಗೆ ಇಲ್ಲವೇ ಎಂದು. ನಿಮ್ಮ ಹತ್ತಿರ ಅವರು ಎಷ್ಟುಸಲ ಮಾತನಾಡಿರಬಹುದು. ನೀವು ಎಷ್ಟುಸಲ ಅವರ ಹತ್ತಿರ ಸಂಧಾನ ಮಾಡಿರಬಹುದು.

ಶ್ರೀ ಎ. ಕೆ. ಅನಂತಕೃಷ್ಣ.—ಮಾನ್ಯ ವಾಟಾಳ್‌ನಾಗರಾಜ್‌ರವರೇ, ಈಗ ತಾವೇ ಹೇಳಿದಿರಿ, ಸವಿಸ್ತಾರವಾಗಿ ಚರ್ಚೆಯಾಗಬೇಕು, ಮುಂಗಡ ಪತ್ರದ ಮೇಲೆ ಎಂದು. ಆದರೆ ಇನ್ನೂ ತಾವು ಪ್ರಥಮ ಪುಟಕ್ಕೆ ಬಂದಿಲ್ಲವೆಂದರೆ ಇದು ಎಲ್ಲಿಗೆ ಹೋಗುತ್ತದೆ, ಹ್ಯಾಗೆ ಹ್ಯಾಗೆ ಹೋಗುತ್ತವೆಂಬುದು ಗೊತ್ತಾಗುತ್ತಿಲ್ಲ. ಹೀಗಾದರೆ ನಾವು ಮಾತನಾಡುವುದು ಯಾವಾಗ.

ಶ್ರೀ ವಾಟಾಳ್‌ನಾಗರಾಜ್.—ಬಜೆಟ್‌ನ ಸಂಪೂರ್ಣ ಸಾರಾಂಶವನ್ನು ಹೇಳುತ್ತಿದ್ದೇನೆ. ಅದೆಲ್ಲ ಇಲ್ಲಿ ಇದೆ. ಇದು ಸಾರಾಂಶವೇ ಈ ೧೨ ಸೂತ್ರ. ಈ ೧೨ ಸೂತ್ರಗಳಲ್ಲಿ ಇವರ ಮುಂದಿನ ಹಣೆಬರಹ ಏನೆಂದು ಈ ಆಯವ್ಯಯ ಏನು ಇದೆ ಅದೇ ತೋರಿಸುತ್ತದೆ. ಆದ್ದರಿಂದ ನಾನು ಮಾನ್ಯ ಮಹದೇವ್‌ರವರ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿರತಕ್ಕಂಥ ಮನುಷ್ಯ ಅದರಲ್ಲೇನು ಸಂಶಯವಿಲ್ಲ. ಪಾಪ ನಾನು ಅವರಿಗೆ ಇವತ್ತೋ ನಾಳೆ ಮಂತ್ರಿಪದವಿ ಬರುತ್ತದೋ ಏನೋ ಎಂದು ತಿಳಿದುಕೊಂಡಿದ್ದೆ ಇಷ್ಟರಲ್ಲಿಯೇ ಕರೆ ಬರುತ್ತದೆಂದು ತಿಳಿದುಕೊಂಡಿದ್ದೆ. ಮಾನ್ಯ ಪುಟ್ಟಸ್ವಾಮಿಗೌಡರು ಏನು ಹೇಳುತ್ತಾರೆ ಗೊತ್ತೆ, ೧೦ನೇ ತಾರೀಖಿನವರೆಗೆ ಕಾದಿದ್ದೇವೆ ೧೦ ನಂತರ ನೋಡಿಬಿಡುತ್ತೇವೆ ಎಂದು ಹೇಳುತ್ತಾರೆ. ಆಮೇಲೆ ಏನಾಗುತ್ತದೆ, ಹತ್ತಲ್ಲ ಮೂವತ್ತಾದರೂ ಏನೂ ಆಗುವುದಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೇ ನನಗನಿಸುತ್ತದೆ, ಈ ರಾಜ್ಯದ ಆಡಳಿತ ನಡೆಸತಕ್ಕಂಥ ವ್ಯವಸ್ಥೆ ಇವತ್ತು ೧೨ ಸೂತ್ರಗಳಲ್ಲಿ ಕುಸಿದು ಬಿದ್ದಿದೆ. ಈ ಸರ್ಕಾರದ ಆಡಳಿತ ೫ ವರ್ಷಗಳಿಂದ ಅಂದರೆ ಕಾಂಗ್ರೆಸ್ ಸರ್ಕಾರದ ಆಡಳಿತ ಪ್ರಾರಂಭವಾದಾಗಿನಿಂದ ಎಷ್ಟು ಜನ ಮಂತ್ರಿಗಳಾದರು, ಮೂರು ಜನ ಮುಖ್ಯಮಂತ್ರಿಗಳು ಆಗಿ ನಾಲ್ಕನೆ ಮುಖ್ಯಮಂತ್ರಿಯ ಕಡೆ ದಿಕ್ಕಾಪಾಲಾಗಿ ನೀವು ಅಡಿ ಕಾಡಿ ಬೇಡಿ ಕೊನೆಗೆ ಈಗ ಅವರು ಒಂದಾಗಿದ್ದಾರೆ. ನಾವೆಲ್ಲ ಒಂದಾಗಿದ್ದೇವೆಂದು ತಾವು ಹೇಳುತ್ತಿದ್ದೀರಿ. ಸಂತೋಷ ನಾವೆಲ್ಲ ಒಂದಾಗಿದ್ದೇವೆಂದು ತಾವು ಹೇಳುತ್ತಿದ್ದೀರಿ. ಸಂತೋಷ ನೀವು ಒಂದಾಗಿ ಅದರಲ್ಲಿ ನನಗೆ ನೀವು ಎರಡಾಗಬೇಕೆಂದು ನನ್ನ ಭಾವನೆ ಇಲ್ಲ. ಮತ್ತೆ ನನಗನಿಸುತ್ತದೆ ಮೂರು ಜನ ಮುಖ್ಯ ಮಂತ್ರಿಗಳ ಕಾಲದಲ್ಲಿ ಎಷ್ಟು ಕಾಲ ವ್ಯಯವಾಗಿರಬಹುದು. ಆಡಳಿತ ಎಷ್ಟು ದುಸ್ಥಿತಿಗೆ ಬಂದಿರಬಹುದು. ಈ ಮಂತ್ರಿಗಳನ್ನು ಬದಲಾವಣೆ ಮಾಡತಕ್ಕಂಥ ಸಂದರ್ಭದಿಂದ ಕನಿಷ್ಟ ಒಬ್ಬೊಬ್ಬ ಮಂತ್ರಿಯನ್ನು ಬದಲಾವಣೆ ಮಾಡುವಾಗ ಆರುತಿಂಗಳು ಆರುತಿಂಗಳು ಸರ್ಕಾರದ ಆಡಳಿತ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಆದ್ದರಿಂದ ಈ ರಾಜ್ಯದಲ್ಲಿ ಒಂದೂವರೆ ವರ್ಷಕಾಲದಿಂದ ನಿಮ್ಮ ಕಾಂಗ್ರೆಸ್ ಆಡಳಿತದಲ್ಲಿ ಏನೂ ನಡೆದಿಲ್ಲ. ನೀವು ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡುವುದರಲ್ಲೇ ಇದ್ದೀರಿ. ಈ ರಾಜ್ಯದ ಅಭ್ಯುದಯದ ಬಗ್ಗೆ ರಾಜ್ಯದ ಕಲ್ಯಾಣದ ಬಗ್ಗೆ ಮರೆತು ಕೇವಲ ಮುಖ್ಯ ಮಂತ್ರಿಗಳ ಬದಲಾವಣೆಯಲ್ಲೇ ಇದ್ದೀರಿ. ಈಗಿನ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ತಮಗೆ ಹೇಳುತ್ತೇನೆ, ಆರು ತಿಂಗಳಿನಿಂದ ಒಂದು ಕಡೆಯವರಿಂದ ಈಗಿನ ಮುಖ್ಯಮಂತ್ರಿಗಳನ್ನು ಕೆಳಕ್ಕೆ ಇಳಿಸಬೇಕೆಂದು ಹೋರಾಟ ಆದರೆ ಮತ್ತೊಂದು ಕಡೆಯವರಿಂದ ಇವರನ್ನೇ ಉಳಿಸಿಕೊಳ್ಳಬೇಕೆಂದು ಹೋರಾಟ ನಡೆಯುತ್ತಿದೆ. ಈ ಹೋರಾಟವನ್ನು ಬಿಟ್ಟರೆ ರಾಜ್ಯದಲ್ಲಿ ಏನಾದರೂ ಆಡಳಿತ ನಡೆದಿದೆಯೋ ? ಜನಸಾಮಾನ್ಯರಿಗೆ, ರಾಜ್ಯದ ಅಭ್ಯುದಯದ ಬಗ್ಗೆ ಜನರ ಕಲ್ಯಾಣದ ಬಗ್ಗೆ ಈ ಆಡಳಿತ ನಡೆಯುತ್ತಿಲ್ಲವೆನ್ನುವ ಮಾತನ್ನು ಘಂಟಾಘೋಷವಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಜನ ಸಾಮಾನ್ಯರ ಬಗ್ಗೆ, ರಾಜ್ಯದ ಅಭ್ಯುದಯದ ಬಗ್ಗೆ ಮತ್ತು ನಾಡಿನ ಕಲ್ಯಾಣದ ಬಗ್ಗೆ ಸ್ವಲ್ಪವೂ ಆಡಳಿತ ನಡೆದಿಲ್ಲ ಎನ್ನತಕ್ಕ ಮಾತನ್ನು ಘಂಟಾಘೋಷವಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವ ಈ ಆಯುವ್ಯಯ ಚುನಾವಣೆಗೆ ಸಿದ್ಧವಾಗಿರತಕ್ಕ ಆಯುವ್ಯಯ ಎಂಬುದನ್ನು ಎತ್ತಿತೋರಿಸುತ್ತದೆ. ಇದರಲ್ಲಿ ಏನೂ ಇಲ್ಲ. ಈ ರಾಜ್ಯದ ಎಲ್ಲ ವರ್ಗದ ಜನರಿಂದ ಶಹಭಾಸ್‌ಗಿರಿ ತೆಗೆದುಕೊಳ್ಳಬೇಕೆಂದು ತಾವು ಹೊರಟಿದ್ದೀರಿ. ಕೇಂದ್ರದಲ್ಲೂ ಅದೇ ಆಗಿದೆ. ಕೇಂದ್ರದಲ್ಲೂ ಕೇಂದ್ರದ ಅರ್ಥ ಸಚಿವರಾದ ಸನ್ಮಾನ್ಯ ಮಾನಮೋಹನ ಸಿಂಗ್ ಅವರು ಮಂಡಿಸಿರುವ ಆಯುವ್ಯಯದ ಸಂಪೂರ್ಣ ತಿರುಳೂ ಸಹ ಒಂದು ರೀತಿ ದಕ್ಷಿಣದ ಚುನಾವಣೆಯ ದಿಕ್ಕಿಗೆ ತೋರಿಸಿರು ವಂಥದ್ದಾಗಿದೆ. ಆರೋಗ್ಯಕರವಾದ ಚುನಾವಣೆಯಾಗಬಹುದು ಎಂದು ಅವರೇನು ತೋರಿಸಿದ್ದಾರೆ, ತಾವೂ ಅದೇ ತೋರಿಸಿದ್ದೀರಿ. ಬಸವೇಶ್ವರನನ್ನು ಇದರಲ್ಲಿ ನೆನೆದಿದ್ದೀರಿ. ಕೂಡಲ ಸಂಗಮದ ಬಗ್ಗೆ ಅನುಕೂಲ ಮಾಡಿದ್ದೇವೆ ಎಂದು ಹೇಳಿದ್ದೀರಿ. ಕನಕದಾಸರನ್ನು ನೆನೆದಿದ್ದೀರಿ. ಅಂಬೇಡ್ಕರ್ ಅವರನ್ನು ನೆನೆದಿದ್ದೀರಿ. ಇಲ್ಲಿ ಯಾವುದನ್ನೂ ಬಿಟ್ಟಿಲ್ಲ, ಎಲ್ಲರನ್ನೂ ನೀವು ನಂಬಿಸಿ ಮುಂದೆ ಏನು ಮಾಡುತ್ತೀರೋ ಗೊತ್ತಿಲ್ಲ. ಅಂತೂ ಎಲ್ಲರನ್ನೂ ನಂಬಿಸಿದ್ದೀರಿ, ಒಂದು ರೀತಿ ಜಾಣ್ಮೆಯಿಂದ ಮಾಡಿದ್ದೀರಿ. ಕೊನೆಗೆ ಎಲ್ಲಿಗೆ ಬಂದಿದ್ದೀರಿ ನೀವು? ರಿಯಾಯಿತಿಗಳನ್ನು ಬಹಳವಾಗಿ ಕೊಟ್ಟಿದ್ದೀರಿ. ನಿಮ್ಮ ರಿಯಾಯಿತಿಗಳು ಕಸಪೊರಕೆಗೆ, ಮಂಗಳಸೂತ್ರಕ್ಕೆ, ತೊಟ್ಟಿಲುಗಳಿಗೆ ಹಾಲಿನ ಬಾಟ್ಲಿಗೆ ಸಿಕ್ಕಿದೆ. ಎಲ್ಲಾ ಒಂದು ತರಹ ಚೆನ್ನಾಗಿದೆ. ಕನ್ನಡ ಶಬ್ದಕೋಶದಲ್ಲಿರುವ ಎಲ್ಲಾ ಪದಗಳನ್ನೂ ನೀವು ಒಂದೊಂದು ಕಾರ್ಯಕ್ರಮಕ್ಕೆ ಉಪಯೋಗಿಸಿದ್ದೀರಿ. ಈ ಶಬ್ದಕೋಶವನ್ನು ನಾವು ನೋಡಿ ಚಿಂತನೆ ಮಾಡಿ ಬರುವಷ್ಟರ ಹೊತ್ತಿಗೆ ಮುಂದಿನ ಬಜೆಟ್ ಬಂದುಬಿಡುತ್ತದೆಯೋ ಹೊರತು ಬೇರೇನು ಕಾರ್ಯಕ್ರಮಗಳು ಆಗುತ್ತದೆಂದು ನಾನು ಅಂದುಕೊಂಡಿಲ್ಲ. ಇದು ಬರೀ ಭರವಸೆಗಳು. ಪ್ರತಿ ಪುಟದಲ್ಲೂ ಭರವಸೆಗಳು. ಕೇಂದ್ರದಿಂದ ಹೀಗೆ ಬರುತ್ತದೆ, ಮುಂದೆ ಹಾಗೆ ಮಾಡುತ್ತಿದ್ದೇವೆ, ನಾವು ಇಲ್ಲಿ ಹೋಗಿದ್ದೇವೆ, ನಾವು ಅಲ್ಲಿ ತಲುಪುತ್ತಿದ್ದೇವೆ ಹೀಗೆ ಎಲ್ಲಾ ಭರವಸೆಗಳು, ನಾವು ಹಣ ಕೊಟ್ಟಿದ್ದೇವೆ. ಇದಕ್ಕೆ ಮೂರು ಕಾಸು ಕೊಟ್ಟಿದ್ದೇವೆ. ಅದಕ್ಕೆ ಆರು ಕಾಸು ಕೊಟ್ಟಿದ್ದೇವೆ ಎಂದು ಎಲ್ಲ ಮೂರು ಮೂರು ಕಾಸು ಇಟ್ಟುಬಿಟ್ಟಿದ್ದೀರಿ, ದೇವರಾಜ ಅರಸು ಸ್ಮಾರಕ ಭವನಕ್ಕೆ 20 ಲಕ್ಷ ರೂಪಾಯಿ ಇಟ್ಟಿದ್ದೇವೆ, ಅಂಬೇಡ್ಕರ್‌ಗೆ ಇಷ್ಟು ಇಟ್ಟಿದ್ದೇವೆ, ಕೂಡಲ ಸಂಗಮ ರಿಪೇರಿಗೆ ಇಷ್ಟು, ಕನಕದಾಸರಿಗೆ ಇಷ್ಟು ಎಂದು ಎಲ್ಲರಿಗೂ ಒಂದೊಂದು ಚೂರು ಹಣ ಒದಗಿಸಿಬಿಟ್ಟಿದ್ದೀರಿ. ಹೀಗಾದರೆ ನಾವೇನು ತಿಳಿದುಕೊಳ್ಳಬೇಕು? ಬಸವೇಶ್ವರರನ್ನು ಹೊಗಳಿದ್ದಾರೆ, ಕನಕದಾಸರನ್ನು ಹೊಗಳಿದ್ದಾರೆ, ಅಂಬೇಡ್ಕರ್ ಅವರನ್ನು ಹೊಗಳಿ ದ್ದಾರೆ, ನಮ್ಮ ಮುಖ್ಯ ಮಂತ್ರಿಗಳು ಟಿಪ್ಪು ಸುಲ್ತಾನ್ ಬಗ್ಗೆ ಹೊಗಳಿದ್ದಾರೆ. ಹೇಗೆ ಮ್ಯಾಜಿಕ್ ಮಾಡಿದ್ದಾರೆಂದರೆ ತಾವೆಲ್ಲಾ ನೋಡಿರಬಹುದು, ಹಳ್ಳಿ ಕಡೆ ಡಬ್ಬ ಹೊಡೆಯುತ್ತಾರೆ. ಬಾಂಬೆ ಷೋ ಎಂದು ಡಬ್ಬದಲ್ಲಿ ಚಿತ್ರಗಳನ್ನು ತೋರಿಸುತ್ತಾರೆ. ನಾವು ಕಣ್ಣಿಟ್ಟು ನೋಡುತ್ತಿದ್ದರೆ ತಾಜಮಹಲ್ ಕಂಡಿತಾ ಎಂದು ಕೇಳುತ್ತಾರೆ ಡಬ್ಬ ಹೊಡೆಯುವವರು. ತಾಜಮಹಲ್ ಕಾಣ್ತು ಸ್ವಾಮಿ, ಅಂದರೆ ಇನ್ನೊಂದು ಸಾರಿ ಡಬ್ಬ ಹೊಡೆಯುತ್ತಾನೆ. ರಾಣಿ ಕಾಣಿಸ್ತು ಸ್ವಾಮಿ ಅಂದರೆ ಇನ್ನೊಂದು ಸಾರಿ ಡಬ್ಬ ಹೊಡೆಯುತ್ತಾನೆ. ಹೀಗೆ ಬಾಂಬೆ ಷೋ ತೋರಿಸಿಬಿಟ್ಟಿದ್ದೀರಲ್ಲ ನಮಗೆ ಏನಿದು? ಎಷ್ಟು ರುಚಿಯಾಗಿದೆ. ಕಿತ್ತೂರು ರಾಣಿ ಚೆನ್ನಮ್ಮ, ಆಮೇಲೆ ಇನ್ನೊಂದು. ಇಡೀ ಇಲಾಖೆಗಳಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಟಿಪ್ಪು ಸುಲ್ತಾನ್ ಭಾವ ಚಿತ್ರಗಳನ್ನು ಎಲ್ಲಾ ಕಡೆ ಹಾಕಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ಚಾಣಕ್ಯರು. ಒಂದು ಗುಣ ಅವರಲ್ಲಿ ನಾನು ಮೆಚ್ಚುತ್ತೇನೆ. ಏನೇ ಮಾಡಿದರೂ ಅವರ ಭಾವನೆ, ಯಾರನ್ನಾದರೂ ನೋಡಿದಾಗ ಮಾತನಾಡತಕ್ಕ ಸ್ನೇಹ ಇದೆಯಲ್ಲ, ಅದನ್ನು ನಾನು ಮೆಚ್ಚುತ್ತೇನೆ, ಎಷ್ಟು ಸ್ನೇಹವಾದ, ನಯವಾದ ಮಾತನ್ನು ಇದರಲ್ಲಿ ಮಂಡಿಸಿದ್ದಾರೆ ಎಂದರೆ ಅದು ನಮಗೆ ಶೋಚನೀಯವಾಗುತ್ತದೆ. ನಾನು ಸಮಗ್ರವಾಗಿ ಎಲ್ಲಾ ನೋಡಿದ್ದೇನೆ. ಪ್ರತಿಯೊಂದೂ ಭರವಸೆಗಳು. ಭರವಸೆಯ ಮರಳಿನ ಗೋಪುರವನ್ನು ನಮ್ಮ ಮುಖ್ಯ ಮಂತ್ರಿಗಳು ಕಟ್ಟಿದ್ದಾರೆ. ಅದಕ್ಕಾಗಿ ಹಗಲು ರಾತ್ರಿ ಶ್ರಮ ವಹಿಸಿ ಕೆಲಸವನ್ನು ಮಾಡಿದ್ದಾರೆ. ನನಗನ್ನಿಸುತ್ತದೆ ಅಧ್ಯಕ್ಷರೆ, ಈ ಆಯುವ್ಯಯ ಸಂಪೂರ್ಣವಾಗಿ ಚುನಾವಣೆಯ ದಿಕ್ಕಿಗೆ ದಾರಿಯನ್ನು ತೋರಿಸತಕ್ಕ ಆಯುವ್ಯಯ ವಾಗಿದೆ. ಅದರಲ್ಲಿ ಎರಡನೇ ಅಭಿಪ್ರಾಯವೇ ಇಲ್ಲ. ಬೇರೆ ಮಾತೇ ಇಲ್ಲ. ನಾನು ಮೆಚ್ಚುತ್ತೇನೆ. ಏಕೆಂದರೆ, ಎಲ್ಲರನ್ನೂ ನೆನೆದಿದ್ದಾರೆ. ಕೊನೆಗೆ ಆರು ಕಾಸೋ ಮೂರು ಕಾಸೋ ಕೊಟ್ಟಿದ್ದಾರೆ. ನಮಗೊಂದು ಮೂರು ಕಾಸು, ನಿಮಗೊಂದು ಮೂರು ಕಾಸು ಅವರಿಗೊಂದು ಮೂರು ಕಾಸು. ಹೀಗೆ ಎಲ್ಲರಿಗೂ ಕಾಸು ಕೊಟ್ಟು ನಮ್ಮನ್ನು ಕೂರಿಸಿದ್ದಾರೆ. ಸಂತೋಷ ನಮಗೆ. ನಾನು ಅತ್ಯಂತ ಸಂತೋಷ ಪಡುತ್ತೇನೆ. ಆದರೆ ಇದರಲ್ಲಿ ಅನೇಕ ವಿಚಾರಗಳು ಜಾರಿಯಲ್ಲಿಲ್ಲ.

೫-೫೦ ಪಿ. ಎಂ.

ತಾವು ಹೇಳಿಕೊಂಡು ಬಂದಂತಹ ಚಿನ್ನಪ್ಪರೆಡ್ಡಿ ವರದಿಯ ಬಗ್ಗೆ ಇದರಲ್ಲಿ ಎಲ್ಲಿ ತೋರಿಸಿದ್ದೀರಿ ಹೇಳಿ ? ನೀವು ಅಧಿಕಾರಕ್ಕೆ ಬಂದಾಗಿನಿಂದಲೂ ಹೇಳಿದ್ದೀರಿ. ಚಿನ್ನಪ್ಪರೆಡ್ಡಿಯವರ ವರದಿಯನ್ನು ನಾಳೆ ಬೆಳಿಗ್ಗೆ ಜಾರಿಗೆ ಕೊಡುತ್ತೇವೆಂದು ವೀರೇಂದ್ರಪಾಟೀಲರು ಹೇಳಿದರು, ಬಂಗಾರಪ್ಪನವರು ಹೇಳಿದರು, ಮೊಯಿಲಿಯವರು ಹೇಳಿದರು. ಈಗ ಮೊಯಿಲಿಯವರು ನವೆಂಬರ್‌ನಲ್ಲಿ ಜಾರಿಗೆ ಕೊಡುತ್ತೇವೆಂದು ಹೇಳುತ್ತಾರೆ. ನವೆಂಬರ್‌ಗೆ ನಿಮ್ಮ ಸರ್ಕಾರ ಎಲ್ಲಿರುತ್ತದೆ ಸ್ವಾಮಿ ? ನವೆಂಬರ್‌ನಲ್ಲಿ ನೀವೇ ಅಧಿಕಾರಕ್ಕೆ ಬರಬಹುದು ಅಥವಾ ಬಿಡಬಹುದು. ಆದರೆ ಸರ್ಕಾರ ಇದ್ದರೆ ತಾನೆ. ಮೇನಲ್ಲಿ ಚುನಾವಣೆಯಾದರೆ ನವೆಂಬರ್‌ಗೆ ಎಲ್ಲಿ ? ಆದ್ದರಿಂದ ಚಿನ್ನಪ್ಪರೆಡ್ಡಿಯವರ ವರದಿಯ ಬಗ್ಗೆ ಇದರಲ್ಲಿ ತೋರಿಸಬೇಕಾಗಿತ್ತು. ವರದಿಯನ್ನು ಚಾಚೂತಪ್ಪದೆ ಏನೇ ಆಗಲಿ ಜಾರಿಗೆ ತರುತ್ತೇವೆಂದು ಹೇಳಬೇಕಾಗಿತ್ತು, ಆದರೆ ಎಲ್ಲಿ ಹೇಳಿದ್ದೀರಿ ? ಆದರ ಬಗ್ಗೆ ನಿಮ್ಮ ಬಜೆಟ್ ಭಾಷಣದಲ್ಲಿ ಒಂದು ಅಕ್ಷರ ಯಾವ ಮೂಲೆಯಲ್ಲಿ ಹುಡುಕಿದರೂ ಸಿಗುವುದಿಲ್ಲ. ಪುಟ ಪುಟಗಳನ್ನು ನೋಡಿದರೂ ಕಾಣಲಿಲ್ಲ. ತಮಗೆ ನಾನು ಕೇಳುತ್ತೇನೆ, ಸರ್ಕಾರ ಒಂದು ಪರಿಣಾಮಕಾರಿಯಾದ ಪ್ರಾಮಾಣಿಕ ನಿಲುವಿನ ಬಗ್ಗೆ ನೀವು ಏನಾದರೂ ಹೇಳಿದ್ದೀರಾ ? ಇದರಲ್ಲಿ ಏನೇನೂ ಹೇಳಲಿಲ್ಲ. ಆದರಿಂದ ನನಗನ್ನಿಸುತ್ತದೆ, ಈ ರೀತಿ ಆಯವ್ಯಯವನ್ನು ಮಂಡಿಸುವುದರ ಮೂಲಕ ಇದನಲ್ಲಿ ನಮಗೆ ಒಂದು ರೀತಿಯ ಸಂತೋಷ, ಆಸೆ ಆಮಿಷಗಳನ್ನು ತೋರಿಸಿದ್ದಾರೆ. ಇದರಲ್ಲಿ ಪ್ರಾಮಾಣಿಕವಾದಂತಹ ಚಿಂತನೆಯನ್ನು ಮಾಡಿದ್ದೀರಾ ಎನ್ನತಕ್ಕ ಮಾತು ಹೇಳುವುದಕ್ಕೆ ನಾನು ಹಿಂದೇಟು ಹೊಡೆಯುತ್ತಿದೆ, ಒಂದು ರೀತಿ ಮಾಯಮಂತ್ರ ಮಾಡಿದ್ದೀರಿ. ಆದ್ದರಿಂದ ನನಗನ್ನಿಸುತ್ತದೆ, ಇದು ಸರಿಯಾದ ರೀತಿ ಮಂಡಣೆಯಾಗಿಲ್ಲ, ತಮಗೆ ನಾನು ಕನ್ನಡ ಆಡಳಿತ ಭಾಷೆಯ ಬಗ್ಗೆ ಈ ರಾಜ್ಯದಲ್ಲಿ ಯಾರಾದರೂ ಕನ್ನಡವನ್ನು ಒಪ್ಪಬಹುದು ಬಿಡಬಹುದು ನಾನು ಯಾರ ಮನೆಯ ಹತ್ತಿರ ಹೋಗಿ ಕೇಳಬೇಕಾಗಿಲ್ಲ, ನಾನು ಒಪ್ಪುತ್ತೇನೆ. ನನ್ನ ಕೊನೆಯ ಉಸಿರು ಇರುವವರೆಗೆ ಕನ್ನಡದ ಉದ್ಧಾರಕ್ಕೆ ಕನ್ನಡದ ಬೆಳವಣಿಗೆಗೆ ನಾನು ಇರುತ್ತೇನೆ, ನಮ್ಮ ಕನ್ನಡದ ಪರ ಚಳುವಳಿ ಈ ರಾಜ್ಯದಲ್ಲಿ ನಡೆದಾಗ ಕನ್ನಡಕ್ಕೆ ಶಕ್ತಿಪೂರ್ಣವಾದಂತಹ ಚೈತನ್ಯ ಪೂರ್ಣವಾದಂತಹ ಅರ್ಥಪೂರ್ಣವಾದಂತಹ ಒಂದು ಆಯಾಮವನ್ನು ದೊರಕಿಸುತ್ತೇನೆ. ನಾವು ಸುಮ್ಮನೆ ನಾಟಕೀಯವಾಗಿ ಸುಮ್ಮನೆ ಚಳುವಳಿ ಮಾಡುವುದಿಲ್ಲ.

ಶ್ರೀ ಡಿ. ಕೆ. ಶಿವಕುಮಾರ್.—ನಿಮ್ಮ ಕನ್ನಡದ ಅಭಿಮಾನದ ಬಗ್ಗೆ ಯಾರೂ ಅನುಮಾನ ವ್ಯಕ್ತಪಡಿಸುತ್ತಿಲ್ಲ. ಏಕೆ ಸುಮ್ಮನೆ ಮಾತನಾಡುತ್ತೀರಿ ? ನಿಮ್ಮ ಕನ್ನಡ ಅಭಿಮಾನದ ಬಗ್ಗೆ ನಮಗೆ ಅನುಮಾನವಿಲ್ಲ.

ಶ್ರೀ ವಾಟಾಳ್‌ನಾಗರಾಜ್.—೧೯೭೦ನೇ ಇಸವಿ ಸೆಪ್ಟೆಂಬರ್ ೭ನೇ ತಾರೀಖು ರಾಜ್ಯದಲ್ಲಿ ಕನ್ನಡ ಉದಯವಾಗಬೇಕು, ಕನ್ನಡ ಆಡಳಿತ ಭಾಷೆಯಾಗಬೇಕು, ಕರ್ನಾಟಕ ಎಂದು ನಾಮಕರಣವಾಗಬೇಕೆಂದು ಮೆರವಣಿಗೆಯನ್ನು ತೆಗೆದಾಗ ಬೂಟ್‌ನಿಂದ ಹೊಡೆದರು. ಆದರೂ ನಾನು ಕನ್ನಡವನ್ನು ಧೈರ್ಯವಾಗಿ ಸ್ವೀಕಾರ ಮಾಡಿ ನನ್ನ ಹೆಜ್ಜೆಯನ್ನು ಬಹಳ ವೇಗವಾಗಿ ಇಟ್ಟಿದ್ದೇನೆ. ಇವತ್ತು ಕನ್ನಡದ ವಾತಾವರಣ ಇದೆಯೇ ? ರಾಜ್ಯದಲ್ಲಿ ಸಂಪೂರ್ಣ ಕನ್ನಡ ಆಡಳಿತ ಭಾಷೆಯಾಗಿದೆಯೇ ಎಂದು ನಮ್ಮ ರಾಜ್ಯಸರ್ಕಾರ ಆತ್ಮಶೋಧನೆಯನ್ನು ಮಾಡಿಕೊಳ್ಳಬೇಕು. ಏಪ್ರಿಲ್ ೧ರಿಂದ ಕನ್ನಡ ಆಡಳಿತ ಜಾರಿ ಅಂದರು. ಅದು ಎಲ್ಲಿದೆ ಸ್ವಾಮಿ ? ಏಪ್ರಿಲ್ ೧ರಿಂದ ಕನ್ನಡ ಜಾಗೃತಿ ದಿನಾಚರಣೆ ಅದು ಸಂಪೂರ್ಣ ವಿಫಲ. ಕನ್ನಡ ಆಡಳಿತ ಅದು ಸಂಪೂರ್ಣ ವಿಫಲ. ಇದು ಕನ್ನಡ ಜನರಿಗೆ ಕೊಟ್ಟಂತಹ ಮೋಸ, ಇನ್ನೂ ಸಹ ವಿಧಾನಸೌಧದ ನಾಲ್ಕು ಬಾಗಿಲುಗಳಲ್ಲಿ ಏಪ್ರಿಲ್ ೧ರಿಂದ ಕನ್ನಡ ಆಡಳಿತ ಭಾಷೆಯೆಂದು ಹಾಕಿದ್ದಾರೆ. ಆದರೆ ಅದು ಎಲ್ಲೂ ಜಾರಿ ಆಗಿಲ್ಲ. ಇವತ್ತು ಸಹ ನೂರಕ್ಕೆ ೮೦ ಭಾಗ ಇಂಗ್ಲೀಷ್‌ನಲ್ಲಿ ವ್ಯವಹಾರ ನಡೆಯುತ್ತಾ ಇದೆ. ಕನ್ನಡ ಆಡಳಿತ ಭಾಷೆಯಾಗಲಿಲ್ಲ. ಉದಾಹರಣೆಗೆ ತಮಗೆ ಸೇರಿದಂತಹ ಶಾಸಕಾಂಗ ಇಲಾಖೆಯಲ್ಲಿ ಬಡ್ತಿ ಕೊಡಬೇಕಾದರೆ ಇಂಗ್ಲೀಷ್ ಜ್ಞಾನ ಇರಬೇಕೆಂದು ತಾವು ಕಡ್ಡಾಯ ಮಾಡಿದ್ದೀರಿ. ಇದು ಸರಿಯಲ್ಲ. ಕನ್ನಡ ಬೆರಳಚ್ಚುಗಾರರಿಗೆ ಬಡ್ತಿ ಕೊಡಬೇಕಾದರೆ ಇಂಗ್ಲೀಷ್ ಬೆರಳಚ್ಚು ಕಲಿತಿರಬೇಕೆಂದು ಏನು ಹೇಳಿದ್ದೀರಿ, ಇದು ಸರಿಯಲ್ಲ. ಸಂಪೂರ್ಣವಾಗಿ ಶಾಸಕಾಂಗದಲ್ಲಿ ನೂರಕ್ಕೆ ನೂರರಷ್ಟು ಕನ್ನಡ ಆಡಳಿತ ಭಾಷೆಯೆಂದು ಘೋಷಣೆ ಮಾಡಿರುವಾಗ ಈ ವಿಧಾನಸೌಧದಲ್ಲಿ ಈ ಸಭೆಯಲ್ಲಿ ಕೆಲಸ ಮಾಡತಕ್ಕವರಿಗೆ ಬಡ್ತಿ ಬೇಕೆಂದರೆ ಅವರು ಇಂಗ್ಲೀಷ್ ಕಲಿತಿರಬೇಕೆಂದರೆ ಇನ್ನು ಕನ್ನಡದ ಉದ್ಧಾರವೆಲ್ಲಿ ? ಅದರ ಬೆಳವಣಿಗೆಯಲ್ಲಿ ? ಕನ್ನಡದ ಬೆಳವಣಿಗೆ ಸಾಧ್ಯವಿಲ್ಲ. ಇವತ್ತು ನಾನು ತಮಗೆ ಹೇಳುತ್ತಿದ್ದೇನೆ. ಕನ್ನಡದ ಸಮಗ್ರ ಬೆಳವಣಿಗೆಯನ್ನು ಈ ಸರ್ಕಾರದಿಂದ ಮಾಡುವುದಕ್ಕೆ ಸಾಧ್ಯವಿಲ್ಲ. ಕನ್ನಡ ಬೆಳವಣಿಗೆಯ ಬಗ್ಗೆ ಅವರಿಗೆ ಒಂದು ಯೋಚನೆ

ಇಲ್ಲ. ಅವರಿಗೆ ಒಂದು ಕಾರ್ಯಕ್ರಮವಿಲ್ಲ. ಕನ್ನಡ ಸಂಸ್ಕೃತಿ ಇಲಾಖೆಯನ್ನು ಕಡೆಗಣಿಸಿದ್ದೀರಿ. ನಿಮ್ಮ ಆಯವ್ಯಯದಲ್ಲಿ ಕನ್ನಡ ಸಂಸ್ಕೃತಿ ಇಲಾಖೆಗೆ ಕೊಟ್ಟಿರತಕ್ಕ ಹಣ ಅತಿ ಕಡಿಮೆ. ಕನ್ನಡ ಸಂಸ್ಕೃತಿ ಇಲಾಖೆಯನ್ನು ಕಾಲುಕಸಕ್ಕಿಂತ ಕಡಿಮೆಯಾಗಿ ಕಂಡಿದ್ದೀರಿ. ಅಂದಮೇಲೆ ಈ ಇಲಾಖೆಗೆ ಈ ವ್ಯವಸ್ಥೆ ಏಕೆ ಬೇಕಾಗಿದೆ ? ಈ ಇಲಾಖೆಯ ಬಗ್ಗೆ ಒಳ್ಳೆಯ ಅಭಿಪ್ರಾಯ ಇಲ್ಲವೆಂದಮೇಲೆ ಅದು ನಿಮಗೆ ಏಕೆ ಬೇಕು ? ಆ ಇಲಾಖೆಗೆ ನಿಮಗೆ ಬೇಕಾಗಿಲ್ಲ, ಅದನ್ನು ರದ್ದು ಮಾಡಿ ಸಾಲದ್ದಕ್ಕೆ ಈಗ ಕೊಡವ, ತುಳು, ಕೊಂಕಣಿ ಈವೊಂದು ಅಕಾಡೆಮಿಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಈಗಿರತಕ್ಕ ಅಕಾಡೆಮಿಗಳಿಗೆ ಧೂಳು ಹೊಡೆಯಲಿಕ್ಕೆ ಬೇಕಾದ ಕಸಪೊರಕೆ ತೆಗೆದುಕೊಳ್ಳುವುದಕ್ಕೆ ಹಣ ಕೊಡುವುದಕ್ಕೆ ಯೋಗ್ಯತೆಯಿಲ್ಲ. ಆ ಅಕಾಡೆಮಿಗಳನ್ನು ಮುಚ್ಚತಕ್ಕ ಪರಿಸ್ಥಿತಿ ಬಂದಿದೆ. ಅಕಾಡೆಮಿಗಳ ಅಧ್ಯಕ್ಷರುಗಳು ಬಂದು ನಿಮ್ಮಲ್ಲಿ ದುಂಬಾಲು ಬೀಳುತ್ತಿದ್ದಾರೆ, ಕಾಲಿಗೆ ಬೀಳುತ್ತಿದ್ದಾರೆ. ಈ ಅಕಾಡೆಮಿಗಳಿಗೆ ಕೊಟ್ಟಿರತಕ್ಕ ಹಣ ಎಷ್ಟು ಸ್ವಾಮಿ ? ಅದು ಅತ್ಯಲ್ಪ. ಅಂತಹದರಲ್ಲಿ ಮತ್ತೆ ಮೂರು ಅಕಾಡೆಮಿಗಳನ್ನು ಮಾಡುವುದಕ್ಕೆ ಹೊರಟಿದ್ದೀರಿ. ಈ ಅಕಾಡೆಮಿಗಳ ಕಾರ್ಯಾಲಯಗಳನ್ನು ಎಲ್ಲಿ ನೋಡಿದ್ದೀರಿ ? ಯಾವುದೋ ಒಂದು ಮೂಲೆಯಲ್ಲಿ. ಯಾವುದೋ ಒಂದು ಕಡೆ ಪಂಡಿತರು, ಮೇಧಾವಿಗಳು ಇರತಕ್ಕ ಕನ್ನಡಕ್ಕೆ ಸಂಬಂಧಪಟ್ಟ ಅಕಾಡೆಮಿಗಳ ಬಗ್ಗೆ ನಿಮಗೆ ಕಾಳಜಿಯಿಲ್ಲ. ಅಂತಹದರಲ್ಲಿ ನೀವು ಕನ್ನಡದ ಬಗ್ಗೆ ಏನು ಉದ್ಧಾರ ಮಾಡಲಿಕ್ಕೆ ಸಾಧ್ಯವಿದೆ ? ಕನ್ನಡಕ್ಕೆ ಮಾರಕವಾಗಿರತಕ್ಕ ಕನ್ನಡ ರಾಜ್ಯದ ಬೆಳವಣಿಗೆಗೆ ಮಾರಕವಾಗಿರತಕ್ಕ ವಲಸೆ, ಆ ವಲಸೆಯನ್ನು ತಡೆಯುವ ಬಗ್ಗೆ ಚರ್ಚೆಗಳನ್ನು ಮಾಡುತ್ತಿದ್ದೇವೆ, ಮಾತನಾಡುತ್ತಿದ್ದೇವೆ, ಭಾಷಣ ಮಾಡುತ್ತಿದ್ದೇವೆ. ಆದರೆ ಈ ಬಗ್ಗೆ ನೀವು ಏನು ಕ್ರಮವನ್ನು ಕೈಗೊಂಡಿದ್ದೀರಿ ? ಇದೇ ಸದನದ ಇಬ್ಬರು ಸಚಿವರು ವಲಸೆಯನ್ನು ತಡೆಯಬೇಕು ಎನ್ನುವುದನ್ನು ಹಿರಿಯ ಸಚಿವರಾದ ಯಾಹ್ಯಾ ರವರು ಹೇಳುತ್ತಾರೆ ಸಂಸದೀಯ ವ್ಯವಹಾರಗಳ ಸಚಿವರಾದ ಹಾರ್ನಳ್ಳಿ ರಾಮಸ್ವಾಮಿಯವರು ಹೇಳುತ್ತಾರೆ. ವಲಸೆಯನ್ನು ತಡೆಯಬೇಕು ಅಂದರೆ ಯಾವರೀತಿ ತಡೆಯಬೇಕು, ಅದಕ್ಕೆ ಕಾರ್ಯಕ್ರಮಗಳೇನು ? ಬರೀ ಭಾಷಣ ಮಾಡಿದರೆ ಆಗುತ್ತದೆಯೇ ? ಕರ್ನಾಟಕ ರಾಜ್ಯಕ್ಕೆ ವಲಸೆ ಬಂದಿರತಕ್ಕ ೧ ಕೋಟಿ ಜನರು ಇದ್ದಾರೆ. ಅದರಲ್ಲಿ ೬೦ ಲಕ್ಷ ಮತದಾರರು ಇದ್ದಾರೆ. ಈ ಸಂಖ್ಯೆಯಲ್ಲಿ ಪರಭಾಷೆಯವರ ದಾಳಿ ಕರ್ನಾಟಕ ರಾಜ್ಯದ ಮೇಲೆ ನಡೆದರೆ ಕರ್ನಾಟಕ ಅಂತಿಮವಾಗಿ ಎಂದಾದರೂ ಒಂದು ದಿನ ಅಸ್ಸಾಂ ಆದೀತು. ಅಸ್ಸಾಮಿನ ಪರಿಸ್ಥಿತಿ ಕರ್ನಾಟಕ ರಾಜ್ಯಕ್ಕೆ ಬರುತ್ತದೆ. ಸರ್ಕಾರ ಎಚ್ಚರಿಕೆಯನ್ನು ವಹಿಸಬೇಕು. ಕರ್ನಾಟಕದ ಪರಿಸ್ಥಿತಿ ಗಂಭೀರವಾದ ಪರಿಸ್ಥಿತಿಗೆ ಬರುತ್ತದೆ. ಬೆಂಗಳೂರಿನ ಪರಿಸ್ಥಿತಿಯನ್ನು ನೋಡಿದ್ದೀರಿ. ಬೆಂಗಳೂರಿನ ಜನಸಂಖ್ಯೆ ೫೦ ಲಕ್ಷಕ್ಕೆ ಜಾಸ್ತಿ ಇದೆ. ೨ ಸಾವಿರದ ಇಸವಿಯ ಹೊತ್ತಿಗೆ ೧ ಕೋಟಿಯಾಗುತ್ತದೆ. ೧ ಕೋಟಿಯಲ್ಲಿ ಪರಭಾಷೆಯವರು ೭೦ ಲಕ್ಷ ಇರುತ್ತಾರೆ. ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಾರೆ. ಆವರ ಮುಂದಿನ ಪರಿಸ್ಥಿತಿಯೇನು ? ಮಡಿಕೇರಿಯ ಕಾಫಿತೋಟಗಳಲ್ಲಿ ನೂರಕ್ಕೆ ಎಂಭತ್ತು ಭಾಗ ಹೊರಗಡೆಯವರು ಇದ್ದಾರೆ. ಮಂಗಳೂರಿನಲ್ಲಿ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂದು ಕೂಗುತ್ತಾ ಇದ್ದೇವೆ. ಈಗ ಮಂಗಳೂರು ಕೇರಳಕ್ಕೆ ಸೇರಬೇಕೆನ್ನುವಷ್ಟರ ಮಟ್ಟಿಗೆ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ,—ನಾವು ಕನ್ನಡವನ್ನು ನಿಮಗಿಂತ ಚೆನ್ನಾಗಿ ಮಾತನಾಡುತ್ತೇವೆ. ಕನ್ನಡದ ಬಗ್ಗೆ ನಾವು ಹೋರಾಟ ಮಾಡುತ್ತೇವೆ. ಕನ್ನಡದ ಅನೇಕ ಕವಿಗಳು ನಮ್ಮಲ್ಲಿ ಹುಟ್ಟಿದ್ದಾರೆ. ಎಲ್ಲ ಭಾಷೆಗಳನ್ನು ಕಲಿಯಬೇಕೆಂಬ ಆಸೆ ನಮಗುಂಟು. ಕನ್ನಡ, ಮಲೆಯಾಳಿ ಮರಾಠಿ ಎಲ್ಲ ಭಾಷೆಗಳನ್ನು ಕಲಿಯುತ್ತೇವೆ. ಆದರೆ ಕನ್ನಡದ ಅಭಿಮಾನ ನಮ್ಮಲ್ಲಿ ಉಂಟು. ಕನ್ನಡದ ಕವಿಗಳು ನಮ್ಮಲ್ಲಿ ಹುಟ್ಟಿದ್ದಾರೆ. ಕನ್ನಡ ಭಾಷೆಗಾಗಿ ನಾವು ಹೋರಾಡುತ್ತೇವೆ. ಕನ್ನಡದ ಉಳಿವಿಗಾಗಿ ನಾವಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ನಾನು ಹೇಳಿದ್ದುದು ತುಳುವಿನ ಬಗ್ಗೆಯಲ್ಲ. ಮಲೆಯಾಳಿಗಳ ಸಂಖ್ಯೆ ಮಂಗಳೂರಿನಲ್ಲಿ ಜಾಸ್ತಿಯಾಗುತ್ತಿದೆಯೆಂದು ಹೇಳಿದನೆ ಹೊರತು ತುಳುವಿನ ಬಗ್ಗೆ ನಾನು ಹೇಳಲಿಲ್ಲ. ತುಳುವಿನ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಅದನ್ನು ನಾನು ಹೇಳುತ್ತಿಲ್ಲ. ಕೇರಳೀಯರ ಸಂಖ್ಯೆ ಮಂಗಳೂರಿನಲ್ಲಿ ಜಾಸ್ತಿಯಾಗುತ್ತಿದೆ. ಅವರ ಪ್ರಭಾವ ಜಾಸ್ತಿಯಾಗುತ್ತಿದೆ ಎಂದು ಹೇಳಿದೆ. ತಾವು ಏನು ಹೇಳಿದಿರಿ, ಅದರ ಬಗ್ಗೆ ನನ್ನ ತಕರಾರು ಇಲ್ಲ. ಮಂಗಳೂರಿನಲ್ಲಿ ಮಲೆಯಾಳಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಕನ್ನಡ ಇಲ್ಲವೇ ಇಲ್ಲ ಎನ್ನುವಂತಾಗಿದೆ. ಮಡಿಕೇರಿಯಲ್ಲಿ ಮಲೆಯಾಳಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಬೆಳಗಾವಿಯಲ್ಲಿ ಮರಾಠಿಗರ ಸಂಖ್ಯೆ ಜಾಸ್ತಿಯಾಗುತ್ತಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ.—ಮಾನ್ಯ ವಾಟಾಳ್ ನಾಗರಾಜ್‌ರವರು ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಅಪಾರ್ಥ ಮಾಡಿಕೊಂಡಿದ್ದಾರೆ. ನಮ್ಮಲ್ಲಿರುವ ಮುಸ್ಲಿಮರು ಮಲೆಯಾಳಿ ಮಾತನಾಡುತ್ತಾರೆ. ಏಕೆಂದರೆ ಅದು ಉರ್ದುವಿಗೆ ಹತ್ತಿರವಾಗಿರತಕ್ಕ ಭಾಷೆ. ಅಲ್ಲಿರುವ ಮುಸ್ಲಿಮರೆಲ್ಲ ಮಲೆಯಾಳಿ ಯೆಂದು ಆಲೋಚನೆ ಮಾಡಿದ್ದಾರೆ. ಮಾನ್ಯ ಇದಿನಬ್ಬರವರು ಮನೆಯಲ್ಲಿ ಮಲೆಯಾಳಿ ಮಾತನಾಡುತ್ತಾರೆ. ಆದರೆ ಅವರು ಕನ್ನಡದಲ್ಲಿ ಚೆನ್ನಾಗಿ ಹಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸೋಮಪ್ಪ ಸುವರ್ಣರವರು ಹಿರಿಯ ಉಪಾಧ್ಯಾಯರು. ನನಗೆ ಇದಿನಬ್ಬರವರ ಬಗ್ಗೆ ಅಪಾರವಾದ ಗೌರವವಿದೆ. ಕನ್ನಡದ ಬಗ್ಗೆ ಅವರಿಗೆ ಸಾಕಷ್ಟು ಪರಿಶ್ರಮ ವಿದೆ. ಕನ್ನಡದ ಬಗ್ಗೆ ಅವರು ಆಳವಾಗಿ ಅಭ್ಯಾಸ ಮಾಡಿದ್ದಾರೆ. ಕನ್ನಡದ ಬಗ್ಗೆ ಅವರು ಮಾತ ನಾಡತಕ್ಕದ್ದನ್ನು ನಾನು ನೋಡಿದ್ದೇನೆ. ಅದನ್ನು ನಾನು ಮೆಚ್ಚಿದ್ದೇನೆ. ಮತ್ತು ಅವರ ಮನೆಗೂ ನಾನು ಹೋಗಿದ್ದೇನೆ. ಹೋಗಿ ಅವರ ಬಗ್ಗೆ ಗೌರವವನ್ನು ಸೂಚಿಸಿ, ಮನೆ ಬಾಗಿಲಿನಲ್ಲಿ ಸನ್ಮಾನ ಮಾಡಿದ್ದೇನೆ. ಆದ್ದರಿಂದ ಇದಿನಬ್ಬ ಅವರ ಬಗ್ಗೆ ನೀವು ನನಗೆ ಪಾಠ ಹೇಳಬೇಕಾಗಿಲ್ಲ. ಇದಿನಬ್ಬ ಅವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ.

ಶ್ರೀ ಕೆ. ಸೋಮಪ್ಪ ಸುವರ್ಣ.—ನಮಗೆ ಕನ್ನಡದ ಬಗ್ಗೆ ಅಭಿಮಾನ ಇಲ್ಲವೆಂದು ಹೇಳು ತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್.—ಇದು ಏನಾಗಿದೆ ಎಂದರೆ, ಕಾಲು ಕೆರೆದು ಜಗಳಕ್ಕೆ ಕರೆಯು ವಂತಾಗಿದೆ ಅಷ್ಟೆ.

ಶ್ರೀ ಕೆ. ಕುಶಾಲ.—ವಲಸೆ ಬಂದವರ ಬಗ್ಗೆ ಹೇಳುತ್ತೀರಲ್ಲ, ರಾಜ್ಯಾದ್ಯಂತ ವಲಸೆ ಬಂದಿದ್ದಾರಲ್ಲ ?

ಶ್ರೀ ವಾಟಾಳ್ ನಾಗರಾಜ್.—ಕುಳಿತುಕೊಳ್ಳಿರಿ ಸುಮ್ಮನೆ, ನಾನು ಹೇಳಿದ್ದನ್ನು ಅರ್ಥ ಮಾಡಿಕೊಳ್ಳಿ.

(ಗೊಂದಲ)

ಶ್ರೀ ಕೆ. ಕುಶಾಲ.—ರಾಜ್ಯದಾದ್ಯಂತ ಈ ಸಮಸ್ಯೆ ಇದೆ......

ಶ್ರೀ ವಾಟಾಳ್ ನಾಗರಾಜ್.—ನಾನು ಹೇಳಿದ್ದೇನು ?

ಉಪಾಧ್ಯಕ್ಷರು.—ವಾಟಾಳ್ ನಾಗರಾಜ್‌ರವರೇ, ನೀವು ಈ ಕಡೆ ನೋಡಿ ಮಾತನಾಡಿ. ನೀವು ಬಜೆಟ್ ಬಗ್ಗೆ ಹೇಳದೆ, ಕನ್ನಡದ ಬಗ್ಗೆ ಅಷ್ಟೇ ಮಾತನಾಡುತ್ತಿದ್ದೀರಿ.

ಶ್ರೀ ಹೆಚ್. ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು).—ಚಾಮರಾಜನಗರದಿಂದ ಬಂದ ಶ್ರೀಯುತ ವಾಟಾಳ್ ನಾಗರಾಜ್ ಅವರು ಬೆಳಗಾಂವ್ ಜಿಲ್ಲೆಯವರನ್ನು ನೋಡಿದರು, ಆ ಕಡೆಗೆ ಧಾರವಾಡ ಜಿಲ್ಲೆಯವರನ್ನು ನೋಡಿದರು. ಆ ಕಡೆ ಬಿಜಾಪುರ ಜಿಲ್ಲೆಯವರನ್ನು ನೋಡಿ, ಉತ್ತರ ಕರ್ನಾಟಕದವರಿಗೆ ಸಂಪೂರ್ಣವಾಗಿ ಅರ್ಥವಾಗತಕ್ಕಂಥ ಚುರುಕಾದ ಭಾಷೆಯಲ್ಲಿ ಅವರು ಮಾತನಾಡು ತ್ತಿದ್ದಾರೆ. ಹಾಗಾಗಿ ಸ್ವಲ್ಪ ವ್ಯತ್ಯಾಸ ಆಗಿ ನನ್ನ ಮಂಗಳೂರಿನ ಸ್ನೇಹಿತರು ಅರ್ಥೈಸಿಕೊಂಡಿದ್ದಾ ರೆಯೇ ಹೊರತು ಅವರು ನೀವು ಹೇಳಿದ ಬಗ್ಗೆ ತಕರಾರು ಮಾಡುತ್ತಾ ಇಲ್ಲ, ನೀವೂ ಅವರ ಬಗ್ಗೆ ಅಗೌರವವಾಗಿ ಮಾತನಾಡುವ ಪ್ರಶ್ನೆ ಉದ್ಭವವಾಗಿಲ್ಲ.

ಉಪಾಧ್ಯಕ್ಷರು.—ನೀವು ಮುಂದುವರೆಸಿ.

ಶ್ರೀಮತಿ ಮೋಟಮ್ಮ.—ಮಾನ್ಯ ವಾಟಾಳ್‌ನಾಗರಾಜ್ ಅವರಿಗೆ ಇರುವ ಆತಂಕ ನಮಗೂ ಇದೆ. ಬೇರೆ ಭಾಷೆಯ ಜನರು ನಮ್ಮ ಕರ್ನಾಟಕಕ್ಕೆ ಹೆಚ್ಚಿಗೆ ಬರುತ್ತಿದ್ದಾರೆ. ಅದನ್ನು ತಡೆಗಟ್ಟುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಅಂತ ನೀವು ಸರ್ಕಾರಕ್ಕೆ ಹೇಳಬೇಕಲ್ಲ ? ಕಾಸರಗೋಡಿನವರು ಮಂಗಳೂರಿಗೆ ಬರುವುದನ್ನು ಯಾವ ರೀತಿ ನಿಲ್ಲಿಸುತ್ತೀರಾ ? ತಮಿಳುನಾಡಿನವರು ಬೆಂಗಳೂರಿಗೆ ಬರುವುದನ್ನು ಹೇಗೆ ನಿಲ್ಲಿಸುತ್ತೀರಾ ? ಇದನ್ನು ತಡೆಗಟ್ಟುವುದು ಹೇಗೆ ಅಂತ ನೀವು ಸಲಹೆ ಕೊಡ ಬೇಕಲ್ಲ ? ನಿಮ್ಮ ತರಹ ಆತಂಕ ಎಲ್ಲರಿಗೂ ಇದೆ. ಆದರೆ ಈಗ ಹಾರ್ಡ್‌ವರ್ಕ್ ಮಾಡುವವರು ಕೇರಳದವರು ಮತ್ತು ತಮಿಳುನಾಡಿನವರು ಅಂತಹ ಹಾರ್ಡ್ ವರ್ಕ್ ಮಾಡುವುದಕ್ಕೆ ನಮ್ಮ

ಕರ್ನಾಟಕದ ಜನ ಮುಂದಾಗುವುದಿಲ್ಲ. ಸೇತುವೆ ಕಟ್ಟುವುದಕ್ಕೆ ಆಗಲಿ, ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟುವುದೇ ಆಗಲಿ, ಇಂತಹ ಕೆಲಸಗಳನ್ನು ನಮ್ಮವರು ಮಾಡುವುದಿಲ್ಲ. ಹಾಗಾಗಿ ಲೇಬರ್ ಗೋಸ್ಕರ ಬಂದವರು ಇಲ್ಲೇ ನೆಲೆಸಿಬಿಡುತ್ತಾರೆ. ಅವರನ್ನು ಹೇಗೆ ತಡೆಗಟ್ಟುತ್ತೀರಿ ಎಂದು ನೀವು ಹೇಳಿ, ನೋಡುವ.

ಶ್ರೀ ವಾಟಾಳ್ ನಾಗರಾಜ್.—ತಮಿಳರು ಮತ್ತು ಮಲೆಯಾಳಿಗಳು ಏನು ಕೆಲಸ ಮಾಡುತ್ತಾರೆ ಅಂತ ಹೇಳುತ್ತೀರಲ್ಲ, ಅವರನ್ನೆಲ್ಲಾ ಮೀರಿಸತಕ್ಕಂಥ ಕೆಲಸವನ್ನು ಗುಲ್ಬರ್ಗಾದವರು ಮಾಡುತ್ತಾರೆ. ಧಾರವಾಡದವರು ಕೆಲಸ ಮಾಡುತ್ತಾರೆ. ಈ ನಮ್ಮ ವಿಧಾನಸೌಧದ ಪಕ್ಕದಲ್ಲಿರುವ ಬಹುಮಹಡಿ ಕಟ್ಟಡವನ್ನು ಕಟ್ಟಿದವರು ಯಾರು ? ಗುಲ್ಬರ್ಗಾದವರು ? ಕೇಳಿ ಅಮ್ಮಾ ಅವರೆ, ತಾವು ತಿಳಿದುಕೊಳ್ಳಿ. ಕಟ್ಟಿದವರು ಅವರು. ತಮಿಳರು, ಮಲೆಯಾಳದವರು ಅಲ್ಲ. ತಾವು ಸಲಹೆಯನ್ನು ಕೇಳಿದ್ದೀರಿ. ಸರೋಜಿನಿ ಮಹಿಷಿ ವರದಿಯನ್ನು ಸರ್ಕಾರಕ್ಕೆ ಕೊಟ್ಟು ಎಷ್ಟು ವರ್ಷಗಳಾಯಿತು ? ಅದರ ಬಗ್ಗೆ ನಿಮ್ಮ ಈಗಿನ ಸರ್ಕಾರದವರು, ಹಿಂದಿನ ಸರ್ಕಾರದವರು ಏನು ಕ್ರಮ ತೆಗೆದುಕೊಂಡರು ? ನಿಮಗೆ ನೆನಪಿಲ್ಲ.

ಶ್ರೀಮತಿ ಮೋಟಮ್ಮ.—ಆ ಮಾತು ಬೇರೆ.

ಶ್ರೀ ವಾಟಾಳ್ ನಾಗರಾಜ್.—ಶ್ರೀಮತಿ ಮೋಟಮ್ಮನವರೇ, ನಿಮಗೆ ನಾನು ನೆನಪು ಮಾಡಿಕೊಡುತ್ತಿದ್ದೇನೆ, ನಿಮಗೆ ಕೈಮುಗಿದು ವಿನಂತಿ ಮಾಡಿಕೊಳ್ಳುತ್ತೇನೆ, ನಿಮಗೆ ಇದು ನೆನಪಿಲ್ಲ. ಮರೆತುಬಿಟ್ಟಿದ್ದೀರಿ. ಅದು ಒಬ್ಬ ಹೆಣ್ಣುಮಗಳು, ಶ್ರೀಮತಿ ಸರೋಜಿನಿ ಮಹಿಷಿಯವರು ಒಂದು ಸಮಗ್ರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅದನ್ನು ನೀವು ಏನು ಮಾಡಿದಿರಿ ? ಆ ವರದಿ ಗತಿ ಏನಾಗಿದೆ ಗೊತ್ತೇನು ? ಆ ವರದಿ ಬಂದಾಗಿನಿಂದ ಮೂವತ್ತು ಉಪಸಮಿತಿಗಳನ್ನು ಮಾಡಿದರು. ಉಪಸಮಿತಿಗಳ ಮೇಲೆ ಉಪಸಮಿತಿ. ಯಾವ ಉಪಸಮಿತಿಯೂ ಸಹ ಆ ವರದಿಯನ್ನು ಈ ಕ್ಷಣದವರೆಗೂ ಸಂಪೂರ್ಣವಾಗಿ ಒಪ್ಪಲಿಲ್ಲ. ಅದನ್ನು ಒಪ್ಪುವುದಕ್ಕೆ ನಿಮಗೆ ಧೈರ್ಯ ಇದೆಯಾ ? ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳಲಿ, ಸರೋಜಿನಿ ಮಹಿಷಿ ವರದಿ ಏನಾಯಿತು ಸ್ವಾಮಿ ? ದಯಮಾಡಿಟ್ಟು ಅದನ್ನು ಏನು ಮಾಡುತ್ತೀರಿ ಅಂತ ಹೇಳಿ. ಅದನ್ನು ಒಪ್ಪುತ್ತೀರಾ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಜಾರಿಗೆ ಕೊಡುತ್ತೇವೆ ಅಂತ ಈಗಾಗಲೇ ಅನೇಕ ಬಾರಿ ಸರ್ಕಾರದ ಪರವಾಗಿ ಉತ್ತರವನ್ನು ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ಇನ್ನೊಂದು ಸಾರಿ ಹೇಳಿಬಿಡಿ, ಜಾರಿಗೆ ಕೊಡುತ್ತೇವೆ ಅಂತ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ತಮಗೆ ಗೊತ್ತಿರುವ ಹಾಗೆ ಸಬ್‌ಕಮಿಟಿಯನ್ನು ಮಾಡಿದ್ದೇವೆ. ಅದರ ಕೆಲವು ಶಿಫಾರಸ್ಸುಗಳನ್ನು ಒಪ್ಪಿಕೊಂಡಿದ್ದೇವೆ, ಕೆಲವನ್ನು ಇಂಪ್ಲಿಮೆಂಟ್ ಮಾಡಿದ್ದೇವೆ. ಇನ್ನು ಕೆಲವು ಮಾಡತಕ್ಕಂಥ ಹಂತದಲ್ಲಿವೆ.

ಶ್ರೀ ವಾಟಾಳ್ ನಾಗರಾಜ್.—ನೀವು ಯಾಕೆ ಹೀಗಾದಿರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏನೂ ಮಾಡಿಲ್ಲವೆಂದಿರಿ, ಅದಕ್ಕಾಗಿ ಕ್ಯಾಬಿನೇಟ್ ಸಬ್ ಕಮಿಟಿ ಮಾಡಿದ್ದೇವೆಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್.—ಸಚಿವ ಸಂಪುಟದ ಉಪಸಮಿತಿ ಮಾಡಿದಾಕ್ಷಣವೇ, ಅದು ಜಾರಿಯಾಯಿತು ಅಂತ ಯಾರಾದರೂ ತಿಳಿದುಕೊಳ್ಳುವುದಾದರೆ, ತಿಳಿದುಕೊಳ್ಳಲಿ, ಆದರೆ ನಾನು ತಮಗೆ ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ನೇರವಾಗಿ ಹೇಳುತ್ತಿದ್ದೇನೆ, ನೀವು ಮುಂದಿನ ಮಂತ್ರಿ ಮಂಡಲದ ಸಭೆಯಲ್ಲಿ ಸರೋಜಿನಿ ಮಹಿಷಿ ವರದಿಯನ್ನು ಅಕ್ಷರಶಃ ನಾವು ಒಪ್ಪಿದ್ದೇವೆ ಎಂದು ತೀರ್ಮಾನ ತೆಗೆದುಕೊಂಡು ಜಾರಿಗೆ ಕೊಡುತ್ತೇವೆಂದು ನೇರವಾಗಿ ಹೇಳಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ನೇರವಾಗಿ ಹೇಗೆ ಹೇಳುವುದು, ಸುತ್ತುಬಳಸಿ ಹೇಗೆ ಹೇಳುವುದು ಎಂದು ಗೊತ್ತಾಗುತ್ತಿಲ್ಲ. ಸರೋಜಿನಿ ಮಹಿಷಿ ವರದಿಯನ್ನು ಸರ್ಕಾರ ಒಪ್ಪಿದೆ ಎಂದು ಹಲವಾರು ಬಾರಿ ಸರ್ಕಾರದ ಪರವಾಗಿ ಘೋಷಣೆಯನ್ನು ಇಲ್ಲಿ ಮಾಡಿದ್ದೇವೆ. ಅದನ್ನು ಆಚರಣೆಗೆ

ತರುವುದಕ್ಕೋಸ್ಕರವಾಗಿ ಮಂತ್ರಿಮಂಡಲದ ಉಪಸಮಿತಿಯನ್ನು ಮಾಡಿದೆ. ಆಚರಣೆಗೆ ತರುವುದಕ್ಕೆ ಎಲ್ಲಿ ದೋಷ ಇದೆ, ನಮಗೆ ತೋರಿದರೆ ಏನಾದರೂ ಇದೆಯೋ ಎಂದು ನೋಡಿನೆ, ಅದನ್ನು ಆಚರಣೆಗೆ ತರುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ತಮ್ಮ ಬಗ್ಗೆ ನನಗೆ ಅಪನಂಬಿಕೆ ಬರುತ್ತಾ ಇದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಹಾಗಿದ್ದರ ಹೇಗೆ ಮಾತನಾಡಬೇಕೆಂದು ನೀವೇ ಸ್ವಲ್ಪ ಹೇಳಿಕೊಟ್ಟುಬಿಡಿ.

ಶ್ರೀ ವಾಟಾಳ್ ನಾಗರಾಜ್.—ತಮಗೆ ಹೇಳುವುದಕ್ಕೆ ನಾನು ಅಷ್ಟು ಶಕ್ತನಲ್ಲ. ತಮಗೆ ಏಕೆ ಹೇಳುತ್ತಿದ್ದೇನೆ ಎಂದರೆ, ತಾವು ಸರೋಜಿನಿ ಮಹಿಷಿ ವರದಿಯನ್ನು ಓದಿದ್ದೀರಿ, ಹೌದಾ ? ಓದಿದ್ದೀರಿ ಅಂತ ನಾನು ಅಂದುಕೊಂಡಿದ್ದೇನೆ. ಆ ವರದಿ ಬಗ್ಗೆ ತಮ್ಮದು ಒಳ್ಳೆಯ ಅಭಿಪ್ರಾಯ ಇದೆ ಅಂತ ನಾನು ತಿಳಿದುಕೊಂಡಿದ್ದೇನೆ. ಈಗ ತಮಗೆ ಆ ವರದಿಯನ್ನು ಜಾರಿಗೆ ತರುವುದಕ್ಕೆ ಅಡ್ಡಿ ಆತಂಕಗಳು ಏನಿವೆ ? ಅಷ್ಟನ್ನು ತಾವು ಹೇಳಿಬಿಟ್ಟರೆ ನಾನು ಸಂತೋಷಪಡುತ್ತೇನೆ. ಇಂತಿಂಥ ಅಡ್ಡಿಗಳು ಇವೆ ಅಂತ ಜನರಿಗೆ ನೇರವಾಗಿ ಹೇಳಿಬಿಡಿ ಸುಮ್ಮನೆ ನೀವು, ಆ ಮಾತನ್ನು ಹೇಳಿಧರೆ ಸರಿಹೋಗುವುದಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಅದು ಏನು ಇದೆ ಅಂತ ಉಪಸಮಿತಿ ಪರಿಶೀಲನೆ ಮಾಡುತ್ತಿದೆ. ಸಧ್ಯಕ್ಕೆ ನನಗೆ ಅದರ ವಿಷಯ ಪೂರ್ತಿಯಾಗಿ ಗೊತ್ತಿಲ್ಲ. ಆ ಸಮಿತಿಯ ವರದಿ ಬಗ್ಗೆ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ನಿಮಗೆ ಇನ್ನೊಂದು ದಿವಸ ತಿಳಿಸುತ್ತೇನೆ. ಸಭೆ ಇಲ್ಲದೆ ಹೋದರೂ ತಮಗೆ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಂದರೆ ಸಭೆ ಇರುವುದಿಲ್ಲ ಅಂತ ಅರ್ಥವಾಯಿತು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ನಾಳೆ ನಾಡಿದ್ದರಲ್ಲಿ ಸಭೆ ಮುಗಿದರೆ ಮತ್ತೆ ಸೇರಲು ಒಂದು ತಿಂಗಳಾದರೂ ಬೇಕಾಗುತ್ತದೆ. ಈ ಸಬ್ಜೆಕ್ಟ್ ಕಮಿಟಿಗಳಲ್ಲಿ ಆಯವ್ಯಯದ ಬಗ್ಗೆ ಚರ್ಚೆಯಾಗುತ್ತದೆ. ಆಮೇಲೆ ಸಭೆ ಸೇರುವ ಸಂಭವ ಉಂಟಲ್ಲ ?

ಶ್ರೀ ವಾಟಾಳ್ ನಾಗರಾಜ್.—ನನಗೆ ನೀವು ಸಭೆ ಸೇರುತ್ತೀರೋ ಇಲ್ಲವೋ ಎನ್ನುವ ಅನುಮಾನ ಇದೆ. ನೋಡೋಣ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ. ಶ್ರೀಮತಿ ಚೋಟಮ್ಮನವರೇ ನೀವು ಕೂಡ ಇದಕ್ಕೆ ಒತ್ತಾಯ ಮಾಡಬೇಕು, ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತಂದರೆ ನೂರಕ್ಕೆ ನೂರು ಬಗೆಹರಿಯುತ್ತದೆ ಎಂದು ನಾನು ಅಂದುಕೊಂಡಿಲ್ಲ. ಆದರೆ ಸ್ವಲ್ಪವಾದರೂ ಸಮಾಧಾನಕರವಾಗಿ ನಮಗೆ ಅನುಕೂಲವಾಗುತ್ತದೆ ಎನ್ನತಕ್ಕಂಥ ಭರವಸೆ ನನಗೆ ಇದೆ. ಆದರೆ ತಾವು ಅದನ್ನು ಜಾರಿ ಮಾಡುತ್ತೀರಿ ಎನ್ನತಕ್ಕಂಥ ನಂಬಿಕೆ ನನಗೆ ಇಲ್ಲ. ಆ ನಂಬಿಕೆ ನನಗೆ ಹೊರಟು ಹೋಗಿದೆ. ಏಕೆಂದರೆ ಬಹಳ ದಿವಸಗಳಿಂದ ಸರೋಜಿನಿ ಮಹಿಷಿ......

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ನಂಬಿಕೆಟ್ಟವರಿಲ್ಲವೋ ಎಂದು ದೊಡ್ಡವರು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಆದ್ದರಿಂದ ನಾನು ತಮಗೆ ಈ ಒಂದು ಸಲಹೆಯನ್ನು ಕೊಡುತ್ತೇನೆ. ಸರ್ಕಾರಿ ಸಮಾರಂಭಗಳನ್ನು ಮಾಡುವಾಗ, ಸರ್ಕಾರದ ಎಲ್ಲ ಸಮಾರಂಭಗಳು ನೂರಕ್ಕೆ ನೂರು ಕನ್ನಡದಲ್ಲೇ ನಡೆಯಬೇಕು ಎಂದು ಒಂದು ಆದೇಶವನ್ನು ಹೊರಡಿಸಿ. ಈಗ ನಿನ್ನೆ ನಾಲ್ಕು ಜನ ದಕ್ಷಿಣದ ಭಾರತದ ಮುಖ್ಯ ಮಂತ್ರಿಗಳು ಬಂದರು. ಕನ್ನಡ ಭಾಷೆಯಲ್ಲಿ ಇಂತಿಂಥವರು ಬರುತ್ತಾರೆ ಎಂದು ಹೇಳಿ ಬರೆಯುವ ಬದಲು, ನಾಲ್ಕು ಕಡೆ ನೀವು ಇಂಗ್ಲೀಷಿನಲ್ಲಿ ಹಾಕಿಸಿಕೊಂಡಿದ್ದೀರಲ್ಲ? ಒಂದೆರಡು ಕಡೆಯಾದರೂ ಕನ್ನಡದಲ್ಲಿ ಮತ್ತು ಸಭೆ ನಡೆಯತಕ್ಕಂಥ ಸಭಾಂಗಣದಲ್ಲಿ ನೀವು ಕನ್ನಡದಲ್ಲಿ ಯಾಕೆ ಬರೆಸಿ ಹಾಕಬಾರದು? ಇಂತಹ ಮುಖ್ಯ ಮಂತ್ರಿಗಳು ಬಂದಿದ್ದಾರೆ ಅಂತ ಹೇಳಿ? ಮತ್ತು ಆ ಸಭಾಂಗಣದಲ್ಲಿ ನಿಮ್ಮ ಭಾಷಣ ಯಾಕೆ ಇಂಗ್ಲೀಷಿನಲ್ಲಿ ಆಗಬೇಕು? ಯಾಕೆ ಕನ್ನಡದಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲವೇನು? ಈ ಪ್ರಶ್ನೆ ಯಾಕೆ ನಿಮಗೆ? ಈ ಒಂದು ದೊಡ್ಡ ಚಿಂತನೆ ಯಾಕೆ? ಈ ಅಪಾರವಾದಂಥ ಗೌರವ ಏನು? ಇದೆಲ್ಲ ಸಣ್ಣ ಸಣ್ಣ ವಿಚಾರ. ಬೆಳಿಗ್ಗೆಯೇ ಒಂದು ಆಜ್ಞೆಯನ್ನು ಹೊರಡಿಸಿ ಸರ್ಕಾರದ ಎಲ್ಲಾ ಸಮಾರಂಭಗಳೂ ಕನ್ನಡದಲ್ಲೇ ನಡೆಯಬೇಕು ಎಂದು ಹೇಳುವಂಥಾದ್ದು ಆಗಬೇಕು. ಇತ್ತೀಚೆಗೆ ಕೆಲವು ಐ.ಎ.ಎಸ್. ಅಧಿಕಾರಿಗಳು ಕನ್ನಡವನ್ನು ಕಲಿತಿದ್ದಾರೆ. ನಾನು ಮತ್ತು ಮಾನ್ಯ ಖರ್ಗೆಯವರು ಯಾವುದೋ ಒಂದು ಸಭೆಯಲ್ಲಿ ಸೇರಿದ್ದೆವು.

ಖರ್ಗೆಯವರು ಹೇಳಿದರು, ನೀವು ಇಲ್ಲಿ ಕುಳಿತುಕೊಂಡಿರುವುದರಿಂದ ಹೆದರಿಕೊಂಡು ಏನೋ ಕನ್ನಡದಲ್ಲಿ ಮಾತನಾಡುತ್ತಿದ್ದಾರೆ ಅಂತ. ಅವರು ತಪ್ಪು ತಪ್ಪು ಕನ್ನಡ ಮಾತನಾಡಿದರೂ ಚಿಂತೆ ಇಲ್ಲ. ಅವರು ಕನ್ನಡ ಕಲಿಯುತಕ್ಕಂಥ ಪ್ರಾಮಾಣಿಕ ಪ್ರಯತ್ನ ಮಾಡಲಿ ಅಂತ ತಮಗೆ ನಾನು ಹೇಳುತ್ತಿದ್ದೇನೆ. ಇವತ್ತು ಸರ್ಕಾರ ಸಮಗ್ರವಾಗಿ ಕನ್ನಡ ಭಾಷೆಯನ್ನು ಆಡಳಿತದಲ್ಲಿ ಜಾರಿಗೆ ತಂದಿದ್ದೇವೆ ಎಂದು ಹೇಳುವುದಕ್ಕೆ ನೀವು ಏನೇನು ಕ್ರಮ ಕೈಗೊಂಡಿದ್ದೀರಿ ಅಂತ ಹೇಳಿ ನೀವು ಒಂದು ಶ್ವೇತ ಪತ್ರವನ್ನು ಹೊರಡಿಸಬೇಕು ಅಂತ ಹೇಳಿ ನಾನು ಸ್ಪಷ್ಟವಾಗಿ ಅತ್ಯಂತ ನೇರವಾಗಿ ಈ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಏನೇನು ಮಾಡಿದ್ದೀರಿ, ಯಾವ್ಯಾವುದು ಮಾಡಿದ್ದೀರಿ, ಎಷ್ಟೆಷ್ಟು ಮಾಡಿದ್ದೀರಿ, ಎಷ್ಟು ಬೆರಳಚ್ಚುಗಾರರನ್ನು ತೆಗೆದುಕೊಂಡಿದ್ದೀರಿ, ಎಷ್ಟು ಕನ್ನಡ ಶೀಘ್ರಲಿಪಿಗಾರರನ್ನು ತೆಗೆದು ಕೊಂಡಿದ್ದೀರಿ, ಎಷ್ಟು ಇಂಗ್ಲೀಷ್ ಬೆರಳಚ್ಚು ಯಂತ್ರಗಳನ್ನು ಹೊರಗೆ ಹಾಕಿದ್ದೀರಿ? ಎಷ್ಟು ಜನ ಕನ್ನಡ ಬಲ್ಲವರಿದ್ದಾರೆ? ಹೀಗೆ ತಾವು ಪ್ರತಿಯೊಂದನ್ನೂ ಸ್ಪಷ್ಟವಾಗಿ ನಿರೂಪಣೆ ಮಾಡತಕ್ಕಂಥ ಒಂದು ಶ್ವೇತಪತ್ರವನ್ನು ಹೊರಡಿಸಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಸ್ವಾಮಿ. ಇದರ ಜೊತೆಗೆ ಇನ್ನೂ ಸ್ವಲ್ಪ ಮುಂದೆ ಹೋಗಿ ನಮ್ಮ ಕನ್ನಡ ಸಾಹಿತ್ಯ, ಸಂಸ್ಕೃತಿ, ಇದರ ಜೊತೆಗೆ ಕನ್ನಡ ಚಿತ್ರರಂಗದ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಒಂದು ಕಾಲದಲ್ಲಿ ಕನ್ನಡ ಚಲನಚಿತ್ರರಂಗ ಅಪಾರವಾಗಿ ಮೇರು ಮಟ್ಟಕ್ಕೆ ಹೋಗಿ, ವಿಶ್ವದ ಅನೇಕ ಮಾರುಕಟ್ಟೆಗಳಲ್ಲಿ ಹೆಸರನ್ನು ಪಡೆದಂಥ ಅನೇಕ ಕನ್ನಡ ಚಿತ್ರಗಳು ನಮಗೆ ಕೊಡುಗೆಯಾಗಿ ಸಿಕ್ಕಿವೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

೬-೧೦ ಪಿ. ಎಂ.

ಆದರೆ ಇತ್ತೀಚೆಗೆ ಬರತಕ್ಕಂಥ ಕೆಲವು ಕನ್ನಡ ಚಿತ್ರಗಳ ಬಗ್ಗೆ ಹೇಳುವುದಾದರೆ ಈ ಚಿತ್ರ ತಯಾರಿಕೆ ಮಾಡತಕ್ಕಂಥವರೆಲ್ಲಾ ನೂರಕ್ಕೆ ತೊಂಭತ್ತರಷ್ಟು ಹೊರಗಡೆಯವರು ತಾಂತ್ರಿಕ ವರ್ಗದವರು ಹೊರಗಡೆ ಭಾಷೆಯವರು. ಹೆಸರಿಗೆ ಕನ್ನಡ ಚಿತ್ರ. ಅಲ್ಲಿ ಬರತಕ್ಕಂಥ ಸಂಭಾಷಣೆ ಅಲ್ಲಿ ಬರತಕ್ಕಂಥ ಪ್ರತಿ ವಾಕ್ಯ ದ್ವಂದ್ವ. ಆದರ ಪರಿಸ್ಥಿತಿ ಯಾರೂ ಇಂತಹ ಚಿತ್ರಗಳನ್ನು ನೋಡಬಾರದು ಅಂತ ನೂರಕ್ಕೆ ಅರವತ್ತು ಕೆಟ್ಟ ಚಿತ್ರಗಳು ಇವತ್ತು ನಮ್ಮಲ್ಲಿ ಬರುತ್ತಿವೆ. ಇದಕ್ಕೆ ಕಾರಣ ಯಾರು ? ಸೆನ್ಸಾರ್ ಮಂಡಲಿ. ಈ ಸೆನ್ಸಾರ್ ಮಂಡಲಿಯವರು ಪರಿಣಾಮಕಾರಿಯಾಗಿ ಯಾವ ಚಿತ್ರಗಳು ಯೋಗ್ಯ ಎನ್ನತಕ್ಕಂಥದನ್ನು ನೋಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಕನ್ನಡ ಸಾಹಿತ್ಯ, ಕನ್ನಡ ಸಂಸ್ಕೃತಿ, ಕನ್ನಡ ಇತಿಹಾಸವನ್ನು ಉಳ್ಳ ಚಿತ್ರಗಳಿಗೆ ಹೆಚ್ಚಿನ ರೀತಿಯ ನೆರವನ್ನು ನೀಡಬೇಕಾದುದು ಸರ್ಕಾರದ ಕರ್ತವ್ಯ. ಇವತ್ತು ಅನೇಕ ರೀಮೇಕ್ ಚಿತ್ರಗಳು ಬರುತ್ತಿವೆ. ಬೇರೆ ಭಾಷೆಯಲ್ಲಿ ತಯಾರಾದಂತಹ ಚಿತ್ರಗಳನ್ನು ಇಲ್ಲಿ ಪ್ರತಿಯೊಂದನ್ನು ಅದೇ ರೀತಿ ಕನ್ನಡಕ್ಕೆ ತರ್ಜುಮೆ ಮಾಡಿ ಆ ಚಿತ್ರವನ್ನು ಬಿಡುಗಡೆ ಮಾಡುತ್ತಾರೆ. ಇದರಿಂದ ನಮ್ಮ ಸಂಸ್ಕೃತಿಗೆ ತೀವ್ರವಾಗಿ ಅಪಾಯ ಒದಗುತ್ತದೆ ಎನ್ನತಕ್ಕಂಥ ಮಾತನ್ನು ತಮಗೆ ನಾನು ಹೇಳುತ್ತಿದ್ದೇನೆ. ಮತ್ತೊಂದು ಎಚ್ಚರಿಕೆಯನ್ನು ನಾನು ಈ ಸರ್ಕಾರಕ್ಕೆ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಮುಗಿಸಿ.

ಶ್ರೀ ಪಾಟೀಲ್ ನಾಗರಾಜ್.—ಏಕೆ ಸ್ವಾಮಿ. ನಾವು ಇರುವುದೇ ಮೂರು ಜನ.

ಅಧ್ಯಕ್ಷರು.—ಆದಷ್ಟು ಬೇಗ ಮುಗಿಸಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ೬ ಗಂಟೆ ಆಯಿತು. ತಾವು ಎಷ್ಟು ಹೊತ್ತು ಕೂರಬೇಕು ಅಂತ ಆದೇಶ ಕೊಟ್ಟರೆ ಅಷ್ಟು ಹೊತ್ತು ನಾವು ಕೂರುತ್ತೇವೆ.

ಅಧ್ಯಕ್ಷರು.—ಕಾರ್ಯಕಲಾಪಗಳನ್ನು ನಡೆಸುತ್ತಿದ್ದೇವೆ. ಸ್ವಲ್ಪ ಹೆಚ್ಚು ಹೊತ್ತು ಕೂರಬೇಕಾಗುತ್ತದೆ.

ಶ್ರೀ ಪಾಟೀಲ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಪರಭಾಷ ಚಿತ್ರಗಳ ದಾಳಿ ಕರ್ನಾಟಕದಲ್ಲಿ ವಿಪರೀತವಾಗಿದೆ. ತಮಿಳುನಾಡಿನಲ್ಲಿ ಆಗಲಿ, ಕೇರಳದಲ್ಲಿ ಆಗಲಿ, ಆಂಧ್ರದಲ್ಲಿ ಆಗಲಿ, ಒಂದು ಕನ್ನಡ ಚಿತ್ರದ ಪ್ರದರ್ಶನವೂ ಇಲ್ಲ. ಕರ್ನಾಟಕದಲ್ಲಿ ಎಲ್ಲಾ ಭಾಷೆಯ ಚಿತ್ರಗಳ ಪ್ರದರ್ಶನ ಇದೆ. ನಮ್ಮ ಸರ್ಕಾರ ಆಯಾಯ ಸರ್ಕಾರಗಳಿಗೆ ಎಚ್ಚರಿಕೆಯನ್ನು ಕೊಡಬೇಕು. ಕನ್ನಡ ಚಿತ್ರಗಳ ಪ್ರದರ್ಶನವನ್ನು ನಿಮ್ಮ ರಾಜ್ಯದಲ್ಲಿ ಕಡ್ಡಾಯ ಮಾಡಬೇಕು, ಮಾಡಲಿಲ್ಲ ಅಂದರೆ ಪರಭಾಷ ಚಿತ್ರಗಳಿಗೆ ನಮ್ಮ ರಾಜ್ಯದಲ್ಲಿ

ಬಹಿಷ್ಕಾರ ಹಾಕುತ್ತೇವೆಂದು ನೇರ ಎಚ್ಚರಿಕೆಯನ್ನು ಆಯಾಯ ರಾಜ್ಯಗಳಿಗೆ ಕೊಡುವುದಾದರೆ ಕನ್ನಡದ ಚಿತ್ರಗಳಿಗೆ ಮಾರುಕಟ್ಟೆ ಇನ್ನೂ ಜಾಸ್ತಿಯಾಗಿ ವಿಶಾಲವಾಗಿ ಬೆಳೆಯುವುದಕ್ಕೆ ಅವಕಾಶವಾಗುತ್ತದೆ ಎನ್ನತಕ್ಕಂಥ ಮಾತನ್ನು ತಮಗೆ ನಾನು ಹೇಳುತ್ತಿದ್ದೇನೆ. ಇವತ್ತು ನಮ್ಮ ಕನ್ನಡ ರಂಗಭೂಮಿ ಉಳಿದಿರತಕ್ಕಂಥಾದ್ದು ಕೇವಲ ಉತ್ತರ ಕರ್ನಾಟಕ ಭಾಗದಲ್ಲಿ ಮಾತ್ರ. ನಮ್ಮ ಹಳೆಯ ಕರ್ನಾಟಕ ಭಾಗದಲ್ಲಿ ವೃತ್ತಿ ರಂಗಭೂಮಿ ನಶಿಸಿ ಹೋಗಿದೆ. ಈ ರಂಗಭೂಮಿ ಒಂದು ಕಾಲದಲ್ಲಿ ವೈಭವವಾಗಿ ಮೆರೆದಂತಹ ರಂಗಭೂಮಿ. ಕರ್ನಾಟಕದ ರಂಗಭೂಮಿ ಆಂಧ್ರ ರಾಜ್ಯಕ್ಕೆ ಹೋದಾಗ ಅದನ್ನು ಮೆಚ್ಚಿ ವರ್ಷಗಟ್ಟಲೆ ನಮ್ಮ ನಾಟಕಗಳನ್ನು ಆ ಜನರು ನೋಡಿದ್ದುಂಟು. ಅಂತಹ ವೈಭವದಿಂದ ಮೆರೆದಂತಹ ವೃತ್ತಿ ರಂಗಭೂಮಿ ಇವತ್ತು ಅಂಚಿನಲ್ಲಿದೆ. ಆ ವೃತ್ತಿ ರಂಗಭೂಮಿಯನ್ನು ಉಳಿಸುವುದಕ್ಕೆ ಸರ್ಕಾರ ಒಂದು ವಿಶೇಷವಾದಂತಹ ಯೋಜನೆಯನ್ನು ಹಾಕಿ ಆ ಯೋಜನೆಗೆ ಹೆಚ್ಚಿನ ಹಣವನ್ನು ಇಡಬೇಕು ಎನ್ನತಕ್ಕಂಥ ಮಾತನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಇದಕ್ಕೆ ಸರ್ಕಾರ ಸ್ಪಂದಿಸಬೇಕು ಮತ್ತು ಸರ್ಕಾರ ವೃತ್ತಿ ರಂಗಭೂಮಿಯನ್ನು ಉಳಿಸುವುದಕ್ಕೆ ಒಂದು ಹೊಸ ಚಳುವಳಿಯನ್ನೇ ನಾವು ಮಾಡುತ್ತಿದ್ದೇವೆ ಎನ್ನತಕ್ಕಂಥ ರೀತಿಯಲ್ಲಿ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಮೊನ್ನೇ ನಮ್ಮ ಅರಣ್ಯ ಇಲಾಖೆಗೆ ಸಂಬಂಧಪಟ್ಟಂತಹ ಕೆಲವು ವಿಚಾರಗಳ ಬಗ್ಗೆ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಮಾನ್ಯ ಅರಣ್ಯ ಸಚಿವರು ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ತಯಾರಾಗಿದ್ದರು. ಆದರೆ ಈ ಗೊಂದಲದಲ್ಲಿ ಮುಂದೆ ಹೋಯಿತು. ವಿಶ್ವದಲ್ಲೇ ಬಹಳ ಪ್ರಸಿದ್ಧಿಯಾದಂತಹ ನಾಗರಹೊಳೆ ಅಭಯಾರಣ್ಯ ಮತ್ತು ಬಂಡೀಪುರ ಅಭಯಾರಣ್ಯಗಳಲ್ಲಿ ಕನಿಷ್ಟ ೪ ಸಾವಿರ ಎಕರೆ ಪ್ರದೇಶ ಬೆಂಕಿಗೆ ಆಹುತಿಯಾಗಿದೆ. ೧೯೮೨ರಲ್ಲಿ ಇದೇ ರೀತಿ ನಾಗರಹೊಳೆಗೆ ಬೆಂಕಿ ಬಿತ್ತು. ನಾಗರಹೊಳೆಯಲ್ಲಿ ಬೆಂಕಿ ಬಿದ್ದ ಸಮಗ್ರ ವಿಚಾರವನ್ನು ಸಿ ಒ ಡಿ ತನಿಖೆಗೆ ಒಂದು ಕಡೆ ಒಪ್ಪಿಸಿದ್ದೀರಿ ಮತ್ತೊಂದು ಕಡೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದೀರಿ. ಆ ಸಿ. ಒ. ಡಿ. ತನಿಖೆ ವರದಿ ಸರ್ಕಾರಕ್ಕೆ ಬಂದಿದೆ ಅಂತ ನಾನು ತಿಳಿದುಕೊಂಡಿದ್ದೇನೆ, ಸರ್ಕಾರಕ್ಕೆ ಬಂದಿರುವಾಗ ಆ ವರದಿ ಏನಾಯಿತು ? ಆ ವರದಿಯ ಆಧಾರದ ಮೇಲೆ ತಾವು ನಾಗರಹೊಳೆಯ ಅಭಯಾರಣ್ಯವನ್ನು ರಕ್ಷಣೆ ಮಾಡುವುದಕ್ಕೆ ೧೯೮೨ ರಿಂದ ಏನೇನು ಕ್ರಮವನ್ನು ಕೈಗೊಂಡಿದ್ದೀರಿ ? ಇವತ್ತು ಮತ್ತೆ ಬೆಂಕಿ ಬಿದ್ದಿದೆ. ಈ ಬೆಂಕಿ ಬೀಳತಕ್ಕಂಥ ಪ್ರಸಂಗದ ಹಿಂದೆ ಯಾರಿದ್ದಾರೆ. ನಾನಂತು ಆ ಕಾಡು ಜನ ಅಂತ ಹೇಳುವುದಿಲ್ಲ. ನಾನು ಅವರ ಬಗ್ಗೆ ಖಂಡಿತ ಹೇಳುವುದಿಲ್ಲ. ನಾನು ಆ ಸ್ಥಳಕ್ಕೆ ಹೋಗಿದ್ದೆ. ಅವರ ಪರಿಸ್ಥಿತಿಯನ್ನು ನೋಡಿದರೆ ಆ ಜನ ಬೆಂಕಿಯನ್ನು ಹಾಕುತ್ತಾರೆಂದು ನಾನು ನಂಬುವುದಿಲ್ಲ. ಇದಕ್ಕೆ ಯಾರೋ ಬೇರೆಯವರ ಶಕ್ತಿಯ ಕೈವಾಡ ಇದೆ. ಇದನ್ನು ತಡೆಯುವುದಕ್ಕೆ ಸರ್ಕಾರ ಕೈಗೊಂಡಿರತಕ್ಕಂಥ ಕ್ರಮಗಳು ಏನು ? ಈ ೪ ಸಾವಿರ ಎಕರೆ ಪ್ರದೇಶ ಸುಟ್ಟಿರತಕ್ಕಂಥಾದ್ದು ೮೨ರಲ್ಲಿ ಎಷ್ಟು ನಷ್ಟ ಆಗಿದೆ ಎಂದು ತಮಗೂ ಗೊತ್ತು, ನನಗೂ ಗೊತ್ತು, ಈ ನಷ್ಟ ಎಣಿಸಲಾರದಷ್ಟು ಬೆಲೆ ಕಟ್ಟುವುದಕ್ಕೆ ಸಾಧ್ಯ ಇಲ್ಲದೆ ಇರುವಷ್ಟು ಸುಟ್ಟಿದೆ. ಕೆಲವು ಪ್ರಾಣಿಗಳು ಹೋಗಿರತಕ್ಕಂಥಾದ್ದು ಹಾಗೂ ಒಂದು ನಿಸರ್ಗವಾದ ಸಂಪತ್ತು ಸಂಪೂರ್ಣವಾಗಿ ನಾಶವಾಗಿರತಕ್ಕಂಥಾದ್ದು ಏನಿದೆ ಇದರ ಬೆಲೆ ಕಟ್ಟುವುದಕ್ಕೆ ಸಾಧ್ಯ ಇಲ್ಲ. ಅಷ್ಟು ನಾಶವಾಗಿರುವಾಗ ಈ ಬಗ್ಗೆ ಯಾವ ಪ್ರಮಾಣದಲ್ಲಿ ನೀವು ಇದನ್ನು ತಡೆಯುವುದಕ್ಕೆ ಕ್ರಮ ಕೈಗೊಂಡಿದ್ದೀರಿ. ಇದರ ಹಿಂದೆ ಇರತಕ್ಕಂಥ ಶಕ್ತಿಗಳು ಯಾವುವು ? ಇದರ ಬಗ್ಗೆ ನಿಜ ಸಂಗತಿ ತಮಗೆ ಗೊತ್ತಿದ್ದರೆ ತಾವು ಈ ಸಭೆಗೆ ತಿಳಿಸಬೇಕು ಎನ್ನತಕ್ಕಂಥ ಮಾತನ್ನು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಅಧ್ಯಕ್ಷರೇ, ಇದರ ಜೊತೆಗೆ ಇಡೀ ಈ ಅರಣ್ಯಗಳನ್ನು ನೋಡತಕ್ಕಂಥ ಸಿಬ್ಬಂದಿ ವ್ಯವಸ್ಥೆ ಅತಿ ಕಡಿಮೆ ತಮಗೆ ಹೇಳುವುದಾದರೆ ಈಗ ಇರತಕ್ಕಂಥ ಸಿಬ್ಬಂದಿ ಕೇವಲ ನೂರು ಎಕರೆ ಪ್ರದೇಶವನ್ನು ನೋಡಿಕೊಳ್ಳಬಹುದಾಗಿದೆ. ಅಸಾಧ್ಯವಾದ ಸಿಬ್ಬಂದಿ ವ್ಯವಸ್ಥೆ ಬೇಕಾಗಿದೆ. ಈ ಒಂದು ಅಭಯಾರಣ್ಯಗಳನ್ನು ನಾವು ಉಳಿಸಲೇಬೇಕು. ಈ ಅರಣ್ಯಗಳನ್ನು ಉಳಿಸುವುದಕ್ಕೆ ಸಮಗ್ರವಾದ ಯೋಜನೆಯನ್ನು ಪರಿಣಾಮಕಾರಿಯಾಗಿ ನಾವು ಜಾರಿ ಮಾಡದಿದ್ದರೆ ಕಷ್ಟವಾಗುತ್ತದೆ. ಆದ್ದರಿಂದ ಸಿಬ್ಬಂದಿಯ ನೇಮಕ ಮತ್ತು ಇದನ್ನು ತಡೆಗಟ್ಟತಕ್ಕಂಥ ವ್ಯವಸ್ಥೆ ಹಾಗೂ ಸಿ.ಓ.ಡಿ. ವರದಿ ಏನಾಗಿದೆ ಎನ್ನತಕ್ಕಂಥಾದ್ದನ್ನು ತಾವು ಸ್ಪಷ್ಟವಾಗಿ ತಿಳಿಸಬೇಕು ಅಂತ ತಮ್ಮಲ್ಲಿ ಹೇಳುತ್ತೇನೆ. ನನ್ನ ಭಾಷಣ ಮುಗಿದ ನಂತರ ಹೇಳಿದರೂ ಸಂತೋಷ. ನಿಧಾನವಾದರೆ ಹಳೆಯದಾಗುತ್ತದೆ. ನಾಳೆ ನಾಳಿದ್ದು ಸಭೆ ಮುಂದಕ್ಕೆ ಹೋಗುತ್ತದೆ, ಮತ್ತೆ ಯಾವತ್ತು ತಿಳಿಸುತ್ತೀರೋ ಗೊತ್ತಿಲ್ಲ. ಇದು ಬಹಳ ಅತಿ ಮುಖ್ಯವಾದುದು. ಇದರ ಜೊತೆಗೆ ಬಳ್ಳಾರಿ ಮೃಗಾಲಯದಲ್ಲಿ ನಿಗೂಢ ರೀತಿಯಲ್ಲಿ ೧೭ ಕೃಷ್ಣ ಮೃಗಗಳು ಸತ್ತು ಹೋದವು. ಸಿ.ಓ.ಡಿ. ತನಿಖೆ ಆಗಿ ವರದಿ ಬಂದಿದೆ. ಆ ವರದಿ ಏನಾಯಿತು ? ಇತ್ತೀಚಿನ ದಿನಗಳಲ್ಲಿ ನಮ್ಮ ಮೃಗಾಲಯಗಳಲ್ಲಿ ಒಳ್ಳೆಯ ಪ್ರಾಣಿಗಳ ಸಾವು ನಡೆಯುತ್ತಿದೆ. ಇದಕ್ಕೆ ಕಾರಣಗಳು ಏನು, ಇದರ ಹಿಂದೆ ಯಾರು

ಇದ್ದಾರೆ. ಇದಕ್ಕೆ ಕಾರಣ ಏನು ಎನ್ನತಕ್ಕಂಥದ್ದರ ಬಗ್ಗೆ ತಾವು ಸ್ಪಷ್ಟವಾಗಿ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ಕೊಡಬೇಕು ಎನ್ನತಕ್ಕಂಥ ಮಾತನ್ನು ತಮಗೆ ನಾನು ಹೇಳುತ್ತಿದ್ದೇನೆ. ಇಂದು ಬೆಳಿಗ್ಗೆ ತಾನೆ ನಾನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಮಾತನಾಡಿದಾಗ ಸೈಟ್‌ಗಳನ್ನು ಹಂಚುತ್ತೇವೆಂದು ಹೇಳಿದರು. ಎಷ್ಟು ಸೈಟುಗಳನ್ನು ಹಂಚುತ್ತೇವೆ ಎನ್ನುವ ಬಗ್ಗೆ ನಮ್ಮ ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ್ದಾರೆ. ಇದರ ಜೊತೆಗೆ ಅವರ ಗಮನಕ್ಕೆ ತರುತ್ತಿದ್ದೇನೆ. ಏನೆಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ನಂದಿನಿ ಬಡಾವಣೆಯಲ್ಲಿರತಕ್ಕಂಥ ನಾಗರೀಕರ ಗೋಳು ಕಣ್ಣೀರಿನ ಕಥೆ ಆಗಿದೆ. ಬೀದಿದೀಪದ ವ್ಯವಸ್ಥೆ ಇಲ್ಲ, ಚರಂಡಿ ವ್ಯವಸ್ಥೆ ಇಲ್ಲ. ರಸ್ತೆಯ ವ್ಯವಸ್ಥೆ ಇಲ್ಲ, ಕಸದ ತೊಟ್ಟಿ ವ್ಯವಸ್ಥೆ ಇಲ್ಲ, ಬಸ್ಸಿನ ನಿಲ್ದಾಣದ ವ್ಯವಸ್ಥೆ ಇಲ್ಲ, ವ್ಯಾಪಾರಿ ಕೇಂದ್ರ ಇಲ್ಲ, ಆದರೆ ನೀವು ನೋಂದಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ಆ ನಿವೇಶನಕ್ಕೆ ತೆರಿಗೆ ಹಾಕುವುದರ ಬದಲು ಪ್ರತಿ ಮನೆ ಮನೆಗಳಿಗೂ ನೀವು ಹಾಕುತ್ತಾ ಹೋದರೆ ಹೇಗೆ ? ಒಂದು ಸಣ್ಣ ನಿವೇಶನದಲ್ಲಿ ೧೨ ಮನೆಗಳನ್ನು ಕಟ್ಟಿದರೆ ಆ ನಿವೇಶನದ ಅಳತೆಗೆ ಹಾಕಬೇಕೇ ಹೊರತು ಅದನ್ನು ಬಿಟ್ಟು ಪ್ರತಿ ಮನೆ ಗಳಿಗೂ ನೀವು ಹಾಕುತ್ತೇವೆಂದು ಹೇಳಿದರೆ ಅದು ನಿಜವಾಗಿಯೂ ಬಹಳ ದೊಡ್ಡ ಅಪರಾಧವಾಗುತ್ತದೆ. ಆ ರೀತಿ ನೀವು ಹಾಕಬಾರದು. ಆ ನಂದಿನಿ ಲೇಔಟ್ ಬಗ್ಗೆ ಸಂಸದೀಯ ವ್ಯವಹಾರಗಳ ಸಚಿವರು ಅಥವಾ ಅದಕ್ಕೆ ಸಂಬಂಧಪಟ್ಟ ಸಚಿವರು ಯಾರಿದ್ದಾರೋ ನನಗೆ ಗೊತ್ತಿಲ್ಲ ಈಗ ನನ್ನ ಕಣ್ಣಿಗೆ ತಾವು ಕಾಣುತ್ತಿದ್ದೀರಿ, ಸಹಕಾರ ಸಚಿವರು ಕಾಣುತ್ತಿದ್ದೀರಿ, ನಿಮ್ಮಿಬ್ಬರಲ್ಲಿ ಯಾರು ಬೇಕಾದರೂ ಅದನ್ನು ತನಿಖೆ ಮಾಡಿ ಈ ಬಗ್ಗೆ ಒಂದು ಸ್ಪಷ್ಟ ಚಿತ್ರವನ್ನು ಕೊಡಬೇಕು ಅಂತ ಹೇಳಿ ತಮ್ಮಲ್ಲಿ ನಾನು ಕಳಕಳಿ ಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಆಯವ್ಯಯವನ್ನು ಮಂಡನೆಮಾಡತಕ್ಕಂಥ ಸಂದರ್ಭದಲ್ಲಿ ಕಾವೇರಿ ಮತ್ತು ಕೃಷ್ಣ ಯೋಜನೆಗಳ ಬಗ್ಗೆ ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆಗಳು ಇಲ್ಲ ನಮ್ಮ ನಿಲುವು ಅಚಲ ಎಂದು ಅನೇಕ ಸಾರಿ ತಾವುಗಳು ಹೇಳಿದ್ದೀರಿ. ಕೃಷ್ಣ ಯೋಜನೆಯನ್ನು ಎರಡು ಸಾವಿರದ ಇಸವಿಯೊಳಗಾಗಿ ನಾವು ಮುಗಿಸುತ್ತೇವೆ ಎಂದು ಕೂಡ ಹೇಳಿದ್ದೀರಿ, ಇನ್ನು ಆರು ವರ್ಷಗಳು ಉಳಿದಿವೆ. ಹಾಗಾದರೆ ಈ ಯೋಜನೆಯನ್ನು ಮುಗಿಸಲು ನಿಮ್ಮ ಸಂಪನ್ಮೂಲಗಳು ಏನು? ಎಷ್ಟು ಹಣವನ್ನು ಅದಕ್ಕಾಗಿ ಇಟ್ಟಿದ್ದೀರಿ? ಯಾವ್ಯಾವ ರೀತಿಯಲ್ಲಿ ಹಣವನ್ನು ಖರ್ಚು ಮಾಡ ಬೇಕೆಂದಿದ್ದೀರಿ? ಇದರ ಯೋಜನೆ ಏನು? ಅದೇ ರೀತಿಯಲ್ಲಿ ಈ ಸದನದಲ್ಲಿ ಮಾನ್ಯ ಉಪ–ಮುಖ್ಯ ಮಂತ್ರಿಯವರು ಈ ಕೃಷ್ಣ ಯೋಜನೆಯ ಅನುಷ್ಠಾನದ ಬಗ್ಗೆ ಒಂದು ಸರ್ವ ಪಕ್ಷ ಸದಸ್ಯರುಗಳನ್ನೊಳ ಗೊಂಡ ಸಮಿತಿಯನ್ನು ರಚನೆ ಮಾಡುತ್ತೇವೆ ಎಂದು ಹೇಳಿ ಒಂದು ವರ್ಷ ಕಳೆಯಿತು. ಆ ಸಮಿತಿಯು ಅಲ್ಲಿನ ಉಸ್ತುವಾರಿಯನ್ನು ನೋಡತಕ್ಕಂಥದ್ದು. ಎರಡನೆಯದಾಗಿ ನಾವು ಎರಡು ಸಾವಿರದ ಇಸವಿ ಯೊಳಗಾಗಿ ಬಚಾವತ್ ಅವಾರ್ಡ್‌ನ ಪ್ರಕಾರ ಕೆಲಸವನ್ನು ಮುಗಿಸುವುದಕ್ಕೆ ಆಗುತ್ತದೋ ಇಲ್ಲವೋ ಎಂಬ ಸಂಶಯ ಇರುವುದರಿಂದ ಬಚಾವತ್ ತೀರ್ಪನ್ನು ಒಪ್ಪುವುದಿಲ್ಲ ಎಂದು ಹೇಳುವುದು ಒಂದು, ಎರಡನೇಯದು ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳ ಮುಖ್ಯ ಮಂತ್ರಿಗಳ ಒಂದು ಸಭೆಯನ್ನು ನಡೆಸಿದ್ದೀರಿ. ಆಗ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿ ಆಗಿದ್ದರು. ಅದು ಮೈಸೂರಿನಲ್ಲಿ ನಡೆಯಿತು. ಇದಾದನಂತರ ಮತ್ತೆ ಅಂಥ ಸಭೆಯು ನಡೆಯುತ್ತದೆ ಎಂಬ ಸೂಚನೆ ಬಂತೇ ಹೊರತು ಇದುವರೆಗೂ ಸಭೆಯು ನಡೆದಿಲ್ಲ. ಈ ಸಭೆಯನ್ನು ನಡೆಸತಕ್ಕಂಥ ವ್ಯವಸ್ಥೆ ಯನ್ನು ಮಾಡುತ್ತೀರೋ ಹೇಗೆ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ.—ಒಂದು ಸಭೆಯು ಮಹಾರಾಷ್ಟ್ರದಲ್ಲಿ ನಡೆದಿದೆ,

ಶ್ರೀ ವಾಟಾಳ್ ನಾಗರಾಜ್.—ಹೌದು. ಆದರೆ ಮಹಾರಾಷ್ಟ್ರದಲ್ಲಿ ನಡೆದ ಸಭೆಯ ಫಲಶ್ರುತಿ ವಿಫಲವಾಯಿತು. ಆದ್ದರಿಂದ ಮತ್ತೆ ತಾವೇ ಮುಂದುವರಿದು ಅವರ ಜೊತೆಯಲ್ಲಿ ಮಾತುಕತೆ ಮಾಡಿ ಸಭೆಯನ್ನು ನಡೆಸತಕ್ಕಂಥ ಕಾರ್ಯಕ್ರಮ ತಮ್ಮಲ್ಲಿ ಇದೆಯೇ? ಹಾಗೆಯೇ ಈ ಕೃಷ್ಣ ಯೋಜನೆ ಯನ್ನು ಮುಗಿಸುವುದಕ್ಕೆ ನಿಮ್ಮಲ್ಲಿರತಕ್ಕಂಥ ಸಂಪನ್ಮೂಲಗಳು ಏನು? ಈ ದಿಶೆಯಲ್ಲಿ ಇನ್ನು ಆರು ವರ್ಷಗಳಲ್ಲಿ ಏನು ಮಾಡುತ್ತೀರಿ ಎಂಬ ಬಗ್ಗೆ ಒಂದು ಪ್ರಾಮಾಣಿಕವಾದ ಸ್ಪಷ್ಟ ಚಿತ್ರವನ್ನು ಕೊಡಲೇ ಬೇಕು. ಈ ಸದನ ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ತೀರ್ಪನ್ನು ಸಾರಾಸಗಟಾಗಿ ತಿರಸ್ಕರಿಸಿದೆ, ಇವೊತ್ತು ತಾವುಗಳು ನ್ಯಾಯಮಂಡಳಿಯಲಿ ನಂಬಿಕೆ ಇಟ್ಟುಕೊಂಡು ಅಲ್ಲಿನ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಾ ಇದ್ದೀರಿ. ನಿಮಗೆ ಯಾವ ತರಹದ ನಂಬಿಕೆ ಇದೆ? ಅಂತಿಮವಾದ ತೀರ್ಪು ನಿಮ್ಮ ಪರವಾಗಿ ಬರುತ್ತದೆ ಎಂಬ ಬಗ್ಗೆ ನಿಮಗೆ ನಂಬಿಕೆ ಇದೆಯೇ? ಆ ದೃಷ್ಟಿಯಿಂದ ಒಂದು ಸ್ಪಷ್ಟವಾದ ನಿಲುವನ್ನು ಆ ಬಗ್ಗೆ ತಾಳಿದ್ದೇವೆ ಎಂಬ ಬಗ್ಗೆ ಈ ಸದನಕ್ಕೆ ತಾವು ತಿಳಿಸಬೇಕು. ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಉತ್ತರವನ್ನು ಕೊಡುವಾಗ ಕಾವೇರಿ ಜಲ ವಿವಾದದ ಬಗ್ಗೆ ಒಂದು ಸರಕಾರದ ಸ್ಪಷ್ಟ ನಿಲುವನ್ನು ಹೇಳಬೇಕಾದುದು ಅವರ ಕರ್ತವ್ಯವಾಗಿದೆ. ಆ ನಿಲುವನ್ನು ಅವರು ಈ ಸದನಕ್ಕೆ

ಹೇಳದಿದ್ದರೆ ಕರ್ತವ್ಯ ಲೋಪವನ್ನು ಮಾಡಿದ ಹಾಗೆ ಆಗುತ್ತದೆ. ಹಿಂದೆ ಬೆಳಗಾವಿ ಪ್ರದೇಶದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಜಾರಿಗೆ ತಂದಾಗ ಈಗಿನ ಮಹಾರಾಷ್ಟ್ರದ ಮುಖ್ಯ ಮಂತ್ರಿಯವರಾದ ಶರದ್ ಪವಾರ್‌ರವರು ಮತ್ತು ಇತರರು ಬೆಳಗಾವಿಯಲ್ಲಿ ಚಳುವಳಿಯನ್ನು ನಡೆಸಿದಾಗ ಅವರ ಕೂಟದ ಸಚಿವರೊಬ್ಬರು, ಈಗಲೂ ಏನು ಸಚಿವರಾಗಿದ್ದಾರೆ, ಅವರುಗಳ ಮೇಲೆ ಕರ್ನಾಟಕ ಸರಕಾರದವರು ಬಹಳ ತೀವ್ರವಾದ ಮೊಕದ್ದಮೆಗಳನ್ನು ಹಾಕಿದ್ದರು. ಇವೊತ್ತು ಆ ಮೊಕದ್ದಮೆಗಳನ್ನೆಲ್ಲಾ ಕರ್ನಾಟಕ ಸರಕಾರವು ಹಿಂದಕ್ಕೆ ತೆಗೆದುಕೊಂಡಿದೆ. ಇದು ನಿಜವೇ? ಇದಕ್ಕೆ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಉತ್ತರ ಕೊಡಬೇಕು. ಯಾವ ಕಾರಣಕ್ಕಾಗಿ ಹಿಂತೆಗೆದು ಕೊಂಡಿದ್ದೀರಿ? ನಿಮಗೂ ಅವರಿಗೂ ಅದಂಥ ಒಪ್ಪಂದಗಳೇನು? ಈ ಬಗ್ಗೆ ತಾವು ಉತ್ತರ ಹೇಳಬೇಕೆಂದು ನೇರವಾಗಿ ತಮ್ಮನ್ನು ಕೇಳುತ್ತಿದ್ದೇನೆ. ಅವೊತ್ತು ದೊಡ್ಡ ದಾಂಧಲೆಯಾಗಿ ಅವರ ಮೇಲೆ ಹಾಕಿರತಕ್ಕಂಥ ಮೊಕದ್ದಮೆಗಳು ಸಾಧಾರಣವಾದುವುಗಳಲ್ಲ. ಭಾರಿ ಪ್ರಮಾಣದ ಮೊಕದ್ದಮೆಗಳನ್ನು ಹಾಕಿದ್ದೀರಿ. ಹೀಗಿರುವಾಗ ಇದ್ದಕ್ಕಿದ್ದ ಹಾಗೆ ಆ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳಬೇಕಾದರೆ ನಿಮಗೂ ಅವರಿಗೂ ಇದ್ದ ಒಪ್ಪಂದಗಳೇನು? ಈ ಬಗ್ಗೆ ಯಾಕೆ ತಾವುಗಳು ಮೌನವಾಗಿದ್ದೀರಿ? ಅದಕ್ಕೆ ತಾವುಗಳು ಉತ್ತರವನ್ನು ಕೊಡಬೇಕು. ಈಗ ತಾವುಗಳು ಮೌನವಾಗಿಯೇ ಕುಳಿತಿದ್ದೀರಿ......

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಅಧ್ಯಕ್ಷರೇ, ಗೃಹ ಇಲಾಖೆಯ ಮುಖಾಂತರ ಆ ಕೆಲಸ ಕಾರ್ಯಗಳು ನಡೆದಿವೆ. ಆದ್ದರಿಂದ ಸಧ್ಯದಲ್ಲಿ ನನ್ನ ಹತ್ತಿರ ಅದರ ಬಗ್ಗೆ ವಿವರಣೆಗಳು ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಅದು ಜಗಜ್ಜಾಹೀರಾಗಿ ಪತ್ರಿಕೆಗಳಲ್ಲಿ ಬಂದಿದೆ. ಸರಕಾರದವರು ಅವರ ಮೇಲೆ ಹಾಕಿರತಕ್ಕಂಥ ಎಲ್ಲಾ ಮೊಕದ್ದಮೆಗಳನ್ನು ಹಿಂತೆಗೆದುಕೊಂಡಿದ್ದಾರೆ, ಮಹಾರಾಷ್ಟ್ರ ಏಕೀಕರಣ ಸದಸ್ಯರ ಜೊತೆಯಲ್ಲಿ ಇವರು ನೆಂಟಸ್ತನ ಮಾಡುತ್ತಿದ್ದಾರೆ, ಆ ನೆಂಟಸ್ತನದ ಬಳುವಳಿಯಾಗಿ, ಮಹಾರಾಷ್ಟ್ರದ ಮುಖ್ಯ ಮಂತ್ರಿಯವರ ಒತ್ತಡಕ್ಕಾಗಿ ಇದನ್ನು ಹಿಂತೆಗೆದುಕೊಂಡಿದ್ದಾರೆ ಎನ್ನುವುದು ಪತ್ರಿಕೆಗಳಲ್ಲಿ ಬಂದಿದೆ. ಈ ರೀತಿಯಾಗಿ ಮಾಡಿದರೆ ಕರ್ನಾಟಕ ಸರಕಾರವು ಕನ್ನಡಿಗರಿಗೆ ಮಾಡಿದಂಥ ಮಹಾದ್ರೋಹ ಎಂದು ಪರಿಗಣಿಸಬೇಕಾಗುತ್ತದೆ. ಈ ಮಾತನ್ನು ನಾನು ಅತ್ಯಂತ ನೋವಿನಿಂದ ಹೇಳುತ್ತಾ ಇದ್ದೇನೆ. ಮಾನ್ಯ ಅಧ್ಯಕ್ಷರೇ, ಇನ್ನು ಗಡಿನಾಡು ಅಭಿವೃದ್ಧಿಗೆ ಸರಕಾರದವರು ಕೊಟ್ಟಿರತಕ್ಕಂಥ ಹಣವು ಬಹಳ ಅತ್ಯಲ್ಪ. ೧೫ ಕೋಟಿ ರೂ. ಗಳನ್ನು ಇದಕ್ಕಾಗಿ ಇಟ್ಟಿದ್ದಾರೆ. ಈ ಗಡಿನಾಡು ಪ್ರದೇಶಗಳಲ್ಲಿ ಕನಿಷ್ಟ ೫೬–೫೭ ಗಡಿ ಪ್ರದೇಶಗಳು ಬರುತ್ತವೆ. ಇವುಗಳಿಗಾಗಿ ಕಡಿಮೆ ಅಂದರೆ ಒಂದು ನೂರು ಕೋಟಿ ರೂ. ಗಳನ್ನು ಸರಕಾರದವರು ಮೀಸಲು ಇಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಹಾಗೆಯೇ ಹೊರನಾಡು ಕನ್ನಡಿಗರ ಬಗ್ಗೆ ಸರಕಾರದವರು ಒಂದು ಯೋಜನೆಯನ್ನು ತಯಾರು ಮಾಡಿದರು ಈಗ ಸೊಲ್ಲಾಪುರ, ಅಕ್ಕಲಕೋಟೆ, ತಾಳವಾಡಿ, ಕಾಸರಗೋಡು ಮತ್ತು ಹೊಸೂರು ಈ ತರಹದ ಅನೇಕ ಪ್ರದೇಶಗಳು ಹೊರಗಡೆಯೇ ಉಳಿದಿವೆ. ಅವರನ್ನು ಅಲ್ಲಿನ ಸರಕಾರದವರು ಕೂಡ ಕಡೆಗಣಿಸಿದ್ದಾರೆ, ನಾವು ಕೂಡ ಕಡೆಗಾಣಿಸಿದ್ದೇವೆ. ಈ ಮಧ್ಯೆ ಆ ಜನರ ಗೋಳನ್ನು, ಕಣ್ಣೀರ ಕತೆಯನ್ನು ಸರಿಪಡಿಸುವುದಕ್ಕೆ ಸಾಂಸ್ಕೃತಿಕವಾಗಿ ಹೊರನಾಡ ಕನ್ನಡಿಗರ ಸಾಹಿತ್ಯ ಸಂಘಗಳು, ಕನ್ನಡ ಸಂಘಗಳು, ಕಲಾ ಸಂಘಗಳು ತಮ್ಮ ಬೆಳವಣಿಗೆಯ ಮೂಲಕ ಕೆಲಸ ಮಾಡುತ್ತಿವೆ. ಅವುಗಳಿಗೆ ನಮ್ಮ ಸರಕಾರದವರು ದೇಣಿಗೆಯನ್ನು ಕೊಡತಕ್ಕಂಥ ಒಂದು ಹೊಸ ಯೋಜನೆಯನ್ನು ಪ್ರಾರಂಭ ಮಾಡುವುದಕ್ಕೆ ೫೦ ಕೋಟಿ ರೂ. ಗಳನ್ನಾದರೂ ಹೊರನಾಡ ಕನ್ನಡಿಗರಿಗಾಗಿಯೇ ಮೀಸಲಿಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಹೊರನಾಡ ಕನ್ನಡಿಗರಿಗೆ ಸಿಗಬೇಕಾದ ರಕ್ಷಣೆಯು ಅಲ್ಲಿ ಅವರಿಗೆ ಸಿಗುತ್ತಾ ಇಲ್ಲ. ನಮ್ಮಲ್ಲಿ ಎಲ್ಲಾ ಭಾಷೆಗಳವರಿಗೆ ಜಮಖಾನ ಹಾಸಿದ್ದೇವೆ, ಆದರೆ ನಮ್ಮ ಕನ್ನಡಿಗರಿಗೆ ಹೊರನಾಡುಗಳಲ್ಲಿ ಯಾವುದೇ ರಕ್ಷಣೆ ಇಲ್ಲ. ಅಲ್ಲಿರುವ ಕನ್ನಡ ಶಾಲೆಗಳನ್ನೆಲ್ಲಾ ರದ್ದು ಮಾಡಿದ್ದಾರೆ. ಕನ್ನಡ ಕಲಿತವರಿಗೆ ಉದ್ಯೋಗಗಳು ಇಲ್ಲ. ಕನ್ನಡಿಗರನ್ನು ಅಲ್ಲಿ ಎರಡನೆಯ ದರ್ಜೆಯ ಪ್ರಜೆಗಳನ್ನಾಗಿ ಕಾಣುತ್ತಾ ಇದ್ದಾರೆ. ಆದ್ದರಿಂದ ಸರಕಾರದವರು ಹೊರನಾಡ ಕನ್ನಡಿಗರ ಪರಿಸ್ಥಿತಿಯ ಬಗ್ಗೆ ಅಧ್ಯಯನ ಮಾಡುವುದಕ್ಕೆ ಈ ಸದನದ ಒಂದು ಸಮಿತಿಯನ್ನು ನೇಮಕ ಮಾಡಿ ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಆ ಸಮಿತಿಯವರು ಕೊಡುವ ವರದಿಯನ್ನು ತರಿಸಿಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ರಾಜ್ಯದಲ್ಲಿ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಾರವನ್ನು ಎಷ್ಟು ಜನರು ಒಪ್ಪುತ್ತಾರೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ; ಪಾನನಿರೋಧವನ್ನು ಜಾರಿಗೆ ತರುವುದರಿಂದ ಸರಕಾರದ ಬೊಕ್ಕಸಕ್ಕೆ ಕೆಲವು ಪ್ರಮಾಣದಲ್ಲಿ

ನಷ್ಟವಾಗಬಹುದು. ಆದರೆ ಇದರಿಂದ ಉಳಿತಾಯ ಮತ್ತು ಪಾಪದ ಕೆಲಸದಿಂದ ಒಂದು ಪುಣ್ಯದ ಕೆಲಸಕ್ಕೆ ತಾವುಗಳು ಹೆಜ್ಜೆ ಇಟ್ಟ ಹಾಗೆ ಆಗುತ್ತದೆ. ಆದ್ದರಿಂದ ಪಾನನಿರೋಧವನ್ನು ಜಾರಿಗೆ ತರತಕ್ಕಂಥ ಒಂದು ದಿಟ್ಟ ನಿಲುವನ್ನು ನಿಮ್ಮ ಸರಕಾರವು ಪ್ರದರ್ಶನ ಮಾಡಿ ಈ ದೇಶದಲ್ಲಿ ಒಂದು ಆದರ್ಶವನ್ನು ಪಾಲನೆ ಮಾಡಿದ್ದಾರೆ ಎಂದು ನೀವು ಅನ್ನಿಸಿಕೊಳ್ಳಬೇಕು. ಇದೇ ಸಂದರ್ಭದಲ್ಲಿ ಹಿಂದೆ ಪಾನನಿರೋಧವನ್ನು ಜಾರಿಗೆ ತರಲಿಲ್ಲ ಎಂದು ಹೇಳಿ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಅಂದಿನ ಮುಖ್ಯ ಮಂತ್ರಿಯವರಾಗಿದ್ದ ನಿಜಲಿಂಗಪ್ಪನವರಿಗೆ ನಿಮ್ಮ ಮಂತ್ರಿ ಮಂಡಳಿಯಲ್ಲಿ ಇರುವುದಿಲ್ಲ ಎಂದು ಹೇಳಿ ಯಾರೇ ಒತ್ತಾಯ ಮಾಡಿದರೂ ಕೇಳದೆ ತಮ್ಮ ರಾಜೀನಾಮೆಯನ್ನು ಕೊಟ್ಟ ಉದಾಹರಣೆಯನ್ನು ನೆನಪಿಸಿಕೊಡುತ್ತಿದ್ದೇನೆ. ಈ ನಾಡನ್ನು ಕಟ್ಟಿದಂಥ ಒಬ್ಬ ಧೀರ ಮಹಿಳೆಯನ್ನು ನಾವಿಂದು ನೆನಪಿಸಿಕೊಳ್ಳಬೇಕು. ಅವರುಗಳು ಈ ನಾಡನ್ನು ಕಟ್ಟಿದಂಥ ಜನರು. ಅವರು ತೆಗೆದುಕೊಂಡ ಹಾಗೆ ನೀವೂ ಕೂಡ ದಿಟ್ಟ ನಿಲುವನ್ನು ತೆಗೆದುಕೊಂಡರೆ ಈ ಕರ್ನಾಟಕ ರಾಜ್ಯದ ಲಕ್ಷಾಂತರ ಮಹಿಳೆಯರ ತಾಳಿಯು ಉಳಿಯುತ್ತದೆ. ಲಕ್ಷಾಂತರ ಮಹಿಳೆಯರು ಕಣ್ಣೀರು ಸುರಿಸುವುದನ್ನು ತಪ್ಪಿಸಬಹುದು. ಲಕ್ಷಾಂತರ ಜನ ರೌಡಿಗಳ ಕಾಟವು ತಪ್ಪುತ್ತದೆ. ಲಕ್ಷಾಂತರ ಜನ ಮೋಸ ಹೋಗುವುದು ತಪ್ಪುತ್ತದೆ. ಭ್ರಷ್ಟಾಚಾರವೂ ತಪ್ಪುತ್ತದೆ. ಹೀಗೆ ಎಲ್ಲವೂ ನಿಲ್ಲಬೇಕಾದರೆ ಈ ಪಾನನಿರೋಧವನ್ನು ಜಾರಿಗೆ ತರತಕ್ಕಂಥ ಕ್ರಮವನ್ನು ತಾವುಗಳು ಕೈಗೊಳ್ಳಬೇಕೆಂದು ವಿನಮ್ರವಾಗಿ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ತಾವು ಬರುವುದಕ್ಕಿಂತ ಮುಂಚೆ ನಾನು ಕೆಲವು ವಿಚಾರಗಳನ್ನು ಹೇಳಿದ್ದೆ. ಮತ್ತೊಮ್ಮೆ ಹೇಳಬಯಸುತ್ತೇನೆ, ಇದು ತಮ್ಮ ಗಮನಕ್ಕೆ ಬಂದಿರಬಹುದು. ಈ ಸದನವನ್ನು ಇನ್ನೂ ೫-೬ ದಿವಸ ಮುಂದುವರೆಸುವುದಾದರೆ ನಾಡಿದ್ದು ಕುರಿತು ಮಾತನಾಡಿ. ನಮ್ಮ ಸ್ನೇಹಿತರುಗಳನ್ನು ಕರೆಸಬೇಕು. ಪ್ರಜಾತಂತ್ರದಲ್ಲಿ ಒಬ್ಬರಿಗೊಬ್ಬರಿಗೆ ಗೋವಲ ಇರುತ್ತದೆ. ಅವರೂ ಈ ಆಯವ್ಯಯದ ಚರ್ಚೆಯ ಸಂದರ್ಭದಲ್ಲಿ ಇಲ್ಲವೇ ಬೇರೆ ರೂಪದಲ್ಲಿಯಾದರೂ ಭಾಗವಹಿಸುವಂತಹ ಒಂದು ವ್ಯವಸ್ಥೆ ನಿರ್ಮಾಣ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಸರಕಾರ ವಿಫಲವಾದಾಗ, ಇವರು ಹಠಮಾರಿತನಕ್ಕೆ ಬಂದಾಗ ತಾವು ಒಂದಲ್ಲ ಹತ್ತು ಬಾರಿ ನಿಮ್ಮ ಕಾರ್ಯಾಲಯಕ್ಕೆ ಇಬ್ಬರನ್ನೂ ಕರೆದು ಅದನ್ನು ಸರಿಪಡಿಸತಕ್ಕಂತಹ ವ್ಯವಸ್ಥೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರ ಅನುಮತಿ ಕೋರಿ ಪ್ರಸ್ತಾಪಿಸಲಾದ ವಿಷಯ

ರಾಜ್ಯ ಜನತಾದಳ ಅಧ್ಯಕ್ಷರಾದ ಶ್ರೀ ಹೆಚ್. ಡಿ. ದೇವೇಗೌಡ ಎಂ. ಪಿ. ರವರು ಪತ್ರಿಕಾ ಗೋಷ್ಠಿಯಲ್ಲಿ ಸುಳ್ಳು ಹೇಳಿಕೆ ನೀಡಿರುವ ಬಗ್ಗೆ

† ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೆ, ನನ್ನ ಮೇಲೆ ಜನತಾ ಪಾರ್ಟಿಯ ಅಧ್ಯಕ್ಷರು ಸುಳ್ಳು ಹೇಳಿಕೆ ಕೊಟ್ಟಿದ್ದಾರೆ. ಅದರ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಡವೇ ? ನಿನ್ನೆ ಮೊನ್ನೆ ರಾಜ್ಯದ ಜನತಾ ಪಕ್ಷದ ಅಧ್ಯಕ್ಷರಾದ ಮಾನ್ಯ ದೇವೇಗೌಡರು ಒಂದು ಪತ್ರಿಕಾಗೋಷ್ಠಿ ಕರೆದು ಸಂಯುಕ್ತ ಕರ್ನಾಟಕಕ್ಕೆ ಒಂದು ಹೇಳಿಕೆ ಕೊಟ್ಟಿದ್ದಾರೆ. ಮತ್ತು ಅಲ್ಲಿ ಇದ್ದ ಅವರ ಅಭಿಮಾನಿಗಳು ಅವರೆಲ್ಲಾ ಸೇರಿ ಕೊಟ್ಟಿರುವ ಹೇಳಿಕೆಯಲ್ಲಿ ಮೂಡಿ ಬಂದಂತಹ ವಿಚಾರಗಳನ್ನು ೨ ಲೈನ್ ಓದಿ ನಂತರ ಇದರ ಬಗ್ಗೆ ಕ್ಲಾರಿಫೈ ಮಾಡುತ್ತೇನೆ. ಶಾಂತಿ ಗ್ರಾಮದಲ್ಲಿ ಪಂಚಾಯತಿಯ ಅಧ್ಯಕ್ಷರು ಉಪಾಧ್ಯಕ್ಷರ ಚುನಾವಣೆ ಏನು ನಡೆಯಿತು ಅದರ ಬಗ್ಗೆ ಮಾತನಾಡುತ್ತಾ ಹೀಗೆ ಹೇಳಿದ್ದಾರೆ. ಗಲಾಟೆಯಾಯಿತು, ಆದ್ದರಿಂದ ಕೂಗಾಡಿದರು ಕುರ್ಚಿಗಳನ್ನೆಲ್ಲಾ ಎಸೆದಾಡಿದರು. ತಹಸೀಲ್ದಾರರು ಬಂದರು, ಪೋಲೀಸರು ಬಂದರು. ತಹಸೀಲ್ದಾರರು ಹೊರಗೆ ಹೋದರು, ಅವರೊಡನೆ ಅವರ ಜೀಪಿನಲ್ಲಿ ಕಾಂಗ್ರೆಸ್‌ನ ೭ ಜನ ಸದಸ್ಯರೂ ಹೋದರು. ತಹಸೀಲ್ದಾರರು ಇತರರು ಬರುತ್ತಾರೆಂದು ೧ ಗಂಟೆ ಕಾದರೂ ಯಾರೂ ಬರಲಿಲ್ಲ. ಅನಂತರ ವಿಚಾರಿಸಿದಾಗ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯನ್ನು ಮುಂದೂಡಲಾಗಿದೆ ಎಂದು ನನಗೆ ತಿಳಿಸಲಾಯಿತೆಂದು ಎಂದು ಬಿಳಿಯಮ್ಮ ತಿಳಿಸಿದರು. ಇದೆಲ್ಲಾ ನಡೆಯುವಾಗ ಶಾಸಕ ಹನುಮೇಗೌಡ ಮತ್ತು ಅವರ ಮಗ ಪಂಚಾಯತಿ ಕಟ್ಟೆ ಬಳಿ ಇದ್ದರೆಂದು ಹೇಳಿದರು. ಇದು ಅವರ ಪತ್ರಿಕಾಗೋಷ್ಠಿಯಲ್ಲಿ ಮೂಡಿ ಬಂದಂತಹ ವಿಚಾರ ಗಲಾಟೆಯಾಗುತ್ತದೆಂದು ಪೋಲೀಸರಿಗೆ ಮುಂಚೆಯೇ ನಾನು ಹೇಳಿದ್ದೆ. ಅಡಿಷನಲ್ ಎಸ್.ಪಿ.

---

† ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.